# ಕಮಲ ಪಥ

RNI No.:KARKAN/2023/84034 | ಸಂಪುಟ : 01 | ಸಂಚಿಕೆ : 04 | ಜುಲೈ 2023 | ಬೆಂಗಳೂರು | ₹ 10/-








# ವಾರಂಟಿ ಇಲ್ಲದ ಗ್ಯಾರಂಟಿ ಯೋಜನೆ

# ಬಿಜೆಪಿ ಪ್ರತಿಭಟನೆ






ಪ್ರಧಾನಿ ಶ್ರೀ ನರೇಂದ್ರ ಮೋದಿಯವರಿಂದ ವಿಡಿಯೋ ಕಾನ್ಫರೆನ್ಸ್ ಮೂಲಕ ರಾಷ್ಟ್ರೀಯ ರೋಜ್‌ಗಾರ್ ಮೇಳದ ಅಡಿಯಲ್ಲಿ
70,000 ನೇಮಕಾತಿ ಪತ್ರಗಳ ವಿತರಣತೆ



ಪ್ರಧಾನಿ ಶ್ರೀ ನರೇಂದ್ರ ಮೋದಿಯವರಿಂದ ವೀಡಿಯೊ ಕಾನ್ಫರೆನ್ಸ್ ಮೂಲಕ ಶೃಂಗಸಭೆಯನ್ನುದ್ದೇಶಿಸಿ ಭಾಷಣ



ಪ್ರಧಾನಿ ಶ್ರೀ ನರೇಂದ್ರ ಮೋದಿ ಅವರಿಂದ ನ್ಯೂಯಾರ್ಕ್‌ನಲ್ಲಿರುವ ವಿಶ್ವಸಂಸ್ಥೆಯ ಪ್ರಧಾನ ಕಚೇರಿಯಲ್ಲಿ ಯೋಗ ದಿನಾಚರಣೆ ಕಾರ್ಯಕ್ರಮಕ್ಕೆ ಚಾಲನೆ

# ಸಾಮರಸ್ಯ ಕದಡುವ ಕಾಂಗ್ರೆಸ್ ಯೋಜನೆ, ದೇಶ ಒಗ್ಗೂಡಿಸುವ ಬಿಜೆಪಿ ಚಿಂತನೆ

ಇದು ನಾಡಿನ ಜನರ ದೌರ್ಭಾಗ್ಯವೆಂದು ಹೇಳಲೇ ಬೇಕಾಗಿದೆ. ಸರಕಾರದ ಯೋಚನೆಗಳು, ಯೋಜನೆಗಳು ಜನರನ್ನು ಒಗ್ಗೂಡಿಸುವುದಕ್ಕೆ ಪೂರಕವಾಗಿರಬೇಕು. ಅತ್ತ ಕೇಂದ್ರದ ಶ್ರೀ ನರೇಂದ್ರ ಮೋದಿಯವರ ನೇತೃತ್ವದ ಸರ್ಕಾರ ದೇಶದ ಜನತೆಯನ್ನು ಒಂದೇ ಕಾನೂನಿನಡಿ ತರುವುದಕ್ಕೆ ಅನುವಾಗುವಂತಹ **ಏಕರೂಪ ನಾಗರೀಕ ಸಂಹಿತೆ**ಯನ್ನು ಜಾರಿಗೆ ತರಲು ಯೋಚಿಸಿ ಮುನ್ನಡೆಯುತ್ತಿದ್ದರೆ, ಇತ್ತ ರಾಜ್ಯದಲ್ಲಿ ಅಧಿಕಾರದ ಹೊಣೆ ಹೊತ್ತ ಶ್ರೀ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರ ತನ್ನ ಯೋಜನೆಗಳಿಂದಲೇ ಜನರನ್ನು ಒಡೆಯುವ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದೆ.

ಯಾವುದೇ ಸರಕಾರಗಳು ಬಂದಾಗ ತಮ್ಮ ಸೈದ್ಧಾಂತಿಕ ನಿಲುವಿಗೆ ಅನುಗುಣವಾದ ಕೆಲವೊಂದಿಷ್ಟು ನಿರ್ಧಾರಗಳನ್ನು ತೆಗೆದುಕೊಳ್ಳುವುದು ಸ್ವಾಭಾವಿಕ. ಆದರೆ ಈ ರೀತಿ ನಿರ್ಧಾರಗಳನ್ನು ತೆಗೆದುಕೊಳ್ಳುವಾಗ ಹಿಂದಿನ ಸರ್ಕಾರಗಳ ನಿರ್ಧಾರಗಳ ಬಗ್ಗೆ ಪೂರ್ವಾಗ್ರಹ ಪೀಡಿತರಾಗಿರಬಾರದು. ತಮ್ಮ ವಿರೋಧಿ ಎನ್ನುವ ಒಂದೇ ಕಾರಣದಿಂದ ಹಿಂದಿನ ಸರ್ಕಾರಗಳು ತೆಗೆದುಕೊಂಡ ನಿರ್ಧಾರಗಳನ್ನು ವೃಥಾ ಕೈಬಿಡುವುದು ಖಂಡಿತಾ ಖಂಡನೀಯ. ಇಂದು ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಮಾಡುತ್ತಿರುವುದು ಇದನ್ನೇ. ಹಿಂದಿನ ಬಿಜೆಪಿ ಸರ್ಕಾರ ಜಾರಿಗೆ ತಂದಿದ್ದ ರೈತ, ಆಟೋ ಚಾಲಕರ ಮತ್ತು ಟ್ಯಾಕ್ಸಿ ಚಾಲಕರ ಮಕ್ಕಳಿಗೆ ನೆರವಾಗುವಂತಹ ವಿದ್ಯಾನಿಧಿ ಯೋಜನೆ, ಪ್ರತೀ ಜಿಲ್ಲೆಗಳಲ್ಲಿ ತೆರೆಯಬೇಕೆಂದಿದ್ದ ಗೋಶಾಲೆಗಳ ಸ್ಥಾಪನೆ, ನಮ್ಮ ಕ್ಲಿನಿಕ್ ಸೇರಿದಂತೆ ಹಲಾವರು ಯೋಜನೆಗಳನ್ನು ಕೈಬಿಟ್ಟಿದೆ, ದೇಶಕ್ಕಾಗಿ ಸೈನ್ಯಕ್ಕೆ ಸೇರುವ ಅವಕಾಶ ಕಲ್ಪಿಸುವ ಅಗ್ನಿವೀರ್ ಯೋಜನೆಯ ಬಗ್ಗೆಯೂ ವಿರೋಧಿ ನಿಲುವು ತಳೆದಿದೆ. ಈ ಎಲ್ಲಾ ಸಂಗತಿಗಳಲ್ಲಿ ಕಾಂಗ್ರೆಸ್‌ಗೆ ಜನಪರವಾದ ನಿರ್ಧಾರಗಳನ್ನು ತೆಗೆದುಕೊಳ್ಳುವುದಕ್ಕಿಂತ ಬಿಜೆಪಿಯ ನಿರ್ಧಾರಗಳನ್ನು ಕಡೆಗಣಿಸುವುದೇ ಆದ್ಯತೆ ಎನಿಸಿಬಿಟ್ಟಿದೆ.

ಇನ್ನು ಕಾಂಗ್ರೆಸ್ ಸರ್ಕಾರ ಜಾರಿಗೆ ತಂದಿರುವ ಗ್ಯಾರಂಟಿ ಯೋಜನೆಗಳು ಗೊಂದಲದ ಪರಾಕಾಷ್ಟೆಯ ಹಂತವನ್ನು ಮುಟ್ಟಿದೆ. ಸಾಧಕ ಭಾದಕಗಳನ್ನು ಪರಾಮರ್ಶಿಸದೆ ಜಾರಿಯಾಗುತ್ತಿರುವ ಗ್ಯಾರಂಟಿ ಯೋಜನೆಗಳು ಗೊಂದಲದ ಗೂಡಾಗಿದೆ. ತಾನೇ ತೆಗೆದುಕೊಂಡಿರುವ ನಿರ್ಧಾರಗಳನ್ನು ಜಾರಿಗೊಳಿಸಲಾಗದೆ ಪರಿತಪಿಸುತ್ತಿರುವ ಕಾಂಗ್ರೆಸ್ ಈಗ ತನ್ನ ವೈಫಲ್ಯಕ್ಕೆ ಕೇಂದ್ರ ಸರಕಾರವನ್ನು ದೂರುತ್ತಿರುವುದು ಅದರ ಪಲಾಯವಾನದ ಒಂದು ಮುಖವಷ್ಟೆ. ಇನ್ನು ಜೈನ ಸ್ವಾಮೀಜಿಯವರ ಕೊಲೆ, ಬಿಜೆಪಿ ಕಾರ್ಯಕರ್ತರ ಮೇಲಿನ ಹಲ್ಲೆ, ಸ್ವತಃ ಪೋಲೀಸರ ಮೇಲೆಯೇ ನಡೆಯುತ್ತಿರುವ ಹಲ್ಲೆಯಂತಹ ಕೃತ್ಯಗಳು ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ ಎಂಬುದಕ್ಕೆ ನಿದರ್ಶನಗಳು. ಕಾಂಗ್ರೆಸ್ ಸರಕಾರಗಳಿರುವಡೆ ಸಾಧು ಸಂತರಿಗೆ ರಕ್ಷಣೆ ಇರಲಾರದು ಎಂಬುದಕ್ಕೆ ಅಹಿಂಸಾ ತತ್ವವನ್ನು ಭೋಧಿಸುವ ಜೈನ ಮುನಿಗಳ ಅಮಾನುಷ ಹತ್ಯೆಯೇ ಸ್ಪಷ್ಟ ಸಾಕ್ಷಿ. ಈ ಹಿಂದೆ ಮಹಾರಾಷ್ಟ್ರದಲ್ಲಿ ಇಬ್ಬರು ಸನ್ಯಾಸಿಗಳನ್ನು ಹತ್ಯೆ ಮಾಡಿದ ಘಟನೆಯನ್ನು ಇಲ್ಲಿ ಸ್ಮರಿಸಬಹುದು.

## ಸಂಪಾದಕೀಯ

ಕೇಂದ್ರದ ಶ್ರೀ ನರೇಂದ್ರ ಮೋದಿಯವರ ಸರ್ಕಾರ 9 ವರ್ಷಗಳನ್ನು ಪೂರೈಸಿದೆ. ಐತಿಹಾಸಿಕ ನಿರ್ಧಾರಗಳನ್ನು ತೆಗೆದುಕೊಳ್ಳುವ ಮೂಲಕ ಜನರ ಭಾವನೆಗಳಿಗೆ ಸ್ಪಂದಿಸಿದೆ. ಇದರ ಜೊತೆಗೆ ಶ್ರೀ ಮೋದಿಯವರ ಕಾರ್ಯವೈಖರಿ ಅಂತರಾಷ್ಟ್ರೀಯ ಮಟ್ಟದಲ್ಲಿಯೂ ಭಾರತದ ಗೌರವವನ್ನು ಕಳೆದ 9 ವರ್ಷಗಳಲ್ಲಿ ಇಮ್ಮಡಿಗೊಳಿಸಿದೆ. ನಿಜಕ್ಕೂ ಪ್ರತಿಯೊಬ್ಬರೂ ಮೋದಿಯವರನ್ನು ಸಂಪೂರ್ಣವಾಗಿ ಅಭಿನಂದಿಸಲೇ ಬೇಕು.

ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ನಡೆದ ಬಿಜೆಪಿ ಕಾರ್ಯಕರ್ತರ ಸಮಾವೇಶಗಳು ಯಶ ಕಂಡಿವೆ. ಏಳು ತಂಡಗಳಲ್ಲಿ ಇಡೀ ರಾಜ್ಯದಲ್ಲಿ ನಡೆಸಿದ ಪ್ರಮುಖ ನಾಯಕರ ತಂಡಗಳ ಪ್ರವಾಸದಿಂದ ಸಂಘಟನಾತ್ಮಕ ಚಟುಟಿಕೆಗಳಿಗೆ ವೇಗ ಸಿಕ್ಕಿದೆ. ಕಾಯಕರ್ತರಲ್ಲಿ ಬರಲಿರುವ ಲೋಕಸಭಾ ಚುನಾವಣೆಯ ಬಗ್ಗೆ ಆತ್ಮವಿಶ್ವಾಸ ಹೆಚ್ಚಾಗುತ್ತಿದೆ.

ಬರುವ ತಿಂಗಳುಗಳು ಬಿಜೆಪಿ ಕಾರ್ಯಕರ್ತರಿಗೆ ಸವಾಲಿನ ದಿನಗಳಾಗಲಿವೆ. ಒಂದೆಡೆ ಸ್ವಹಿತಾಸಕ್ತಿಗಾಗಿ ರಾಜ್ಯದ ಹಿತವನ್ನೂ ಕಡೆಗಣಿಸುವ ಹಂತಕ್ಕೆ ತಲುಪಿರುವ ಕಾಂಗ್ರೆಸ್‌ನ ನಿಲುವುಗಳ ಬಗ್ಗೆ ಜನಜಾಗೃತಿ ಮೂಡಿಸಿ ಸಂಘಟನಾತ್ಮಕ ಶಕ್ತಿಯನ್ನು ಹೆಚ್ಚಿಸಬೇಕಾದ ಹೊಣೆಗಾರಿಕೆ ಬಿಜೆಪಿ ಕಾರ್ಯಕರ್ತರ ಮೇಲೆ ಇದೆ.

ಸೋಲುಗಳಿಗೆಂದಿಗೂ ಕುಗ್ಗದ, ಸವಾಲುಗಳಿಗೆಂದಿಗೂ ಜಗ್ಗದ ಬಿಜೆಪಿ ಕಾರ್ಯಕರ್ತನಿಗೆ ಈ ತೆರನಾದ ಹಲವು ಸವಾಲುಗಳನ್ನು ಮೆಟ್ಟಿ ನಿಂತ ಅನುಭವವಿದೆ. ಶ್ರೇಷ್ಠ ಸೈದ್ಧಾಂತಿಕ ವಿಚಾರದೊಂದಿಗೆ, ಸಮರ್ಥ ನಾಯಕತ್ವದಡಿಯಲ್ಲಿ ಪ್ರತೀ ಬಿಜೆಪಿ ಕಾರ್ಯಕರ್ತನೂ ಬಿಜೆಪಿಯನ್ನು ಗುರಿ ಮುಟ್ಟಿಸಿಯೇ ಮುಟ್ಟಿಸುತ್ತಾನೆ. ಇದಕ್ಕೆ ಬಿಜೆಪಿಯ ಇತಿಹಾಸವೇ ಸ್ಪಷ್ಟ ಸಾಕ್ಷಿ.

**(ಬಿದರೆ ಪ್ರಕಾಶ್)**
ಸಂಪಾದಕರು

# ಕಮಲ ಪಥ

**ಪ್ರಕಾಶಕರು**
ಶ್ರೀ ಹೆಚ್.ಎಸ್. ಗೋಪಿನಾಥ್


**ಸಂಪಾದಕರು**
ಶ್ರೀ ಬಿದರೆ ಪ್ರಕಾಶ್

## ಸುಭಾಷಿತ



'ಧರ್ಮ ಹಾಗೂ ಜೀವನ ಬೇರೆಯಲ್ಲ.
ಸನ್ಯಾಸತ್ವವನ್ನು ಸ್ವೀಕರಿಸುವುದೆಂದರೆ
ಜೀವನವನ್ನೇ ಬಿಟ್ಟಂತೆ ಅಲ್ಲ.
ನಾನು ಎಂಬ ಸ್ವಾರ್ಥದ ಬದಲಿಗೆ
ದೇಶ, ಕುಟುಂಬ ಎಂದು ಎಲ್ಲರೂ ಒಟ್ಟಾಗಿ
ದುಡಿಯುವುದೇ ನಿಜವಾದ ಸ್ಫೂರ್ತಿಯಾಗಿದೆ,
ಮಾನವೀಯತೆಯಿಂದ ಮಾಡುವ
ಕಾರ್ಯಗಳನ್ನು ಮಾಡಿದರೆ
ದೇವರ ಕಾರ್ಯಕ್ಕೆ ಸಮ'

**– ಲೋಕಮಾನ್ಯ ಬಾಲಗಂಗಾಧರ ತಿಲಕ್**



**ಕಮಲ ಪಥ ಪತ್ರಿಕೆಗಾಗಿ ಸಂಪರ್ಕಿಸಿ :**

ಅಜಿತ್‌ಶೆಟ್ಟಿ ಹೆರಂಜೆ 97430 91999
ಪದ್ಮಾವತಿ ಜೋಷಿ : 95380 20388
email : bjpkamalapatha@gmail.com

#7/6, 4ನೇ ತಿರುವು, ಸಿ.ಸಿ. ರಸ್ತೆ,
ಸರ್ವಜ್ಞನಗರ, ಕಾಕ್ಸ್ ಟೌನ್,
ಬೆಂಗಳೂರು 560 005

## ಈ ಸಂಚಿಕೆಯಲ್ಲಿ



**08 ಅಮೇರಿಕ ಸದನದಲ್ಲಿ ಪ್ರಧಾನಿ ಶ್ರೀ ನರೇಂದ್ರ ಮೋದಿ**



**ಭಾರತದ ಘನತೆ ಹೆಚ್ಚಿಸಿದ ಪ್ರಧಾನಿ ಶ್ರೀ ಮೋದಿಯವರ ಪ್ರವಾಸ** 17



**ಏಕರೂಪ ನೀತಿ ಸಂಹಿತೆ ಮತ್ತು ರಾಜಕಾರಣ** 20



**ಕೃಷಿ ಕ್ಷೇತ್ರದಲ್ಲಿ ಅದ್ಭುತ ಸಾಧನೆ** 27



**ಕಂಡಿಶನ್ ರಹಿತವಾಗಿ ಗ್ಯಾರಂಟಿ ಯೋಜನೆಗಳನ್ನು ಜಾರಿ ಆಗ್ರಹಿಸಿ ಬಿಜೆಪಿ ವತಿಯಿಂದ ಪ್ರತಿಭಟನೆ** 35

- **ದೀವಟಿಗೆ :** ಪಿಂಗಾಳಿ ವೆಂಕಯ್ಯ ....................05
- ಸೈಕಲ್ ಮೇಲೆ ಜೋಶಿಯವರೊಂದಿಗೆ .................... 06
- **ಮೆಲುಕು:** ಮಹಾಭಾರತದ ನಕುಲ ಸಹದೇವರು, ಬಿಜೆಪಿಯ ಕಾರ್ಯಕರ್ತರು ...07
- ಬೂತ್‌ಗಳಲ್ಲಿ ಸಂಘರ್ಷದ ಅವಶ್ಯಕತೆಯಿಲ್ಲ – ಸೇವೆಯ ಅವಶ್ಯಕತೆ ಇದೆ .........12
- ಸಮಾನ ನಾಗರಿಕ ಸಂಹಿತೆ ಅಸಲಿಯತ್ತೇನು? ....................22
- 9 ವರ್ಷ ಮೋದಿ ಸರ್ಕಾರದ ಸಂಭ್ರಮಕ್ಕೆ ಜಿಲ್ಲಾ ಸಮಾವೇಶ ....................24
- ಸುರಿಯುವ ಮಳೆಯಲ್ಲೂ ತಮ್ಮ ನಾಯಕನಿಗೆ ಶ್ರದ್ಧಾಂಜಲಿ ....................32
- ಕರ್ನಾಟಕ ಕೇಸರಿ ದಿ. ಜಗನ್ನಾಥ ರಾವ್ ಜೋಶಿ – ಪುಸ್ತಕ ಬಿಡುಗಡೆ ಸಮಾರಂಭ ..33
- ಶಿಕ್ಷಣ ತಜ್ಞ ಡಾ. ಶ್ಯಾಮಪ್ರಸಾದ್ ಮುಖರ್ಜಿ ....................37
- **ಹಿರಿಯ ಕಾರ್ಯಕರ್ತರ ಪರಿಚಯ ಮಾಲೆ :** ಡಾ. ವಿ.ಎಸ್. ಆಚಾರ್ಯ ........39
- **ಮನ್ ಕಿ ಬಾತ್** – ಭಾರತ ಪ್ರಜಾಪ್ರಭುತ್ವದ ತಾಯಿ ... ....................42

ದೀವಟಿಗೆ

# ಪಿಂಗಾಳಿ ವೆಂಕಯ್ಯ



(02 ಆಗಸ್ಟ್ 1876 – 04 ಜುಲೈ 1963)

ಗಿರೀಶ್ ವಿಠ್ಠಲ ಬಡಿಗೇರ

ಪ್ರತಿ ದೇಶಕ್ಕೆ ರಾಷ್ಟ್ರಧ್ವಜ ಆ ದೇಶದ ಅಸ್ಮಿತೆಯ ಪ್ರತೀಕ. ಭೌಗೋಳಿಕವಾಗಿ ದೇಶಕ್ಕೆ ನಾವು ಎಷ್ಟು ಗೌರವವನ್ನು ನೀಡುತ್ತೇವೆಯೋ ಅದಕ್ಕಿಂತ ಹೆಚ್ಚಿನ ಗೌರವವನ್ನು ನಾವು ನಮ್ಮ ದೇಶದ ಸಂಕೇತವಾಗಿ ರಾಷ್ಟ್ರಧ್ವಜಕ್ಕೆ ನೀಡುತ್ತೇವೆ. ಈ ಧ್ವಜಕ್ಕಾಗಿ ಎಷ್ಟೋ ಜನ ತಮ್ಮ ಪ್ರಾಣಾರ್ಪಣೆ ಮಾಡಿ ಹೆಸರಾಗಿದ್ದಾರೆ. ಧ್ವಜ ಅಂದರೆ ಅದೊಂದು ವರ್ಣಮಿಶ್ರಿತ ಅರಿವೆಯಲ್ಲ ಬದಲಾಗಿ ನಮ್ಮ ದೇಶದ ಹೆಮ್ಮೆಯ ಹಿರಿಮೆ, ಗರಿಮೆ.

ಇಂತಹ ರಾಷ್ಟ್ರಧ್ವಜವನ್ನು ನಮಗೆ ನೀಡಿದವರು ಪಿಂಗಾಳಿ ವೆಂಕಯ್ಯ. ಅವರನ್ನು ಪತ್ತಿ ವೆಂಕಯ್ಯ ಎಂದೂ ಸಂಬೋಧಿಸುತ್ತಾರೆ. ಪಿಂಗಲಿ ಅವರು ಆಂಧ್ರಪ್ರದೇಶದ ಭಟ್ಲಪೆನುಮಾರು ಗ್ರಾಮದಲ್ಲಿ 2-8-1876 ರಂದು ಜನಿಸಿದರು. ತಂದೆ ಹನುಮಂತರಾಯಡು, ತಾಯಿ ವೆಂಕಟ್ರತನಮ್ಮ. ಪಿಂಗಲಿ ವೆಂಕಯ್ಯ ಕುಟುಂಬವು ಗೌರವಾನ್ವಿತ ತೆಲುಗು ಬ್ರಾಹ್ಮಣ ಕುಟುಂಬವಾಗಿತ್ತು.

ಅವರು ಅಂದಿನ ಮದ್ರಾಸ್‌ನಲ್ಲಿ ಪ್ರೌಢಶಾಲಾ ಶಿಕ್ಷಣವನ್ನು ಪೂರ್ಣಗೊಳಿಸಿ ನಂತರ ಕೇಂಬ್ರಿಡ್ಜ್ ವಿಶ್ವವಿದ್ಯಾಲಯದಿಂದ ಪದವಿ ಪಡೆಯಲು ಇಂಗ್ಲೆಂಡ್‌ಗೆ ತೆರಳಿದರು. ವಿದ್ಯಾರ್ಥಿಯಾಗಿ, ಅವರು ಬಹುಶ್ರುತರಾಗಿ ಬೆಳೆದರು. ಅವರು ಭೂವಿಜ್ಞಾನ, ಶಿಕ್ಷಣ, ಕೃಷಿ ಮತ್ತು ಭಾಷೆಗಳಲ್ಲಿ ನಿರ್ದಿಷ್ಟ ಆಸಕ್ತಿಯನ್ನು ಹೊಂದಿದ್ದರು.

ಆಂಗ್ಲೋ ಬೋಯರ್ ಯುದ್ಧದ ಸಮಯದಲ್ಲಿ ಅವರು ದಕ್ಷಿಣ ಆಫ್ರಿಕಾದಲ್ಲಿ ತಂಗಿದ್ದಾಗ, ವೆಂಕಯ್ಯ ಅವರು ಬ್ರಿಟಿಷ್ ಸೈನ್ಯದ ಸೈನಿಕರಾಗಿ ಸೇವೆ ಸಲ್ಲಿಸಿದರು. ಇದೇ ಅವಧಿಯಲ್ಲಿ ಅವರು ಮೊದಲ ಬಾರಿಗೆ ಮಹಾತ್ಮ ಗಾಂಧಿಯವರನ್ನು ಭೇಟಿಯಾದರು ಮತ್ತು ಅವರೊಂದಿಗೆ 50 ವರ್ಷಗಳಿಗೂ ಹೆಚ್ಚು ಕಾಲ ಬಾಂಧವ್ಯವನ್ನು ಬೆಳೆಸಿಕೊಂಡರು. ವೆಂಕಯ್ಯ ಅವರು ಗಾಂಧೀಜಿಗೆ ಅತ್ಯಂತ ನಿಷ್ಠರಾಗಿದ್ದರು ಮತ್ತು ಹೆಚ್ಚು ಬದ್ಧರಾಗಿದ್ದರು ಮತ್ತು ಗಾಂಧಿ ತತ್ವಗಳ ದೃಢ ನಂಬಿಕೆಯುಳ್ಳವರಾಗಿದ್ದರು .

ವೆಂಕಯ್ಯರು ವಿದೇಶ ವಿದ್ಯಾಭ್ಯಾಸ ಮುಗಿಸಿ ಭಾರತಕ್ಕೆ ಹಿಂದಿರುಗಿ ಭಾರತೀಯ ರೈಲ್ವೆ ಸಿಬ್ಬಂದಿಯಾಗಿ ಉದ್ಯೋಗ ಪ್ರಾರಂಭಿಸಿದರು. ನಂತರ ಸರ್ಕಾರಿ ಜೀತಗಾರರಾಗಿ ಬಳ್ಳಾರಿಯಲ್ಲಿ ಕೆಲ ಕಾಲ ಕೆಲಸ ಮಾಡಿದರು. ಇವರ ಅಪ್ಪಟ ದೇಶಭಕ್ತಿ ಇವರಿಗೆ ಒಂದೇ ಸ್ಥಳದಲ್ಲಿ ಕೆಲಸ ಮಾಡಲು ಬಿಡಲಿಲ್ಲ. ನೂತನವಾಗಿ ಏನನ್ನಾದರೂ ಸಾಧಿಸುವ ಅವರ ಛಲ ಲಾಹೋರಿನ ಆಂಗ್ಲೋ ವೈದಿಕ ಕಲಾ ಶಾಲೆಯಲ್ಲಿ ಇತಿಹಾಸ, ಸಂಸ್ಕೃತ ಮತ್ತು ಇತರೆ ವಿಷಯಗಳಲ್ಲಿ ಸಂಶೋಧನೆ ಜೊತೆಗೆ ತಮ್ಮ ಅಚ್ಚುಮೆಚ್ಚಿನ ಭೂವಿಜ್ಞಾನ ಕ್ಷೇತ್ರದಲ್ಲಿ ಪದವಿ ಪಡೆದುಕೊಳ್ಳುವಂತೆ ಮಾಡಿತು.

ನಮ್ಮ ರಾಷ್ಟ್ರಧ್ವಜದ ಜನನದ ಹಿಂದಿನ ರೋಚಕ ಕಥೆ ನಾವು ಕೇಳಲೇ ಬೇಕು. ದಕ್ಷಿಣ ಆಫ್ರಿಕಾದಲ್ಲಿ ಬ್ರಿಟಿಷ್ ಸೈನ್ಯದಲ್ಲಿ ಸೇವೆ ಸಲ್ಲಿಸುತ್ತಿದ್ದಾಗ ಒಂದು ಘಟನೆ ವೆಂಕಯ್ಯ ಅವರ ಮನಸ್ಸಿನಲ್ಲಿ ಛಾಪು ಮೂಡಿಸಿತು. ಬ್ರಿಟನ್ನಿನ ರಾಷ್ಟ್ರೀಯ ಧ್ವಜವಾದ ಯೂನಿಯನ್ ಜ್ಯಾಕ್‌ಗೆ ವಂದನೆ ಸಲ್ಲಿಸಲು ಸೈನಿಕರನ್ನು ಕೇಳಲಾಯಿತು. ಆ ಸಮಯದಲ್ಲಿ ಪಿಂಗಳಿಯವರು ಧ್ವಜವಂದನೆ ಮಾಡಿದರೂ, ಅವರ ದೇಶಭಕ್ತಿಯ ಭಾವನೆಗಳು ತೀವ್ರವಾಗಿ ಘಾಸಿಗೊಂಡವು ಮತ್ತು ಏನಾದರೂ ಮಾಡಬೇಕೆಂದು ಅವರು ನಿರ್ಧರಿಸಿದರು. ಈ ಘಟನೆ ಮತ್ತು ಭಾರತದ ಸ್ವಾತಂತ್ರ್ಯಕ್ಕಾಗಿ ಗಾಂಧಿಯವರ ಹೋರಾಟವು ವೆಂಕಯ್ಯನವರನ್ನು ಸ್ವಾತಂತ್ರ್ಯ ಹೋರಾಟಗಾರನನ್ನಾಗಿ ಮಾಡಿತು.

ವೆಂಕಯ್ಯನವರ ರಾಷ್ಟ್ರಧ್ವಜದ ಉತ್ಸುಕತೆ ಇಡೀ ರಾಷ್ಟ್ರವನ್ನು ಒಂದಾಗಿ ಬಂಧಿಸುವ ಮತ್ತು ಸ್ವತಂತ್ರ ಭಾರತದ ರಾಷ್ಟ್ರೀಯ ಧ್ವಜವಾಗಿ ಅಳವಡಿಸಿಕೊಳ್ಳಬಹುದಾದ ಧ್ವಜಗಳನ್ನು ವಿನ್ಯಾಸಗೊಳಿಸಲು ತಮ್ಮ ಸಮಯವನ್ನು ವಿನಿಯೋಗಿಸುವಂತೆ ಮಾಡಿತು.

1916ರಲ್ಲಿ, ಅವರು ಧ್ವಜಗಳ ಕುರಿತು ಕಿರುಪುಸ್ತಕವನ್ನು ಪ್ರಕಟಿಸಿದರು. ಈ ಕಿರುಪುಸ್ತಕವನ್ನು 'ಭಾರತಕ್ಕಾಗಿ ರಾಷ್ಟ್ರೀಯ ಧ್ವಜ' ಎಂದು ಹೆಸರಿಸಲಾಯಿತು. ಇದು ಇಪ್ಪತ್ತನಾಲ್ಕು ವಿನ್ಯಾಸದ ಧ್ವಜಗಳನ್ನು ಒಳಗೊಂಡಿತ್ತು. ನಂತರ, ಅವರು ವಿಜಯವಾಡದಲ್ಲಿ ಗಾಂಧಿಯನ್ನು ಭೇಟಿಯಾದಾಗ, ಅವರು ಪುಸ್ತಕವನ್ನು ತೋರಿಸಿದರು. ಗಾಂಧಿಯವರು ವಿನ್ಯಾಸವನ್ನು ನೋಡಿ ಸಂತೋಷಪಟ್ಟರು ಮತ್ತು ರಾಷ್ಟ್ರಧ್ವಜದ ಅಗತ್ಯವನ್ನು ಒಪ್ಪಿಕೊಂಡರು, ಆದ್ದರಿಂದ ಅವರು 1921 ರಲ್ಲಿ ವಿಜಯವಾಡದಲ್ಲಿ ನಡೆದ ರಾಷ್ಟ್ರೀಯ ಕಾಂಗ್ರೆಸ್ ಸಭೆಯಲ್ಲಿ ಹೊಸದನ್ನು ವಿನ್ಯಾಸಗೊಳಿಸಲು ವೆಂಕಯ್ಯ ಅವರನ್ನು ಕೇಳಿದರು.

ಆರಂಭದಲ್ಲಿ, ಪಿಂಗಳಿ ವೆಂಕಯ್ಯ ವಿನ್ಯಾಸ ಮಾಡಿದ ಧ್ವಜವು ಕೇಸರಿ ಮತ್ತು ಹಸಿರು ಬಣ್ಣಗಳನ್ನು ಮಾತ್ರ ಒಳಗೊಂಡಿತ್ತು; ಆದಾಗ್ಯೂ, ನಂತರ ಅದನ್ನು ಮರುವಿನ್ಯಾಸಗೊಳಿಸಲಾಯಿತು ಮತ್ತು ಮೂರನೇ ಬಣ್ಣ, ಬಿಳಿ, ನೂಲುವ ಚಕ್ರ (ಧರ್ಮ ಚಕ್ರ) ಜೊತೆಗೆ ಮಧ್ಯದಲ್ಲಿ ಪರಿಚಯಿಸಲಾಯಿತು. ಅಂತಿಮವಾಗಿ, 1931 ರಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಈ ಧ್ವಜವನ್ನು ನಮ್ಮ ರಾಷ್ಟ್ರದ ಧ್ವಜವಾಗಿ ಅಧಿಕೃತವಾಗಿ ಅಂಗೀಕರಿಸಿತು.

ದುರಾದೃಷ್ಟವಶಾತ್ ವೆಂಕಯ್ಯನವರು ಜುಲೈ 4, 1963ರಂದು ನಿಧನರಾದರು. 2009 ರಲ್ಲಿ ಇವರಿಗೆ ಗೌರವಾರ್ಥವಾಗಿ ಅಂಚೆ ಚೀಟಿಯನ್ನು ಬಿಡುಗಡೆ ಮಾಡಲಾಯಿತು ಮತ್ತು 2014 ರಲ್ಲಿ ಆಲ್ ಇಂಡಿಯಾ ರೇಡಿಯೋದ ವಿಜಯವಾಡ ಆಕಾಶವಾಣಿ ಕೇಂದ್ರಕ್ಕೆ ಅವರ ಹೆಸರನ್ನು ಇಡಲಾಗಿದೆ.

# ಸೈಕಲ್ ಮೇಲೆ ಜೋಶಿಯವರೊಂದಿಗೆ . . .

ರಾಮಚಂದ್ರ ಗೌಡರು
ಮಾಜಿ ವಿಧಾನಪರಿಷತ್ ಸದಸ್ಯರು

1947 ರ ಆ ಕಾಲದಲ್ಲಿ ಕಾಂಗ್ರೆಸ್ ದೇಶ ವಿರೋಧಿ ನೀತಿಗಳನ್ನು ಧಿಕ್ಕರಿಸಿ ನೆಹರೂ ಸಂಪುಟದಲ್ಲಿ ಕೈಗಾರಿಕಾ ಸಚಿವರಾಗಿದ್ದ ಶಾಮಪ್ರಸಾದ ಮುಖರ್ಜಿಯವರು ತಮ್ಮ ಖಾತೆಗೆ ರಾಜಿನಾಮೆ ಸಲ್ಲಿಸಿ ಸರಕಾರದಿಂದ ಹೊರ ನಡೆದು ಸಂಘದ ಸಹಾಯದೊಂದಿಗೆ ಜನಸಂಘವನ್ನು ಸ್ಥಾಪಿಸುತ್ತಾರೆ. ನಂತರ ಕಾಶ್ಮೀರದ ಕುರಿತಾಗಿ ನೆಹರೂ ಸರಕಾರದ ನೀತಿಯನ್ನು ವಿರೋಧಿಸಿ ಅಲ್ಲಿ ಪ್ರತಿಭಟನೆಗೆ ತೆರಳಿದಾಗ ಅಂದಿನ ಪ್ರಧಾನಿ ನೆಹರೂರವರ ಆದೇಶದ ಮೇರೆಗೆ ಶ್ಯಾಮಪ್ರಸಾದ ಮುಖರ್ಜಿಯವರನ್ನು ಗೃಹ ಬಂಧನದಲ್ಲಿರಿಸಿದರು. ಆ ಸಂದರ್ಭದಲ್ಲಿಯೇ ಮುಖರ್ಜಿಯವರು ಸಂಶಯಾಸ್ಪದವಾಗಿ ಸಾವಿಗೀಡಾದರು.

ಕಾಂಗ್ರೆಸ್ ಪಕ್ಷದ ನೀತಿಗಳನ್ನು ವಿರೋಧಿಸಿ ಸ್ವತಂತ್ರ ಭಾರತದಲ್ಲಿ ಆಗಸ್ಟ್‌ನಲ್ಲಿ ಜನ್ಮ ತಾಳಿದ್ದ ರಾಜಕೀಯ ಸಂಘಟನೆಗೆ ಇದು ಮೊದಲ ಮರ್ಮಾಘಾತ ಆಗಿತ್ತು. ಆಗಿನ ಕಾಲದಲ್ಲಿ ಜನಸಂಘದ ಬಳಿ ಯಾವುದೇ ಆರ್ಥಿಕ ಸಂಪನ್ಮೂಲಗಳಿರಲಿಲ್ಲ. ಆಗ ಜನಸಂಘದ ಬಳಿ ಇದ್ದದ್ದು ರಾಷ್ಟ್ರ ಹಿತಕ್ಕಾಗಿ ಸರ್ವಸ್ವವನ್ನೂ ತ್ಯಾಗ ಮಾಡಿ ಸಮರ್ಪಣಾ ಭಾವದಿಂದ ಕೆಲಸಕ್ಕೆ ಸಿದ್ಧವಿದ್ದ ಕಾರ್ಯಕರ್ತರು. ಪಂಡಿತ್ ದೀನ ದಯಾಳ ಉಪಾಧ್ಯಾಯರು, ಅಟಲ್ ಬಿಹಾರಿ ವಾಜಪೇಯಿ ಅವರು, ಭೈರವ್ ಸಿಂಗ್ ಶೇಖಾವತ್, ಸುಂದರ್ ಸಿಂಗ್ ಭಂಡಾರಿ, ಬಲರಾಜ್ ಮುಧೋಕ್ ಅವರು ಉತ್ತರ ಭಾರತದಲ್ಲಾದರೆ, ದಕ್ಷಿಣ ಭಾರತದಲ್ಲಿ ಜಗನ್ನಾಥ್‌ರಾವ್ ಜೋಶಿ, ಬಾಪುರಾವ್ ದೇಶ್‌ಪಾಂಡೆರವರು ಸಂಘಟನೆಯಲ್ಲಿ ತೊಡಗಿಸಿಕೊಂಡಿದ್ದರು.

ಆ ಸಮಯದಲ್ಲಿ ಜಗನ್ನಾಥ್‌ರಾವ್‌ಜೋಶಿಯವರು ರಾಜ್ಯವಿಡೀ ಪ್ರವಾಸ ಮಾಡಿ ಭಾರತೀಯ ಜನಸಂಘ ಸಂಘಟನೆ ಮಾಡುತ್ತಿದ್ದರು. ಅದು 1956 ಸಮಯ, ಪಕ್ಷ ಆಗಷ್ಟೇ ಜನ್ಮ ತಾಳಿತ್ತು. ಪಕ್ಷದ ಸಂಸ್ಥಾಪನಾಧ್ಯಕ್ಷರು ರಾಜಕೀಯ ದ್ವೇಷಕ್ಕೆ ಬಲಿಯಾಗಿದ್ದರು. ಸಂಪನ್ಮೂಲ ಬದಿಗಿರಲಿ ಕಾರ್ಯಕರ್ತರು ಸಿಕ್ಕರೆ ಹೆಚ್ಚು ಎನ್ನುವ ಕಾಲವದು. ಜನಸಂಘಕ್ಕೆ ಚುನಾವಣೆಗೆ ಅಭ್ಯರ್ಥಿಗಳೇ ಸಿಗದ ಕಾಲ. ಇಂತಹ ಕಠಿಣ ಪರಿಸ್ಥಿತಿಯಲ್ಲಿ ಪಕ್ಷ ಸಂಘಟನೆಯ ಕೆಲಸ ಬಹಳ ಕಷ್ಟವಾದುದು. ಆ ಕಾಲದಲ್ಲಿ ಕಾರ್ಯಕರ್ತರ ಆರ್ಥಿಕ ಪರಿಸ್ಥಿತಿಯೂ ಅಷ್ಟೇನೂ ಚೆನ್ನಾಗಿರಲಿಲ್ಲ.

1956ರ ಸಮಯ ಆನೇಕಲ್ ಭಾಗದಲ್ಲಿ ಕಾರ್ಯಕರ್ತರ ಸಭೆಯನ್ನು ಆಯೋಜನೆ ಮಾಡಲಾಗಿತ್ತು. ಸಭೆಯನ್ನು ಜಗನ್ನಾಥ್‌ರಾವ್ ಅವರು ಮತ್ತು ನಾನು ಆ ಸಭೆಯಲ್ಲಿ ಭಾಗವಹಿಸ ಬೇಕಿತ್ತು. ಸಭೆ ನಡೆಯುವ ಜಾಗಕ್ಕೆ ಬೆಂಗಳೂರಿನಿಂದ ಸುಮಾರು ಒಂಬತ್ತು ಮೈಲಿಗಳು. ಕಾರ್ಯಾಲಯದಲ್ಲಿ ಕಾರು, ಮೋಟಾರು ಸೈಕಲ್‌ಗಳೇನೂ ಇರಲಿಲ್ಲ.

ನನ್ನ ಬಳಿ ಆಗ ಒಂದು ಬೈಸಿಕಲ್ ಇತ್ತು. ಆದರೆ ಅದರಲ್ಲಿ ಜಗನ್ನಾಥರಾವ್ ಅವರನ್ನು ಕುಳ್ಳಿರಿಸಿ ಸೈಕಲ್ ಹೊಡೆಯುವುದು ಕಷ್ಟ ಸಾಧ್ಯ. ಇನ್ನು ಅವರು ಓಡಿಸದರೆ ಹಿಂದೆ ಕೂರುವುದು ಸರಿಯೆನಿಸುತ್ತಿರಲಿಲ್ಲ. ಬೆಳಗ್ಗೆ ಬೇಗ ಬಿಜೆಪಿ ಕಛೇರಿ ಬಳಿಯೇ ಇದ್ದ ಪರಿಚಯವಿರುವ ಸೈಕಲ್ ಅಂಗಡಿಯಲ್ಲಿ ಒಂದು ಸೈಕಲ್ ಬಾಡಿಗೆಗೆ ಪಡೆದೆನು. ಬೆಳಿಗ್ಗೆ ನಿಗದಿತ ಸಮಯಕ್ಕೆ ಜಗನ್ನಾಥ್‌ರಾವ್ ಅವರು ಕಛೇರಿಗೆ ಬಂದಾಗ ನಾನು ಬಾಡಿಗೆಗೆ ತಂದ ಸೈಕಲ್‌ನ್ನು ಅವರ ಮುಂದೆ ಇಟ್ಟು, ಇಬ್ಬರು ಒಟ್ಟಿಗೆ ಸೈಕಲ್‌ನಲ್ಲಿ ಹೋಗಿ ಸಭೆ ಮುಗಿಸಿಕೊಂಡು ಬರೋಣ ಎಂದೆ. ಜೋಶಿಯವರು ನಗುತ್ತಲೇ ಒಪ್ಪಿಕೊಂಡು ಹೊರಟರು. ಒಂಬತ್ತು ಮೈಲಿ ಹೋಗುವುದು, ಒಂಬತ್ತು ಮೈಲಿ ಬರುವ ಈ ಪಯಣದಲ್ಲಿ ತಮ್ಮ ಸ್ವಭಾವ ಸಹಜವಾಗಿಯೇ ನಗೆ ಚಟಾಕಿಗಳನ್ನು ಹಾರಿಸುತ್ತಾ ಆನೇಕಲ್‌ಗೆ ಹೋಗಿ ಸಭೆ ಮುಗಿಸಿ ಬಂದೆವು.

ಆಗ ಇದಾವುದು ನಮಗೆ ಕಷ್ಟವೇ ಅನಿಸಿರಲಿಲ್ಲ. ಆಗ ಯಾರಿಗೂ ಪ್ರತಿರೋಧಿಸಲು ಸಾಧ್ಯವೇ ಇಲ್ಲದ ಕಾಂಗ್ರೆಸ್ ವಿರುದ್ಧ ಜನಾಭಿಪ್ರಾಯ ಮೂಡಿಸುವುದು ನಮಗೆ ಮುಖ್ಯವಾಗಿತ್ತು. ಆ ಕೆಲಸದ ಮುಂದೆ ಉಳಿದ ಎಲ್ಲಾ ಸಂಗತಿಗಳೂ ನಮಗೆ ಗೌಣ ಅನಿಸುತ್ತಿತ್ತು. ಇಂದು ಹಿಂತಿರುಗಿ ಆ ಘಟನೆಗಳನ್ನು ನೆನಸಿಕೊಂಡಾಗ ಇದೆಲ್ಲವೂ ನಾವೇ ಮಾಡಿದ್ವಾ, ಈಗ ನಮ್ಮ ಕೈಲಿ ಇದನ್ನು ಮಾಡಲು ಸಾಧ್ಯವೇ ಎಂದು ನಮಗೇ ಆಶ್ಚರ್ಯವಾಗುತ್ತದೆ.




# ಮಹಾಭಾರತದ ನಕುಲ ಸಹದೇವರು, ಬಿಜೆಪಿಯ ಕಾರ್ಯಕರ್ತರು

ನಾಗರಾಜ್ ಕುಲಕರ್ಣಿ

ಭಾರತದ ಶ್ರೇಷ್ಠ ಮಹಾ ಕಾವ್ಯಗಳಾದ ರಾಮಾಯಣ ಮತ್ತು ಮಹಾಭಾರತ ಮನುಷ್ಯನ ಜೀವನದ ಮಾರ್ಗದರ್ಶಿ ಗ್ರಂಥಗಳಾಗಿ ನಮ್ಮೆದುರಿಗೆ ನಿಲ್ಲುತ್ತವೆ. ಅದರಲ್ಲಿನ ಪಾತ್ರಗಳು ನಿರ್ಧಾರಗಳು ನಮ್ಮ ನಡವಳಿಕೆಗಳಿಗೆ ಸ್ಪಷ್ಟವಾದ ಸೂಚನೆಯನ್ನು ನೀಡುತ್ತವೆ. ಮಹಾಭಾರತದಲ್ಲಿ ನಡೆಯುವ ಕೆಲವು ಘಟನೆಗಳು ಪ್ರಸ್ತುತ ಸನ್ನಿವೇಶದಲ್ಲಿ ನಮಗೊಂದಿಷ್ಟು ಪ್ರೇರಣೆ ನೀಡುತ್ತದೆ ಎನ್ನುವುದರಲ್ಲಿ ಯಾವುದೇ ಅನುಮಾನವಿಲ್ಲ.

ಪಾಂಡವರಲ್ಲಿ ಅಗ್ರಜನಾದ ಧರ್ಮರಾಯನು ಸತ್ಯವಂತನು, ಧರ್ಮ ನಿಷ್ಠನೂ ಆಗಿದ್ದು, ಪಾಂಡವರ ಹಿರಿಯಣ್ಣನಾಗಿ ನೇತೃತ್ವವನ್ನು ವಹಿಸಿಕೊಳ್ಳುತ್ತಾನೆ. ಭೀಮ ತನ್ನ ದೈಹಿಕ ಸಾಮರ್ಥ್ಯದಿಂದ ಬಕಾಸುರರಂತಹ ರಾಕ್ಷಸನನ್ನು ಹೊಡೆದು ಕೊಲ್ಲುತ್ತಾನೆ. ಹಿಡಂಬಿಯನ್ನು ಮದುವೆಯಾಗಿ ಘಟೋದ್ಗಜನ ತಂದೆಯಾಗುತ್ತಾನೆ, ಗಧಾಯುದ್ಧದಲ್ಲಿ ಅವನಿಗೆ ಸರಿಸಾಟಿಯೇ ಇಲ್ಲ . ಅರ್ಜುನ ಬಿಲ್ಲು ವಿದ್ಯೆಯಲ್ಲಿ ಪರಿಣಿತ, ಮೂರು ಲೋಕದ ಗಂಡ ಎಂಬ ಬಿರುದು ಪಡೆದವನು. ಉಲೂಚಿ ಚಿತ್ರಾಂಗದೆಯನ್ನು ಗಾಂಧರ್ವ ವಿಧಿಯಲ್ಲಿ ವಿವಾಹವಾದನು.

ಪಾಂಡವರಲ್ಲಿ ಉಳಿದ ಇಬ್ಬರು ನಕುಲ ಮತ್ತು ಸಹದೇವ, ಇವರ ಬಗ್ಗೆ ಯುದ್ಧದ ಹೋರಾಟದ ವಿಷಯಗಳಾಗಲೀ, ಪ್ರೇಮ ಪ್ರಸಂಗಗಳಾಗಲೀ, ಪ್ರಚಲಿತದಲ್ಲಿ ಇಲ್ಲವೇ ಇಲ್ಲ. ಆದರೆ ವಿಶೇಷವೆಂದರೆ ನಕುಲ ಮತ್ತು ಸಹದೇವರಿಬ್ಬರೂ ಲೋಕ ಜ್ಞಾನಿಗಳು. ಭವಿಷ್ಯದಲ್ಲಿ ನಡೆಯುವ ಪ್ರತೀ ಘಟನೆಗಳು ಅವರಿಗೆ ಸ್ಪಷ್ಟವಾಗಿ ಗೋಚರಿಸುತ್ತಿದ್ದವು. ಅಶ್ವಿನಿ ದೇವತೆಗಳಿಂದ ಆಯುರ್ವೇದ ವಿದ್ಯೆಯನ್ನು ಪಡೆದುಕೊಂಡಿದ್ದರು. ಯುದ್ಧಕ್ಕೆ ಅಶ್ವಗಳನ್ನು ತಯಾರು ಮಾಡುವ ಶಕ್ತಿ ಇವರುಗಳಲ್ಲಿ ಇತ್ತು. ಆದರೆ ಈ ಇಬ್ಬರು ಯಾವ ಯುದ್ಧದಲ್ಲಿಯೂ ನೇರವಾಗಿ ಅಥವಾ ಸಕ್ರಿಯವಾಗಿ ಭಾಗವಹಿಸುತ್ತಿರಲಿಲ್ಲ. ಹಿರಿಯ ಅಣ್ಣನಾದ ಧರ್ಮರಾಜನು ತಾನು ಮಾಡುವ ಪ್ರತೀ ಕಾರ್ಯವನ್ನು ಪ್ರಾರಂಭಿಸುವಾಗಲೆಲ್ಲಾ ನಕುಲ ಸಹದೇವರ ಸಲಹೆ ಪಡೆದು ಮುಂದುವರಿಯುತ್ತಿದ್ದ. ಕೌರವರ ಸೈನ್ಯದಲ್ಲಿ ಗುರುತಿಸಿಕೊಂಡ ಶಕುನಿಯೂ ಸಹ ಕೌರವರ ನಾಶಕ್ಕಾಗಿ ಮಹಾಭಾರತದ ಯುದ್ಧವನ್ನು ಯಾವ ಗಳಿಗೆಯಲ್ಲಿ ಪ್ರಾರಂಭಿಸಬೇಕು ಎಂಬುದನ್ನು ನಕುಲ ಸಹದೇವರಿಂದ ತಿಳಿದುಕೊಳ್ಳಲು ಬಂದಿದ್ದನೆಂದು ತಿಳಿಯುತ್ತದೆ. ಪಾಂಡವರ ಪ್ರತಿ ಗೆಲುವಿನಲ್ಲಿಯೂ ಮುಹೂರ್ತ ತಿಳಿಸಿದವರು ನಕುಲ ಸಹದೇವರು. ಮಹಾಭಾರತ ಯುದ್ಧದಲ್ಲಿ ಪಾಂಡವರಿಗೆ ಕುದುರೆಗಳನ್ನು ಮತ್ತು ಆನೆಗಳನ್ನು ಆಯ್ಕೆ ಮಾಡಿ ಕೊಟ್ಟವರು ಈ ನಕುಲ ಸಹ ದೇವರು.

ಮಹಾಭಾರತ ಸನ್ನಿವೇಶಗಳಲ್ಲಿ ಕೃಷ್ಣ ,ಭೀಮ, ಅರ್ಜುನ, ದುರ್ಯೋಧನ, ದ್ರೌಪದಿ, ಕರ್ಣ, ಧೃತರಾಷ್ಟ್ರ ಹೆಚ್ಚು ರಂಜನೀಯವಾಗಿ ಕಾಣುತ್ತಾರೆ. ಜಗತ್ತಿನಲ್ಲಿ ಮಹಾಭಾರತವೆಂದರೆ ಇವರುಗಳೇ. ಎಲ್ಲವನ್ನೂ ತಿಳಿದುಕೊಂಡ ನಕುಲ, ಸಹ ದೇವರು ಇದ್ದೂ ಇಲ್ಲದಂತಿರುವ ನಿರ್ಲಕ್ಷ್ಯಕ್ಕೊಳಗಾದ ಪಾತ್ರಗಳಂತೆ ಕಂಡು ಬರುತ್ತಾರೆ. ಅವರು ಯಾವ ಯುದ್ಧವನ್ನು ಮಾಡಲಿಲ್ಲ, ಹಾಗೆಂದು ಅವರುಗಳೇನೂ ದುರ್ಬಲರಲ್ಲ. ಮುಂಚೂಣಿಗೆ ಬರಲಿಲ್ಲ. ಅಥವಾ ಯುದ್ಧಕ್ಕೆ ಬೇಕಾದ ಸಿದ್ಧತೆಯನ್ನೇ ತಮ್ಮ ಕರ್ತವ್ಯವೆಂದು ಕ್ರಿಯಾಶೀಲರಾಗಿ ಶ್ರಮಿಸಿದರು. ಆದರೆ ಇವರುಗಳು ಯುದ್ಧವನ್ನೇ ಎದುರಿಸಲಾರದವರು ಎಂದರೆ ಖಂಡಿತ ತಪ್ಪಾಗುತ್ತದೆ. ಪಂಚಪಾಂಡವರ ಅಸ್ತಿತ್ವ ಅಡಗಿರುವುದೇ ನಕುಲ ಸಹದೇವರಲ್ಲಿ. ಧರ್ಮರಾಯ, ಭೀಮ, ಅರ್ಜುನರ ಶೌರ್ಯ ಪರಾಕ್ರಮಕ್ಕೆ ಪರೋಕ್ಷ ಕಾರಣವೇ ಈ ನಕುಲ ಸಹದೇವರು.

ಇತ್ತೀಚೆಗೆ ನಡೆದ ಕರ್ನಾಟಕದ ಚುನಾವಣೆಯಲ್ಲಿ ಕೆಲವರು ಅಭೂತಪೂರ್ವಾಗಿ ಗೆಲುವನ್ನು ಸಾಧಿಸಿದ್ದಾರೆ, ಕೆಲವರು ಸೋತಿದ್ದಾರೆ. ಗೆದ್ದವರು ಗೆಲುವಿನ ಕಿರೀಟವನ್ನು ಯಾರಿಗೂ ತೊಡಿಸದೆ ತಮ್ಮ ಮುಡಿಗೆ ಏರಿಸಿಕೊಂಡಿರಬಹುದು. ಸೋತವರು ಬೇರೆಯವರನ್ನು ದೂರಿರಬಹುದು. ಆದರೆ ಮರೆಯಲ್ಲಿ ಕೂತು ಕೆಲವರು ಗೆಲುವಿನ ತಂತ್ರಗಳನ್ನು ರೂಪಿಸುತ್ತಾರೆ, ಅನೇಕ ಕಾರ್ಯಕರ್ತರು ಶ್ರಮ ನಿಷ್ಠೆಯಿಂದ ಕೆಲಸ ಮಾಡುತ್ತಾರೆ. ಭೀಮ, ಅರ್ಜುನನಂತೆ ಹೋರಾಡಿದವರು, ಧರ್ಮರಾಯನಂತೆ ನಾಯಕತ್ವ ವಹಿಸಿಕೊಂಡವರು ಪ್ರಚಾರಕ್ಕೆ ಬರುತ್ತಾರೆ. ಚುನಾವಣೆಯಲ್ಲಿ ಸ್ಪರ್ಧಿಸದೆ ಎಲ್ಲಾ ಆಗುಹೋಗುಗಳ ಬಗ್ಗೆ ಭವಿಷ್ಯ ರೂಪಿಸುವ ಕಾರ್ಯಕರ್ತರು, ನಕುಲ ಸಹದೇವರಂತೆ ಕಾರ್ಯನಿರ್ವಹಿಸುತ್ತಾರೆ. ಚುನಾವಣೆಯಲ್ಲಿ ಸ್ಪರ್ಧಿಸುವವರಿಗೆ ಮಾತ್ರ ಶಕ್ತಿ ಇದೆ, ಸ್ಪರ್ಧಿಸದೆ ಇರುವವರು ದುರ್ಬಲರು ಎಂಬ ಭಾವನೆ ಸಂಪೂರ್ಣ ತಪ್ಪಾಗಿರುತ್ತದೆ. ನಕುಲ ಸಹದೇವರು ಯುದ್ಧಕ್ಕೆ ಕುದುರೆಗಳನ್ನು ಸಿದ್ಧಪಡಿಸುತ್ತಾರೆ. ನಕುಲ ಸಹದೇವರು ಇಲ್ಲದೆ ಹೋದರೆ ಪಾಂಡವರು ಅಪೂರ್ಣ. ಪಾಂಡವರ ಪೂರಾ ಸಾಮರ್ಥ್ಯದ ಅನಾವರಣವೂ ಕಷ್ಟ ಸಾಧ್ಯ. ಎಲ್ಲಿಯೂ ತಮ್ಮ ಶಕ್ತಿ ಪ್ರದರ್ಶನವನ್ನು ಮಾಡದೆ ಭೀಮ ಅರ್ಜುನರಂತೆ ಅಬ್ಬರಿಸದೆ ಇರುವ ನಕುಲ ಸಹದೇವರ ಪ್ರತಿರೂಪವೇ ಬಿಜೆಪಿಯ ಬಹುತೇಕ ಕಾರ್ಯಕರ್ತರು.





# ಅಮೇರಿಕ ಸದನದಲ್ಲಿ ಪ್ರಧಾನಿ ಶ್ರೀ ನರೇಂದ್ರ ಮೋದಿ

‘‘ಭಾರತವು ಕಳೆದ ವರ್ಷ ಸ್ವಾತಂತ್ರ್ಯದ 75ನೇ ವರ್ಷದ ವಾರ್ಷಿಕೋತ್ಸವವನ್ನು ವಿಜೃಂಭಣೆಯಿಂದ ಆಚರಿಸಿತು. ಅದು ಸಾವಿರಾರು ವರ್ಷಗಳ ದಾಳಿಗಳ ನಂತರವೂ ಸಹ ಒಂದು ರಾಷ್ಟ್ರವಾಗಿ ಬಲಿಷ್ಠ ಬೇರುಗಳನ್ನೊಳಗೊಂಡು ನಮ್ಮ ಏಕತೆ ಮತ್ತು ಸಮಗ್ರತೆಯ ಪ್ರತೀಕವಾಗಿದೆ. ಭಾರತದಲ್ಲಿ 2,500ಕ್ಕೂ ಅಧಿಕ ರಾಜಕೀಯ ಪಕ್ಷಗಳಿವೆ. 20 ವಿವಿಧ ರಾಜಕೀಯ ಪಕ್ಷಗಳು ಭಾರತದ ವಿವಿಧ ರಾಜ್ಯಗಳಲ್ಲಿ ಅಧಿಕಾರದಲ್ಲಿದೆ. ನಮ್ಮ ದೇಶದಲ್ಲಿ 22 ಅಧಿಕೃತ ಭಾಷೆಗಳಿದ್ದು ಸಾವಿರಾರು ಕೃತಿಗಳಿದ್ದರೂ ಸಹ ನಾವೆಲ್ಲರೂ ಒಂದಾಗಿದ್ದೇವೆ, ನಮ್ಮದು ಒಮ್ಮತದ ದನಿಯಾಗಿದೆ. ಪ್ರತಿ ನೂರು ಮೈಲಿಗೂ ನಮ್ಮ ಊಟೋಪಚಾರ ಬದಲಾಗುತ್ತದೆ. ನಾವುಗಳು ಎಲ್ಲವನ್ನೂ ಸವಿಯುತ್ತೇವೆ, ನಾವು ವಿಶ್ವದ ಎಲ್ಲಾ ಆಯಾಮಗಳಿಗೂ ಮನ್ನಣೆ ನೀಡುತ್ತೇವೆ ಮತ್ತು ಅದನ್ನು ಸಂಭ್ರಮಿಸುತ್ತೇವೆ. ಇಂದು ವಿಶ್ವ ಭಾರತದ ಬಗ್ಗೆ ತಿಳಿದುಕೊಳ್ಳಲು ಕಾತರಿಸುತ್ತಿದೆ’’



**ಅಶ್ವಿನಿ ಶಂಕರ್**
ಸದಸ್ಯರು
ರಾಜ್ಯ ಪ್ರಕಾಶನ ಪ್ರಕೋಷ್ಠ

ಭಾರತದ ಹೆಮ್ಮೆಯ ಪ್ರಧಾನಮಂತ್ರಿ, ವಿಶ್ವದ ಅಗ್ರ ನಾಯಕರಲ್ಲೊಬ್ಬರಾದ ಶ್ರೀ ನರೇಂದ್ರ ಮೋದಿರವರು ಅಮೇರಿಕಾದ ಸದನದಲ್ಲಿ ಅದರಲ್ಲೂ ಎರಡನೆಯ ಬಾರಿ (2016, 2023) ಮಾತನಾಡುತ್ತಿರುವುದು ಅತ್ಯಂತ ಗೌರವಯುತವಾಗಿದೆ. ನಿಮ್ಮ ಈ ಗೌರವಕ್ಕೆ, ಆತಿಥ್ಯಕ್ಕೆ ನಾನು ನನ್ನ ಭಾರತದ 140 ಕೋಟಿ ಜನರ ಪರವಾಗಿ ನಿಮಗೆ ನನ್ನ ಹೃದಯಪೂರ್ವ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ ಎಂದು ತಮ್ಮ ಐತಿಹಾಸಿಕ ಭಾಷಣವನ್ನು ಪ್ರಾರಂಭಿಸಿದರು.

" Calling for the century ಕಳೆದ ಹಲವು ವರ್ಷಗಳಿಂದ ಕೃತಕ ಬುದ್ಧಿವಂತತೆಯಲ್ಲಿ (Artificial Intelligence) ದಾಖಲೆಯ ಹಲವು ಸಂಶೋಧನೆಯ ಮೂಲಕ ಅಭಿವೃದ್ಧಿಯಾಗಿದೆ. ಜೊತೆ ಜೊತೆಗೆ ಮತ್ತೊಂದು ಮಹತ್ವಪೂರ್ಣವಾದ ಅಭಿವೃದ್ಧಿಯಾಗಿದೆ. ಅದೇನೆಂದರೆ CGÌLEC & AMERICA & INDIA!! ಇಂದು ವಿಶ್ವದ ಎರಡು ಬೃಹತ್ ಪ್ರಜಾಪ್ರಭುತ್ವ ರಾಷ್ಟ್ರಗಳಾದ ಅಮೇರಿಕಾ ಮತ್ತು ಭಾರತ ಈ ಮಹತ್ವಾಕಾಂಕ್ಷೆಯ ದಿನವನ್ನು ಸಂಭ್ರಮಿಸುತ್ತಿವೆ. ಈ ಕ್ಷಣ ನಮ್ಮಿಬ್ಬರ ಅಗಾಧವಾದ ಬಾಂಧವ್ಯಕ್ಕೆ ಸಾಕ್ಷಿಯಾಗಿ ನಿಂತಿದೆ ಎಂದು ಅಮೇರಿಕಾ ಮತ್ತು ಭಾರತದ ನಡುವಿನ ಸ್ನೇಹವನ್ನು ಉಲ್ಲೇಖಿಸಿದರು.

ನಿಮಗೆಂದಾದರೂ ನೆರವಿನ ಅಗತ್ಯವಿದ್ದಲ್ಲಿ ನಾನು ಪಕ್ಷಾತೀತವಾಗಿ ಒಮ್ಮತದಿಂದ ನಿಮ್ಮೊಂದಿಗಿರುತ್ತೇನೆ, ನಾವು ನಮ್ಮ ರಾಷ್ಟ್ರಗಳ ಅಭಿವೃದ್ಧಿಯ ವಿಷಯಗಳಲ್ಲಿ ಒಗ್ಗೂಡಿ ಒಮ್ಮತದ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಗಿದೆ. ನೀವು ಇದನ್ನು ಈಗಾಗಲೇ



ಸಾಬೀತುಪಡಿಸಿದ್ದೀರಿ ಎಂದು ಹೇಳಿ ಅದಕ್ಕೆ ಅಭಿನಂದನೆಗಳನ್ನು ತಿಳಿಸಿದರು.

ಅಮೇರಿಕಾದ ಬುನಾದಿ "The Vision of Nation of Equal People" ಎಂಬ ಧ್ಯೇಯವಾಕ್ಯ ಪ್ರೇರಣೆಯಾಗಿದೆ. ಅಮೆರಿಕಾ ಪ್ರಪಂಚದಾದ್ಯಂತ ದೇಶಗಳ ಜನರನ್ನು ತನ್ನತ್ತ ಸೆಳೆದು, ಅವರನ್ನು ತನ್ನ ದೇಶದಲ್ಲಿ ಸಮಾನತೆಯ ಒಡಂಬಡಿಕೆಗೆ ಉತ್ತೇಜನ ನೀಡಿ, ಅಮೆರಿಕಾದ ಪ್ರೇರಣೆಯ ಕನಸನ್ನು ನನಸಾಗಿಸಿದೆ ಎಂದರು.

ಅನೇಕ ಭಾರತೀಯ ಅಮೆರಿಕಾದಲ್ಲಿದ್ದಾರೆ. ಅವರಲ್ಲಿ ಕೆಲವರು ಅತ್ಯಂತ ಗೌರವಯುತವಾಗಿ ಈ ಸಭೆಯಲ್ಲೂ ಉಪಸ್ಥಿತರಿದ್ದಾರೆ. ಅವರಲ್ಲಿ ಕಮಲಾ ಹ್ಯಾರಿಸ್ ಸಹ ಒಬ್ಬರು ಎಂದು ಹೇಳಿದರು. ನಾವು ಮಹಾತ್ಮಗಾಂಧಿ ಹಾಗೂ ಕಿಂಗ್ ಮಾರ್ಟಿನ್ ಲೂಥರ್ ಜೂನಿಯರ್-2 ರನ್ನು ನಾವು ಇಂದಿಗೂ ಸ್ಮರಿಸುತ್ತೇವೆ ಎಂದು ಎರಡು ದೇಶಗಳ ಆದರ್ಶಪುರುಷರನ್ನು ಸ್ಮರಿಸಿದರು. Liberty, Equality & Justiceಗೆ ಪ್ರಾಶಸ್ತ್ಯ ನೀಡಿದ ಅನೇಕ ಮಹಾಮಹಿಮರನ್ನು ಎರಡೂ ರಾಷ್ಟ್ರದವರು ಇಂದಿಗೂ ಸ್ಮರಿಸುವಮೂಲಕ, ಮಹಾನ್ ಚೇತನ John Lovitz ಗೆ ಹೃದಯಪೂರ್ವಕ ಶ್ರದ್ಧಾಂಜಲಿಯನ್ನು ಅರ್ಪಿಸಿದರು.

ಪ್ರಜಾಪ್ರಭುತ್ವವು ಸಮಾನತೆ ಮತ್ತು ಘನತೆಯನ್ನು ಪೂರೈಸುವ ಚೈತನ್ಯರೂಪಿಯಾಗಿದೆ. ಪ್ರಜಾಪ್ರಭುತ್ವವು ಚರ್ಚೆ ಮತ್ತು ಪ್ರವಚನವನ್ನು ಬೆಂಬಲಿಸುವ ಕಲ್ಪನೆಯಾಗಿ ನಿಂತಿದೆ ಎಂದು ಪ್ರಜಾಪ್ರಭುತ್ವದ ಮೌಲ್ಯದ ಬಗ್ಗೆ ತಿಳಿಸಿದರು.

ವಿಶ್ವದಲ್ಲಿ ಅಮೆರಿಕಾ ದೇಶವು ಅತ್ಯಂತ ಹಳೆಯದಾದ ಮತ್ತು ಭಾರತವು ಬೃಹತ್ ಗಾತ್ರದ ಪ್ರಜಾಪ್ರಭುತ್ವವನ್ನು ಹೊಂದಿವೆ. ಒಟ್ಟಾಗಿ ನಾವು ಜಗತ್ತಿಗೆ ಉತ್ತಮವಾದ ಭವಿಷ್ಯವನ್ನು ನೀಡೋಣ ಹಾಗೂ ಭವಿಷ್ಯಕ್ಕೆ ಒಂದು ಉತ್ತಮ ವಿಶ್ವವನ್ನು ನೀಡೋಣ ಎಂದು ತಮ್ಮ ಜವಾಬ್ದಾರಿಯ ಬಗ್ಗೆ ಮೋದಿಯವರು ಉಲ್ಲೇಖಿಸಿದರು.

ಭಾರತವು ಕಳೆದ ವರ್ಷ ಸ್ವಾತಂತ್ರ್ಯದ 75ನೇ ವರ್ಷದ ವಾರ್ಷಿಕೋತ್ಸವವನ್ನು ವಿಜೃಂಭಣೆಯಿಂದ ಆಚರಿಸಿತು. ಅದು ಸಾವಿರಾರು ವರ್ಷಗಳ ದಾಳಿಗಳ ನಂತರವೂ ಸಹ ಒಂದು ರಾಷ್ಟ್ರವಾಗಿ ಬಲಿಷ್ಠ ಬೇರುಗಳನ್ನೊಳಗೊಂಡು ನಮ್ಮ ಏಕತೆ ಮತ್ತು ಸಮಗ್ರತೆಯ ಪ್ರತೀಕವಾಗಿದೆ ಎಂದು ಹೇಳಿದರು.

ನಾವು ವಿಶ್ವದ ಎಲ್ಲಾ ಆಯಾಮಗಳಿಗೂ ಮನ್ನಣೆ ನೀಡುತ್ತೇವೆ. ಇಂದು ವಿಶ್ವ ಭಾರತದ ಬಗ್ಗೆ ತಿಳಿದುಕೊಳ್ಳಲು ಕಾತರಿಸುತ್ತಿದೆ ಎಂದು ನಮ್ಮ ದೇಶದ ಶಕ್ತಿಯ ಅನಾವರಣವನ್ನು ಪ್ರಧಾನಿಯವರು ತಮ್ಮ ಮಾತುಗಳ ಮೂಲಕ ತಿಳಿಸಿದರು. ನಾನು ಪ್ರಧಾನಿಯಾಗಿ ಮೊದಲ ಬಾರಿ ಅಮೇರಿಕಾಕ್ಕೆ ಭೇಟಿ ನೀಡಿದಾಗ ಭಾರತವು ವಿಶ್ವದ 10ನೇ ದೊಡ್ಡ ಆರ್ಥಿಕ ಶಕ್ತಿಯಾಗಿತ್ತು, ಆದರೆ ಇಂದು ಭಾರತ ವಿಶ್ವದ 5ನೇ ದೊಡ್ಡ ಆರ್ಥಿಕತೆಯನ್ನು ಹೊಂದಿದೆ ಮತ್ತು ಬಹು ಬೇಗ ಭಾರತವು ವಿಶ್ವದ 3ನೇ ದೊಡ್ಡ ಆರ್ಥಿಕ ಶಕ್ತಿಯಾಗಲಿದೆ. ಭಾರತ ಅಭಿವೃದ್ಧಿ ಹೊಂದಿದರೆ ಇಡೀ ವಿಶ್ವ ಅಭಿವೃದ್ಧಿ ಹೊಂದುತ್ತದೆ. ನಾವು ವಿಶ್ವದ ಜನಸಂಖ್ಯೆಯ 6ನೇ ಒಂದು ಭಾಗವಾಗಿದ್ದೇವೆ. ಕಳೆದ ಶತಮಾನದಲ್ಲಿ ಭಾರತಕ್ಕೆ ಸ್ವಾತಂತ್ರ ದೊರೆತ ನಂತರ ವಿಶ್ವದ ಉಳಿದ ರಾಷ್ಟ್ರಗಳಿಗೂ ಸಹ ವಸಾಹತುಶಾಹಿ ಆಡಳಿತದಿಂದ ಹೊರಬಂದು ಸ್ವತಂತ್ರವಾಗಲು ಪ್ರೇರೇಪಿಸಿತು. ಈ ಶತಮಾನದಲ್ಲಿ ಹೇಗೆ ಭಾರತ ಅಭಿವೃದ್ಧಿ ಹೊಂದುತ್ತಿರುವುದೋ, ಅದು ವಿಶ್ವದ ಅನೇಕ ರಾಷ್ಟ್ರಗಳಿಗೆ ಅಭಿವೃದ್ಧಿ ಹೊಂದಲು ಪ್ರೇರೇಪಿಸುತ್ತಿದೆ. **सबका साथसबका विकास, सबका विश्वाससबका प्रयास** ನಮ್ಮ ಗುರಿಯಾಗಿದೆ. ಇದನ್ನು ತಲುಪಲು ನಾವು ಮೂಲಭೂತ ಸೌಕರ್ಯ ಅಭಿವೃದ್ಧಿಯಕಡೆ ಗಮನ ಹರಿಸಿದ್ದೇವೆ. ನಾವು ಈ ನಿಟ್ಟಿನಲ್ಲಿ 140 ಕೋಟಿ ಜನರಿಗೆ 40 ಕೋಟಿ ಮನೆಗಳನ್ನು ಕಟ್ಟಿಸಿಕೊಟ್ಟಿದ್ದೇವೆ. ಇದು ಆಸ್ಟ್ರೇಲಿಯಾ ದೇಶದ ಜನಸಂಖ್ಯೆಯ 6 ಪಟ್ಟು ಹೆಚ್ಚು, ನಮ್ಮ ರಾಷ್ಟ್ರೀಯ ಆರೋಗ್ಯ ವಿಮೆಯು 50 ಕೋಟಿ ಜನರಿಗೆ ಉಚಿತ ವೈದ್ಯಕೀಯ ಸೌಲಭ್ಯ ನೀಡುತ್ತಿದೆ. ಇದು ದಕ್ಷಿಣ ಅಮೇರಿಕಾದ ಜನಸಂಖ್ಯೆಗಿಂತಲೂ ಅಧಿಕ. ನಾವು ಬ್ಯಾಂಕಿಂಗ್ ವ್ಯವಸ್ಥೆಯನ್ನು ಬ್ಯಾಂಕಿಂಗ್ ರಹಿತ ಜನರಿಗೆ ತಲುಪಿಸಿದ್ದೇವೆ. ಇದರಿಂದ 50 ಕೋಟಿಗೂ ಅಧಿಕ ಜನ ಪ್ರಯೋಜನ ಹೊಂದಿದ್ದಾರೆ. ಇದು ಉತ್ತರ ಅಮೇರಿಕಾದ ಜನಸಂಖ್ಯೆಗೆ ಹತ್ತಿರವಾದದ್ದು. ನಾವು ಭಾರತವನ್ನು ಡಿಜಿಟಲ್ ಇಂಡಿಯಾ ಆಗಿ ಹೊರಹೊಮ್ಮಿಸಿದ್ದೇವೆ. ಇಂದು 85 ಕೋಟಿಗೂ ಹೆಚ್ಚು ಮೊಬೈಲ್ ಮತ್ತು ಇಂಟರ್‌ನೆಟ್ ಬಳಕೆದಾರರು ಭಾರತದಲ್ಲಿದ್ದಾರೆ. ಇದು ಯೂರೋಪ್‌ನ ಜನಸಂಖ್ಯೆಗಿಂತಲೂ ಅಧಿಕ.220 ಕೋಟಿ ಕೋವಿಡ್ ಲಸಿಕೆಗಳನ್ನು ಭಾರತದಲ್ಲಿಯೇ ತಯಾರಿಸಿ ಉಚಿತವಾಗಿ



ನೀಡಿ ನಾವು ನಮ್ಮ ದೇಶದ ಜನರ ಪ್ರಾಣವನ್ನು ರಕ್ಷಿಸಿದ್ದೇವೆ ಎನ್ನುವ ಮೂಲಕ ಭಾರತದ ಇತಿಹಾಸದಿಂದ ಇಲ್ಲಿಯವರೆಗಿನ ಸಾಧನೆಯ ಹಿರಿಮೆಯನ್ನು ಜಗತ್ತಿಗೆ ತಿಳಿಸಿದರು.

ಆಧುನಿಕ ಭಾರತದಲ್ಲಿ ಮಹಿಳೆಯರು ನಮ್ಮನ್ನು ಉತ್ತಮ ಭವಿಷ್ಯದತ್ತ ಕೊಂಡೊಯ್ಯುತ್ತಿದ್ದಾರೆ. ಭಾರತದ ಗುರಿಯೂ ಕೇವಲ ಮಹಿಳೆಯರ ಅಭಿವೃದ್ಧಿಗೆ ಪೂರಕವಾಗದೇ, ಅದು ಮಹಿಳೆಯರಿಂದಲೇ ಮುನ್ನಡೆಸಲಿರುವ ಅಭಿವೃದ್ಧಿಯಾಗಿರುತ್ತದೆ. ಇಂದು ಒಬ್ಬ ಅತ್ಯಂತ ಸರಳ, ಸಜ್ಜನೆ, ಬುಡಕಟ್ಟು ಜನಾಂಗದ ದಿಟ್ಟ ಮಹಿಳೆ ನಮ್ಮ ದೇಶದ ರಾಷ್ಟ್ರಪತಿಗಳಾಗಿದ್ದಾರೆ. ಭಾರತದಲ್ಲಿ ಅಂದಾಜು 15 ಲಕ್ಷ ಮಹಿಳೆಯರು ದೇಶದ ಹಲವಾರು ಭಾಗಗಳಲ್ಲಿ ಹಲವಾರು ಸ್ತರಗಳಲ್ಲಿ ಚುನಾಯಿತ ಪ್ರತಿನಿಧಿಗಳಾಗಿದ್ದಾರೆ. ಇಂದು ಮಹಿಳೆಯರು ನಮ್ಮ ದೇಶದ ಸೇನೆ, ನೌಕಾದಳ ಮತ್ತು ವಾಯುದಳಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಭಾರತದಲ್ಲಿ ವಿಶ್ವದಲ್ಲೇ ಅಧಿಕ ಸಂಖ್ಯೆಯ ಮಹಿಳಾ ಪೈಲಟ್‌ಗಳಿದ್ದಾರೆ. ಅಷ್ಟೇ ಅಲ್ಲದೇ ನಮ್ಮ Mars Mission ಉಪಗ್ರಹ ಉಡಾವಣೆಯಲ್ಲಿಯೂ ಕೈಜೋಡಿಸಿ ಮುನ್ನಡೆಸುತ್ತಿದ್ದಾರೆ. ಮಹಿಳಾ ಸಬಲೀಕರಣದಿಂದ ದೇಶವು ರೂಪಾಂತರಗೊಳ್ಳುವುದೆಂಬುದು ನನ್ನ ನಂಬಿಕೆಯಾಗಿದೆ ಎಂದು ಭಾರತ ಮಹಿಳೆಯರಿಗೆ ನೀಡುವ ಗೌರವದ ಬಗ್ಗೆ ತಿಳಿಸಿದರು.

ಭಾರತವು ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಯುವಕರನ್ನು ಒಳಗೊಂಡ ವಿಶ್ವದ ಪ್ರಾಚೀನ ದೇಶವಾಗಿದೆ. ದೇಶದ ಯುವಕರು ಭಾರತವನ್ನು ತಂತ್ರಜ್ಞಾನದ ಕೇಂದ್ರಬಿಂದುವಾಗಿ ಮಾಡುತ್ತಿದ್ದಾರೆ. Coding, Quantum Computing, Mlcay Mobile Apps, Firtech, Data Science ಗೆ ಭಾರತದ ಯುವಜನತೆ ಇವುಗಳನ್ನು ಸಂಶೋಧಿಸುವಲ್ಲಿ , ಉಪಯೋಗಿಸುವಲ್ಲಿ, ಅಳವಡಿಸುವುದರಲ್ಲಿ ವಿಶ್ವಕ್ಕೆ ಮಾದರಿಯಾಗಿದೆ. ಕಳೆದ 9 ವರ್ಷಗಳಲ್ಲಿ 100 ಕೋಟಿಗೂ ಅಧಿಕ ಜನರಿಗೆ Digital Biometric Identity Connectivity ಸೌಲಭ್ಯ ದೊರೆತಿದೆ. ಅವರ ಬ್ಯಾಂಕ್ ಖಾತೆಗಳನ್ನು ಅವರ ಮೊಬೈಲ್ ಫೋನ್‌ಗಳಿಗೆ ಆ್ಯಪ್‌ಗಳ ಮೂಲಕ ಜೋಡಿಲಾಗಿದೆ. ಈ ಡಿಜಿಟಲ್ ಸಾರ್ವಜನಿಕ ಮೂಲಭೂತ ಸೌಕರ್ಯವು ಜನರಿಗೆ ಕ್ಷಣ ಕಾಲದಲ್ಲಿ ಹಣ ಸಹಾಯದ ನೆರವನ್ನು ಕಲ್ಪಿಸುತ್ತದೆ. 85 ಕೋಟಿಗೂ ಅಧಿಕ ದೇಶದ ಜನರಿಗೆ ಡಿಬಿಟಿ ಮೂಲಕ ಸಾವಿರಾರು ಕೋಟಿ ರೂಗಳನ್ನು ವಿವಿಧ ಫಲಾನುಭವಿಗಳ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಜಮೆ ಮಾಡುವಲ್ಲಿ ಪ್ರಯೋಜನಕಾರಿಯಾಗಿದೆ. ಪ್ರತಿ ವರ್ಷ 10 ಕೋಟಿಗೂ ಅಧಿಕ ರೈತರು, ವರ್ಷದಲ್ಲಿ ಮೂರು ಬಾರಿ ಡಿಬಿಟಿ ಮೂಲಕ ಸರ್ಕಾರದಿಂದ ಧನ ಸಹಾಯ ಪಡೆಯುತ್ತಿದ್ದಾರೆ. ಆ ಹಣದ ಮೊತ್ತವು 320 ಬಿಲಿಯನ್ ಅಮೇರಿಕನ್ ಡಾಲರ್‌ಗಳಷ್ಟಾಗುತ್ತದೆ. ಈ ಪ್ರಕ್ರಿಯೆಯಲ್ಲಿ 25 ಬಿಲಿಯನ್ ಡಾಲರ್‌ಗಳಷ್ಟು ಬೀದಿ ಬದಿ ವ್ಯಾಪಾರಿಗಳಿಂದ ಹಿಡಿದು ಎಲ್ಲರೂ ಮೊಬೈಲ್‌ಫೋನ್ ಮೂಲಕ Digital payment ಮಾಡುತ್ತಿದ್ದಾರೆ. ಕಳೆದ ವರ್ಷ ವಿಶ್ವದಲ್ಲಿ ಪ್ರತಿ 100 Digital payment ಗಳ ಪೈಕಿ 46 payment ಭಾರತದ್ದಾಗಿತ್ತು, ಅಂದಾಜು 400 ಸಾವಿರ ಮೈಲಿಗಳಷ್ಟು ಉದ್ದದ ಆಪ್ಟಿಕಲ್‌ಫೈಬರ್ ಕೇಬಲ್ ಮತ್ತು ಅಗ್ಗದ ಬೆಲೆಯಲ್ಲಿನ ಡಾಟಾ ಬಳಕೆಯು ನಮಗೆ ಅನೇಕ ಸೌಲಭ್ಯಗಳನ್ನು ಒದಗಿಸುತ್ತಿದೆ. ರೈತರು ಹವಾಮಾನ ಮಾಹಿತಿ ಪಡೆಯುತ್ತಿದ್ದಾರೆ. ಹಿರಿಯ ನಾಗರಿಕರು ಸಾಮಾಜಿಕ ಭದ್ರತೆಯ ವೇತನ ಪಡೆದರೆ, ವಿದ್ಯಾರ್ಥಿಗಳು ವಿದ್ಯಾರ್ಥಿವೇತನ ಪಡೆಯುತ್ತಾರೆ, ವೈದ್ಯರು ಔಷಧ ಪೂರೈಸುತ್ತಾರೆ, ಮೀನುಗಾರರು ಮೀನು, ಹವಳವಿರುವ ಸ್ಥಳವನ್ನು ಕಂಡುಕೊಳ್ಳುತ್ತಾರೆ. ಇವೆಲ್ಲವೂ ಅವರ ಮೊಬೈಲ್ ಫೋನ್‌ನ ಒಂದು ಕ್ಲಿಕ್‌ನಿಂದ ಪಡೆಯುತ್ತಾರೆ ಎನ್ನುವ ಮೂಲಕ ಭಾರತ ಡಿಜಿಟಲಿ ಎಷ್ಟು ಸಧೃಢವಾಗಿದೆ ಎನ್ನುವುದನ್ನು ವಿವರಿಸಿದರು.

ನಾವು ವಿಶ್ವದ 5ನೇ ಅಗ್ರ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮುವುದರ ಜೊತೆಗೆ ನಾವು ನಮ್ಮ ಸೌರಶಕ್ತಿ ಬಳಕೆಯಲ್ಲಿ 2,300 ಶೇಕಡ ಅಭಿವೃದ್ಧಿ ಹೊಂದಿದ್ದೇವೆ. ಭಾರತವು ತನ್ನ ಶಕ್ತಿಮೂಲಗಳ ಪೈಕಿ ಶೇ. 40ರಷ್ಟು ನಾವು ನವೀಕರಿಸಬಹುದಾದ ಶಕ್ತಿ ಮೂಲಗಳಿಂದ ಪಡೆದಿದ್ದೇವೆ. ಜಿ-20 ರಾಷ್ಟ್ರಗಳಲ್ಲಿ ಅಗ್ರಸ್ಥಾನದಲ್ಲಿದ್ದೇವೆ. 2023ರ ಗುರಿಯನ್ನು ನಾವು ಈಗಾಗಲೇ ತಲುಪಿಬಿಟ್ಟಿದ್ದೇವೆ, ಆದರೆ ನಾವು ಅಷ್ಟಕ್ಕೇ ನಿಲ್ಲಲಿಲ್ಲ. GLASGOW SIMMITನಲ್ಲಿ ನಾವು ಫೆಅಖಎಉಣ ಗುರಿಯನ್ನು ವೇಗವಾಗಿ ತಲುಪುವ ನಿಟ್ಟಿನಲ್ಲಿ ನಮ್ಮ ಸಲಹೆಗಳನ್ನು ನೀಡಿದ್ದೇವೆ ಎಂದು ಭಾರತಕ್ಕೆ ಭವಿಷ್ಯದ ಬಗೆಗಿರುವ ಕಾಳಜಿಯನ್ನು ತಿಳಿಸಿದರು.

ನಾವು ನಂಬುವುದು, ನಡೆಯುವುದು 'ವಸುದೈವ ಕುಟುಂಬಕಂ' ಆಧಾರದಲ್ಲಿ. ವಿಶ್ವವೇ ಒಂದು ಪರಿವಾರ, ಇಲ್ಲಿ ಎಲ್ಲರಿಗೂ ಸಮಾನವಾಗಿ ಲಾಭವಾಗಬೇಕು. One Sun, One World, One Grid ಮೂಲಕ ಇಡೀ ವಿಶ್ವವೇ ಒಗ್ಗಡಬೇಕು. One Earth, One Health ಧ್ಯೇಯವು ಉತ್ತಮ ಆರೋಗ್ಯ ಸೌಕರ್ಯ ಕಲ್ಪಿಸಲು ಮುನ್ನುಡಿಯಾಗಬೇಕು. ಇದು ಸಸ್ಯಗಳು ಮತ್ತು ಪ್ರಾಣಿಗಳನ್ನು ಒಗ್ಗೂಡಿಸುವಂತಿರಬೇಕು. ಜಿ-20 ಯೂ ಸಹ One Earth, One Family, One Future ಅನ್ನು ಪ್ರತಿಪಾದಿಸುತ್ತದೆ. ಇಡೀ ವಿಶ್ವವು ಈ ವರ್ಷವನ್ನು ಅಂತರಾಷ್ಟ್ರೀಯ ಸಿರಿಧಾನ್ಯಗಳ ವರ್ಷವೆಂದು ಆಚರಿಸುತ್ತಿದ್ದಾರೆ. ಇದು ಸುಸ್ಥಿರ ಕೃಷಿ ಮತ್ತು ಪೋಷಣೆಯನ್ನು ಪೂರೈಸುತ್ತದೆ. ಕೋವಿಡ್ ಸಮಯದಲ್ಲಿ ವಿಶ್ವದ 150 ರಾಷ್ಟ್ರಗಳಿಗೆ ಸಾಧ್ಯವಾದಷ್ಟು ಮಟ್ಟದಲ್ಲಿ ಸಹಾಯಹಸ್ತ ಚಾಚಿದ್ದೇವೆ. ನಾವು ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುತ್ತೇವೆಯೇ ಹೊರತು ಅವಲಂಬಿತಗೊಳ್ಳುವುದನ್ನಲ್ಲ ಎನ್ನುವ ಮೂಲಕ ವಿಶ್ವದ ಬಗ್ಗೆ ನಮ್ಮ ದೇಶಕ್ಕಿರುವ ಕಾಳಜಿ ಮತ್ತು ನಮ್ಮ ದೇಶ ಸಾಮರ್ಥ್ಯದ ಬಗ್ಗೆ ತಿಳಿಸಿದರು.

ವಿಶ್ವಕ್ಕೆ ಭಾರತದ ಬದ್ಧತೆಯ ವಿಷಯ ಬಂದಾಗ ವಿಶಿಷ್ಟವಾದ

ಸ್ಥಾನವಿದೆ. ನಮ್ಮೊಂದಿಗಿನ ಸಂಬಂಧ ನಿಮಗೆ ಅತ್ಯಂತ ಮಹತ್ವವಾದದ್ದು ಎಂದು ನಮಗೆ ತಿಳಿದಿದೆ. ಭಾರತದಲ್ಲಿ ರಕ್ಷಣಾ ವಲಯ ಮತ್ತು ಬಾಹ್ಯಾಕಾಶ ವಿಜ್ಞಾನ ಅಭಿವೃದ್ಧಿ ಹೊಂದಿದರೆ, ಅಮೆರಿಕಾದ ರಾಜ್ಯಗಳಾದ ವಾಷಿಂಗ್‌ಟನ್, ಮ್ಯಾರಿಜೋನಾ, ಅಲಿಬಾಮಾ, ಜಾರ್ಜಿಯಾ, ದಕ್ಷಿಣ ಕೊರೊಲಿನಾ ಮತ್ತು ಪೆನ್ಸಿಲ್ವೇನಿಯಾದ ಉದ್ಯಮಗಳಿಗೆ ಉತ್ತೇಜನ ದೊರೆಯಲಿವೆ. ಅಮೆರಿಕಾದ ಸಂಶೋಧನಾ ಸಂಸ್ಥೆಗಳು ಭಾರತದಲ್ಲಿ ಪ್ರಾರಂಭವಾಗುತ್ತದೆಯೋ, ಯಾವಾಗ ಭಾರತೀಯರು ಹೆಚ್ಚು ವಿಮಾನಯಾನ ನಡೆಸುವರೋ ಭಾರತದೊಂದಿಗೆ ವಿಮಾನಗಳಿಗಾಗಿ ಕೇವಲ ಒಂದು ಒಪ್ಪಂದವು ಅಮೆರಿಕಾದ 10 ಲಕ್ಷಕ್ಕೂ ಅಧಿಕ ಉದ್ಯೋಗಗಳನ್ನು ಸೃಷ್ಟಿಸುವುದು. ಭಾರತ ಮತ್ತು ಅಮೆರಿಕ ಸೆಮಿಕಂಡಕ್ಟರ್ ಮತ್ತು ಪ್ರಮುಖ ಖನಿಜಗಳ ಉದ್ಯಮದಲ್ಲಿ ಒಗ್ಗೂಡಿದರೆ, ಇಡೀ ವಿಶ್ವದಲ್ಲಿ ಒಂದು ಬೃಹತ್ ಸರಬರಾಜು ಒದಗಿಸಲು ಪೂರಕವಾಗಿರುತ್ತದೆ ಮತ್ತು ಹೆಚ್ಚು ವೈವಿಧ್ಯಮಯ, ಪ್ರಾದೇಶಿಕ ಹಾಗೂ ಹೆಚ್ಚು ವಿಶ್ವಾಸಾರ್ಹವಾಗಿರುತ್ತದೆ. ಈ ಶತಮಾನದ ಪ್ರಾರಂಭದಲ್ಲಿ ನಾವು ರಕ್ಷಣಾ ವಲಯದ ಒಪ್ಪಂದಗಳಲ್ಲಿ ಅಪರಿಚಿತರಿದ್ದೆವು, ಆದರೆ ಇಂದು ಅಮೆರಿಕಾ ಭಾರತದ ರಕ್ಷಣಾ ವಲಯದ ಅತ್ಯಂತ ಪ್ರಮುಖ ಪಾಲುದಾರ ರಾಷ್ಟ್ರವಾಗಿದೆ. ಇಂದು ಭಾರತ ಮತ್ತು ಅಮೆರಿಕಾ ಒಟ್ಟಾಗಿ ಬಾಹ್ಯಾಕಾಶ, ಸಾಗರದಡಿಗಳಲ್ಲಿ, ವಿಜ್ಞಾನ, ಸ್ಟಾರ್ಟ್‌ಅಪ್ ಮತ್ತು ಸಮರ್ಥನೀಯತೆಯಲ್ಲಿ, ಕೃಷಿ, ಕೈಗಾರಿಕೆ, ಹಣಕಾಸು ವಿಚಾರಗಳಲ್ಲಿ, ಕಲೆ, ಕೃತಕ ಬುದ್ಧಿಮತ್ತತೆ, ಶಕ್ತಿ ಸಂಪನ್ಮೂಲಗಳು, ಸೆಮಿಕಂಡಕ್ಟರ್, ಶಿಕ್ಷಣ, ವೈದ್ಯಕೀಯ ಸೇವೆ, ಮಾನವೀಯ ಪ್ರಯತ್ನಗಳಲ್ಲಿ ಇನ್ನೂ ಅನೇಕ ವಲಯಗಳಲ್ಲಿ ಒಂದಾಗಿ ಮುನ್ನಡೆಯುತ್ತಿದ್ದೇವೆ. ನಮ್ಮ ಸಂಬಂಧಗಳಿಗೆ ಅಂತ್ಯವಿಲ್ಲ ಎಂದು ಹೇಳಿದರು.

ತಂತ್ರಜ್ಞಾನವು 21ನೇ ಶತಮಾನದ ಸುರಕ್ಷತೆ, ಸುಭಿಕ್ಷತೆ ಮತ್ತು ನಾಯಕತ್ವವನ್ನು ನಿರ್ಧರಿಸುತ್ತದೆ. ಆದ್ದರಿಂದಲೇ ನಾವಿಬ್ಬರೂ ಒಗ್ಗೂಡಿ, Critical and Emerging Technologiesನ್ನು ರಚಿಸಬೇಕಿದೆ. ಕಳೆದ ದಶಕಗಳಲ್ಲಿ ನಾವು ಹಲವು ವಿಧ್ವಂಸಕರ ಬೆಳವಣಿಗೆಗಳನ್ನು ನೋಡುತ್ತಿದ್ದೇವೆ. ಉಕ್ರೇನ್ ಸಂಘರ್ಷದ ಕಾರಣ ಯೂರೋಪ್ ಯುದ್ಧವನ್ನೆದುರಿಸುತ್ತಿದೆ. ಇದರಿಂದ ಅನೇಕ ರಾಷ್ಟ್ರಗಳಿಗೆ ತೊಂದರೆಯಾಗಿದೆ. ವಿವಾದಗಳನ್ನು ಶಾಂತಿಯುತವಾಗಿ ಬಗೆಹರಿಸಿಕೊಳ್ಳುವುದು ಮತ್ತು ಸಾರ್ವಭೌಮತ್ವ ಹಾಗೂ ಪ್ರಾದೇಶಿಕ ಸಮಗ್ರತೆಗೆ ಗೌರವ ನೀಡುವ ಮೂಲಕ ಮುನ್ನಡೆಯಬೇಕಿದೆ. ಇದು ಸೌಹಾರ್ದ ಮತ್ತು ಮಾತುಕತೆ ನಡೆಸಲು ಪ್ರಶಸ್ತವಾದ ಸಮಯ ಎಂದು ಭಾರತ ಮತ್ತು ಅಮೆರಿಕಾಕ್ಕಿರುವ ಜವಾಬ್ದಾರಿಯನ್ನು ನೆನಪಿಸಿದರು.

ಭಾರತ ಪೆಸಿಫಿಕ್ ಪ್ರದೇಶದ ಭದ್ರತೆ ನಮಗೆ ಪ್ರಮುಖ ವಿಷಯವಾಗಿದೆ. ನಾವು ಮುಕ್ತವಾದ ಭಾರತ-ಫೆಸಿಫಿಕ್ ಪ್ರದೇಶವನ್ನು ಹಂಚಿಕೊಳ್ಳುತ್ತೇವೆ. ಸದೃಢ ಸಾಗರಗಳನ್ನೊಳಗೊಂಡ, ಅಂತರಾಷ್ಟ್ರೀಯ ಕಾನೂನಿನ ಚೌಕಟ್ಟಿಗೆ ಒಳಪಡುವ ಯಾವುದೇ ಪ್ರಾಬಲ್ಯತೆಯಿಂದ ಮುಕ್ತವಾದ ಹಾಗೂ ASEAN ಸಮೂಹದ ಕೇಂದ್ರಿತ ಪ್ರದೇಶವಾಗಿದೆ. ಈ ಪ್ರದೇಶದಲ್ಲಿ ಎಲ್ಲಾ ಸಣ್ಣ ಪುಟ್ಟ ಮತ್ತು ದೊಡ್ಡ ರಾಷ್ಟ್ರಗಳು ಮುಕ್ತವಾಗಿ ಹಾಗೂ ನಿರ್ಭೀತವಾಗಿ ವಾಣಿಜ್ಯ ವ್ಯವಹಾರಗಳನ್ನು ನಡೆಸುತ್ತವೆ. ಹಾಗಾಗಿ ಈ ಪ್ರದೇಶವನ್ನು ನಾವಿಬ್ಬರೂ ಒಗ್ಗೂಡಿ ಶಾಂತಿ ಮತ್ತು ಸಮೃದ್ಧಿಯ ಪ್ರದೇಶವನ್ನಾಗಿಸಬೇಕಿದೆ.

9/11 ರ ಘಟನೆಯ ಎರಡು ದಶಕಗಳ ನಂತರ ಮತ್ತು ಮುಂಬೈ 26/11ರ ಒಂದು ದಶಕದ ನಂತರ ಉಗ್ರವಾದ ಮತ್ತು ಮೂಲಭೂತವಾದದಿಂದ ವಿಶ್ವವನ್ನು ರಕ್ಷಿಸಬೇಕಿದೆ. ಉಗ್ರವಾದವು ಮಾನವೀಯತೆಯ ಶತ್ರುವಾಗಿದೆ. ನಾವು ಉಗ್ರವಾದವನ್ನು ಪೋಷಿಸುವ ಎಲ್ಲಾ ದುಷ್ಟ ಶಕ್ತಿಗಳನ್ನು ಬೇರು ಸಮೇತ ಕಿತ್ತು ಹಾಕಬೇಕಿದೆ.

ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳುವ ಪರಿಗಣನೆ, ಕಾಳಜಿಯ ಈಗಿನ ಪ್ರಮುಖ ಚರ್ಚೆಯ ವಿಷಯವಾಗಿದೆ. ನಾವು ಬಹು ಪಕ್ಷೀಯತೆಯನ್ನು ಪುನರುಜ್ಜೀವನಗೊಳಿಸಬೇಕಿದೆ ಮತ್ತು ಅನೇಕ ಸಂಸ್ಥೆಗಳನ್ನು ಸುಧಾರಿಸಬೇಕಿದೆ. ವಿಶ್ವಸಂಸ್ಥೆ ಸೇರಿದಂತೆ ನಮ್ಮ ಎಲ್ಲಾ ಜಾಗತಿಕ ಆಡಳಿತ ಸಂಸ್ಥೆಗಳಿಗೆ ಅನ್ವಯವಾಗುವಂತಹ ಉತ್ತಮ ಸಂಪನ್ಮೂಲಗಳು ಮತ್ತು ಪ್ರಾತಿನಿಧ್ಯದೊಂದಿಗೆ ಮುನ್ನಡೆಯಬೇಕಿದೆ. ನಾವು ಎರಡೂ ರಾಷ್ಟ್ರಗಳು ಪಾಲುದಾರ ರಾಷ್ಟ್ರಗಳಾಗಿ ಮುಂಚೂಣಿಯಲ್ಲಿರುತ್ತೇವೆ.

ಇಂದು ನಾವು ನಮ್ಮ ಸಂಬಂಧಗಳ ಹೊಸ ಉದಯಕಾಲದಲ್ಲಿ ನಿಂತಿದ್ದೇವೆ. ಇದು ನಮ್ಮಿಬ್ಬರಿಗಷ್ಟೇ ಅಲ್ಲದೆ ಇಡೀ ವಿಶ್ವದ ಹಣೆಬರಹವನ್ನು ರೂಪಿಸಲಿದೆ ಎಂದು ಭಯೋತ್ಪಾದನೆ ಮತ್ತು ಭಾತರದ ಮತ್ತು ಅಮೆರಿಕಾದ ಸೌಹಾರ್ದ ಸಂಬಂಧದ ಪ್ರಾಮುಖ್ಯತೆಯನ್ನು ತಿಳಿಸಿದರು.

ನಮ್ಮಿಬ್ಬರ ವಿಶ್ವಾಸಾರ್ಹ ಪಾಲುದಾರಿಕೆ ಇಡೀ ವಿಶ್ವಕ್ಕೆ ಸೂರ್ಯನ ರೀತಿ ಬೆಳಕು ಚೆಲ್ಲಲಿದೆ. ನಾವಿಬ್ಬರೂ ಐತಿಹಾಸಿಕವಾಗಿ ಮತ್ತು ಸಾಂದರ್ಭಿಕವಾಗಿ ಬೇರೆ ಬೇರೆ ಬೇರುಗಳನ್ನು ಹೊಂದಿದ್ದರೂ ಸಹ, ನಾವು ಒಂದೇ ಗುರಿಯೊಂದಿಗೆ ಒಂದಾಗಿಸಿದ್ದೇವೆ. ನಮ್ಮ ಪಾಲುದಾರಿಕೆ ಸದೃಢಗೊಂಡಂತೆ ಆರ್ಥಿಕತೆಯೂ ಪ್ರಗತಿ ಹೊಂದುತ್ತದೆ. ಮಾನವೀಯತೆಗೆ ಲಾಭವಾಗುತ್ತದೆ. ನಮ್ಮ ಸಾಗರಗಳು, ಗಗನ ಸುರಕ್ಷಿತವಾಗಿರುತ್ತದೆ, ಪ್ರಜಾಪ್ರಭುತ್ವವು ರಾರಾಜಿಸುತ್ತದೆ ಮತ್ತು ಇದರಿಂದ ವಿಶ್ವವು ಸಮೃದ್ಧವಾಗುತ್ತದೆ. ಇದು ಈ ಶತಮಾನದ ನಮ್ಮ ಕರೆಯಾಗಿದೆ ಎಂದು ಭಾರತದ ಆದರ್ಶದ ಬಗ್ಗೆ, ಅಭಿವೃದ್ಧಿಯ ಬಗ್ಗೆ, ನೀತಿಗಳ ಬಗ್ಗೆ, ಯೋಜನೆ ಮತ್ತು ಯೊಚನೆಗಳ ಬಗ್ಗೆ ಸಮರ್ಥವಾಗಿ, ಗಟ್ಟಿ ಧ್ವನಿಯಲ್ಲಿ ತಮ್ಮ ಐತಿಹಾಸಿಕ ಭಾಷಣದ ಮೂಲಕ ಆಮೆರಿಕಾಕ್ಕೆ ಮತ್ತು ಜಗತ್ತಿಗೆ ಅಮೆರಿಕಾದ ಸದನದಲ್ಲಿ ನಿಂತು ಸಾರಿದರು. ಈ ಮೂಲಕ ಪ್ರಧಾನಿ ಶ್ರೀ ನರೇಂದ್ರ ಮೋದಿಯವರ ಭಾಷಣಕ್ಕೆ ಅಮೆರಿಕಾದ ಸದನ ಎರಡನೇ ಬಾರಿ ಸಾಕ್ಷಿಯಾಗಿ ಸಾರ್ಥಕವಾಯಿತು.





# ನಮ್ಮ ಬೂತ್‌ಗಳಲ್ಲಿ ಸಂಘರ್ಷದ ಅವಶ್ಯಕತೆ ಇಲ್ಲ, ಬದಲಾಗಿ ಸೇವೆಯ ಅವಶ್ಯಕತೆ ಇದೆ...

**ಇತ್ತೀಚಿಗೆ ಮಧ್ಯಪ್ರದೇಶದ ಭೂಪಾಲನಲ್ಲಿ ನಡೆದ ಮೇರಾ ಬೂತ್, ಮಜಬೂತ್ ಕಾರ್ಯಕ್ರಮದಲ್ಲಿ ಬೂತ್ ಕಾರ್ಯಕರ್ತರಿಗೆ ಮಾನ್ಯ ಪ್ರಧಾನಮಂತ್ರಿಯವರು ಕೊಟ್ಟ ಉತ್ತರದ ಸಂಕ್ಷಿಪ್ತ ರೂಪ.**

**ನೀವು ಕೂಡಾ ಮಂಡಲ ಕಾರ್ಯಕರ್ತರಾಗಿ ಕೆಲಸ ಮಾಡಿದ್ದೀರಿ, ಇಂತಹ ರಾಜಕೀಯ ವೈಪರಿತ್ಯಗಳಲ್ಲಿ ಸಮಾಜವನ್ನು ಜೊತೆಯಾಗಿ ಕೊಂಡೊಯ್ಯುವುದು ಹೇಗೆ?**

– ಶ್ರೀ ರಾಮ್ ಪಟೇಲ್ (ಮಧ್ಯಪ್ರದೇಶ)

ಹೌದು, ದೇಶದ ಪ್ರಧಾನಿ, ರಾಜ್ಯದ ಮುಖ್ಯಮಂತ್ರಿ ಆಗಬೇಕಾದರೆ ಕ್ಷೇತ್ರದ ಗ್ರೌಂಡ್ ರಿಪೋರ್ಟ ಮೇಲೆಯೇ ಆಧಾರವಾಗಿರುತ್ತದೆ. ಆ ಮಾಹಿತಿ ಇರುವುದು ಬೂತ್ ಸದಸ್ಯನಲ್ಲಿ ಮಾತ್ರ. ನಮ್ಮದು ಎಸಿ ಹಾಲಿನಲ್ಲಿ ಕುಳಿತು ಮಾಡುವ ಸಂಘಟನೆ ಅಲ್ಲ. ನಮ್ಮ ಕಾರ್ಯಕರ್ತರು ಮಳೆ, ಚಳಿ, ಬಿಸಿಲು ಎನ್ನದೆ ಹಗಲಿರುಳು ದುಡಿಯುತ್ತಾರೆ. ನಮ್ಮಲ್ಲಿ ಬೂತ್ ಕಮಿಟಿಗಳು ಇಲ್ಲದಿದ್ದರೆ ಇವತ್ತು 'ಉಜ್ವಲಾ' ಯೋಜನೆಯೇ ಬರುತ್ತಿರಲಿಲ್ಲ. ನಮ್ಮ ಕಾರ್ಯಕರ್ತರು ಬಡವರ ಮನೆಮನೆಗೆ ತೆರಳಿ ಅವರು ಪಡುವ ಕಷ್ಟವನ್ನು ನೋಡಿ ನಮಗೆ ತಿಳಿಸಿದ ದೆಸೆಯಿಂದಲೇ ಈ ಯೋಜನೆ ಜನ್ಮ ಪಡೆಯಿತು.

ನಮ್ಮ ಬೂತಿನಲ್ಲಿ ನಾವು ವಿಶೇಷ ಕಾರ್ಯಕ್ರಮಗಳನ್ನು ರೂಪಿಸಿ ಜನರಿಗೆ ತಲುಪಿಸಬೇಕು. ಅದು ಒಂದು ಬ್ಲ್ಯಾಕ್ ಬೋರ್ಡ್ ಹಾಕಿ, ಅದರ ಮೇಲೆ ಪ್ರತಿನಿತ್ಯ ಬಿಜೆಪಿ ಸರ್ಕಾರದ ಹೊಸ ಯೋಜನೆ ಮತ್ತು ನೀತಿಗಳ ಕುರಿತು ಬರೆದು ಜನರಿಗೆ ತಲುಪಿಸುವುದು, ಪ್ರಥಮ ಚಿಕಿತ್ಸಾ ಕೇಂದ್ರ ಸ್ಥಾಪಿಸುವುದು, ನಮ್ಮ ಮಾಸ ಪತ್ರಿಕೆಯ ಚಂದಾದಾರರನ್ನಾಗಿ ಮಾಡುವುದು ಅಥವಾ ನಾವೇ ಖರಿದೀಸಿ ಪ್ರತಿದಿನ ಒಂದೊಂದು ಮನೆಗೆ ಹಂಚಿ ಓದಲು ತಿಳಿಸುವುದು, ವಾಟ್ಸಾಪ್ ಗ್ರೂಪುಗಳನ್ನು ರಚಿಸಿ ಅದರಲ್ಲಿ ಸರ್ಕಾರದ ಸಾಧನೆಗಳ ಬಗ್ಗೆ ಮತ್ತು ವಿಶೇಷ ವಿಷಯಗಳನ್ನು ಪಸರಿಸುವುದು, ಹಳೆ ಪುಸ್ತಕಗಳನ್ನು ಸಂಗ್ರಹಿಸಿ ಅವುಗಳನ್ನು ಸರಿಪಡಿಸಿ ಓದಲು ನೀಡುವುದು, ಅಂಗನವಾಡಿಗೆ ಭೇಟಿ ನೀಡುವುದು ಹೀಗೆ ಅನೇಕ ಕೆಲಸಗಳನ್ನು ಮಾಡಬಹುದು. ನಮ್ಮ ಬೂತುಗಳಲ್ಲಿ ಸಂಘರ್ಷದ ಅವಶ್ಯಕತೆ ಇಲ್ಲ ಬದಲಾಗಿ ಸೇವೆಯ ಅವಶ್ಯಕತೆ ಇದೆ.

ನಾವು ಜನರೊಂದಿಗೆ ಬೆರೆಯಬೇಕು, ಈ ತರಹದ ಸಣ್ಣ ಸಣ್ಣ ಕೆಲಸಗಳನ್ನು ಮಾಡುವುದರ ಮೂಲಕ ಪ್ರತಿಯೊಬ್ಬರೂ ಪಕ್ಷದ ಕಾರ್ಯಕರ್ತರಷ್ಟೇ ಆಗಿರದೆ, ಓರ್ವ ಸಾಮಾಜಿಕ ಕಾರ್ಯಕರ್ತನಾಗಿ ಹೊರಹೊಮ್ಮುತ್ತಾನೆ, **ಜನ ಕಾರ್ಯಕರ್ತನನ್ನು ತಾನಾಗಿಯೇ ಒಪ್ಪಿಕೊಳ್ಳುತ್ತಾರೆ ಮತ್ತು ಅವನಿಂದ ದೂರ ಸರಿಯುವ ಪ್ರಶ್ನೆಯೇ ಬರುವುದಿಲ್ಲ.**



**ನಮ್ಮ ಸರ್ಕಾರ ಹಳ್ಳಿಯಿಂದ ದಿಲ್ಲಿಯವರೆಗೂ ಹಲವಾರು ಕಾರ್ಯಕ್ರಮಗಳನ್ನು ರೂಪಿಸಿದೆ. ಓರ್ವ ಪಕ್ಷದ ಕಾರ್ಯಕರ್ತನಾಗಿ ನಾನು ಯಾವ ರೀತಿಯಲ್ಲಿ ಈ ಕಾರ್ಯದಲ್ಲಿ ಕೊಡುಗೆ ನೀಡಬಹುದು?**

– ಶ್ರೀ ಸಲ್ಲಾ ರಾಮಕೃಷ್ಣನ್ (ಆಂಧ್ರಪ್ರದೇಶ)

2047ಕ್ಕೆ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕು ನೂರು ವರ್ಷ ಪೂರ್ಣಗೊಳ್ಳುತ್ತವೆ. ಭಾರತ ವಿಕಸಿತಗೊಳ್ಳಬೇಕೆಂದರೆ ಮೊದಲು ಗ್ರಾಮಗಳು ವಿಕಸಿತಗೊಳ್ಳಬೇಕು. ಹಳ್ಳಿಗಳಲ್ಲಿ ಸ್ವಚ್ಛತೆ, ಸೌರಶಕ್ತಿಯ ಬಗ್ಗೆ ಅರಿವು ಮೂಡಿಸಬೇಕಿದೆ. ರೈತರಿಗೆ ಸೋಲಾರ್ ಪಂಪ್‌ನಿಂದಾಗುವ ಪ್ರಯೋಜನಗಳ ಕುರಿತಂತೆ ತಿಳಿಸಬೇಕು. ನಮ್ಮ ಬೂತಿನಲ್ಲಿ ಯಾರಾದರೂ ವಿದ್ಯಾರ್ಥಿ/ನಿಯರು ಶಾಲೆಯಿಂದ ಡ್ರಾಪ್ ಔಟ್ ಆಗಿದ್ದರೆ ಅವರನ್ನು ಮರಳಿ ಶಾಲೆಗೆ ಸೇರಿಸುವ ಕೆಲಸ ಮಾಡಿ, ಇದರಿಂದ ಸಾಕ್ಷರತೆ ಹೆಚ್ಚುತ್ತದೆ ಮತ್ತು ಪಕ್ಷದ ಕೆಲಸವೂ ಆಗುತ್ತದೆ. ನಿಮ್ಮ ಮತ್ತು ನಿಮ್ಮ ಸ್ನೇಹಿತರ ಬರ್ತ್ ಡೇ, ಮದುವೆ ವಾರ್ಷಿಕೋತ್ಸವಗಳನ್ನು ಅಂಗನವಾಡಿಗಳಲ್ಲಿ ಆಚರಿಸಿ, ಮಕ್ಕಳಿಗೆ ಸಿಹಿ ಹಂಚಿ, ಊಟ ಬಡಿಸಿ ಖುಷಿ ಪಡಿ. ಇದರಿಂದ ಅಪೋಷಣೆಯು ಕೂಡಾ ದೂರವಾಗುತ್ತೆ. ರಾಷ್ಟ್ರದ ನೂತನ ಶಿಕ್ಷಣ ನೀತಿಯಲ್ಲಿರುವಂತೆ ನಿಮ್ಮ ಏರಿಯಾದ ವಿದ್ಯಾರ್ಥಿಗಳೊಂದಿಗೆ ಪ್ರಾಕ್ಟಿಕಲ್ ವಿದ್ಯಾಭ್ಯಾಸಕ್ಕಾಗಿ ಹೊರಗಡೆ ಹೋಗಿ ಬನ್ನಿ. ಒಟ್ಟಾರೆ ಜನರ ಜೀವನದೊಂದಿಗೆ ನೀವು ಕೈಜೋಡಿಸಬೇಕು, ಅವರ ಕಷ್ಟ ಸುಖಗಳಲ್ಲಿ ಭಾಗಿಯಾಗಬೇಕು. ಸರ್ಕಾರದ ಯೋಜನೆಗಳಿಗಿಂತ ಸಮಾಜದ ಶಕ್ತಿ ಒಟ್ಟುಗೂಡಿದರೆ ವಿಕಸಿತ ಭಾರತ ಕಟ್ಟಿಟ್ಟ ಬುತ್ತಿ.

**ಸರ್ಕಾರದ ಕಲ್ಯಾಣಕಾರಿ ಯೋಜನೆಗಳನ್ನು ನಾವು ಯಾವ ರೀತಿಯಾಗಿ ಹೆಚ್ಚಿನ ಸಂಖ್ಯೆ ಜನರಿಗೆ ತಲುಪಿಸಬಹುದು?**

– ಶ್ರೀ ರಿಪು ಸಿಂಗ್ (ಬಿಹಾರ)

ಸರ್ಕಾರದ ಯಾವ ಯೋಜನೆ ಇದ್ದರೂ ಕೂಡಾ ಅದು ನಿಜವಾದ ಫಲಾನುಭವಿಗೆ ತಲುಪುವಂತೆ ಆಗಬೇಕು. ಉದಾಹರಣೆಗೆ ಪಿಎಮ್ ಆವಾಸ್ ಯೋಜನೆಯ ಮೂಲಕ ಬಡವರಿಗೆ ಮನೆ ಕಟ್ಟಿಸಿಕೊಡುವುದು, ಮುದ್ರಾ ಯೋಜನೆಯ ಮೂಲಕ ಯುವಕರಿಗೆ ನೂತನ ಉದ್ಯೋಗಕ್ಕೆ ಸಾಲ ಸೌಲಭ್ಯ, ಆಯುಷ್ಮಾನ್ ಕಾರ್ಡ್ ಮೂಲಕ ಬಡವರಿಗೆ 5 ಲಕ್ಷ ರೂಪಾಯಿವರೆಗೆ ಉಚಿತ ಚಿಕಿತ್ಸೆ ಮತ್ತು ಹತ್ತು ಹಲವು ಯೋಜನೆಗಳು ಬಡವರ್ಗದ ಜನರ ಬಾಗಿಲಿಗೆ ತೆಗೆದುಕೊಂಡು ಹೋಗಬೇಕು. ಇದರಿಂದ ಅವರಲ್ಲಿ ವಿಶ್ವಾಸ ಮೂಡುತ್ತದೆ. ಇದರ ಜೊತೆಗೆ NaMo ಆ್ಯಪ್ ಬಗ್ಗೆ ಮಾಹಿತಿ ನೀಡಿ, ಅದನ್ನು ಉಪಯೋಗಿಸಿಕೊಳ್ಳುವ ವಿಧಾನವನ್ನು ಹೇಳಿಕೊಡುವುದು.

**ಮೊದಲು ಸಾಮಾಜಿಕ ನ್ಯಾಯದ ಹೆಸರಿನಲ್ಲಿ ತುಷ್ಟೀಕರಣವನ್ನು ಹೆಚ್ಚಿಸಲಾಗಿತ್ತು ಆದರೆ ನಮ್ಮ ಸರ್ಕಾರವು ಸಂತಷ್ಟೀಕರಣಕ್ಕೆ ಬಲ ನೀಡಿದೆ. ಹಿಂದಿನ ಸರ್ಕಾರಕ್ಕೂ ಈಗಿನ ಸರ್ಕಾರಕ್ಕೆ ತುಲನೆ ಮಾಡಿ ಜನರಿಗೆ ಯಾವ ರೀತಿಯಾಗಿ ಹೇಳಬೇಕು?**

– ಡಾ. ಹಿಮಾನಿ ವೈಷ್ಣವ್ (ಉತ್ತರಾಖಂಡ)

ಬಡವರನ್ನು ಬಡವರನ್ನಾಗಿ ಇಡುವ, ವಂಚಿತರನ್ನು ವಂಚಿರನ್ನಾಗಿಯೇ ಇಡುವಂತೆ ಮಾಡುವುದೇ ತುಷ್ಟೀಕರಣ. ವೋಟ್ ಬ್ಯಾಂಕಿಗಾಗಿ ಇವರು ಇದೆಲ್ಲವನ್ನು ಮಾಡುತ್ತಾರೆ. ಆದರೆ ನಮಗೆ ದೇಶದ ಹಿತ ಮುಖ್ಯ. ದೇಶದ ಹಿತದಿಂದ, ಜನಸಾಮಾನ್ಯರ ಹಿತ, ಜನಸಾಮಾನ್ಯರ ಹಿತದಿಂದ ದೇಶವು ಮುಂದೆ ಸಾಗುತ್ತದೆ. ನಮ್ಮದು ತುಷ್ಟೀಕರಣದ ಹಾದಿಯಲ್ಲ, ಸಂತುಷ್ಟೀಕರಣದ ಹಾದಿ. ನಮಗೆ ವೋಟ್ ಬ್ಯಾಂಕಿನ ಅವಶ್ಯಕತೆ ಇಲ್ಲ. ಕಾಂಗ್ರೆಸ್ ಸರ್ಕಾರ ವಿವಿಧ ರಾಜ್ಯಗಳಲ್ಲಿ ಸರ್ಕಾರದ ಯೋಜನೆಗಳ ಪರಿಚಯನೇ ಮಾಡಿಲ್ಲ. ಎಷ್ಟೋ ಅನುಸೂಚಿತ ಜಾತಿಗಳನ್ನು ಯೋಜನೆಗಳಿಂದ ವಂಚಿತರನ್ನಾಗಿ ಮಾಡಿದೆ. ಸಾಮಾಜಿಕ ನ್ಯಾಯದ ಹೆಸರಿನಲ್ಲಿ ವೋಟ್ ಕೇಳಲು ಇವರಿಗೆ ನಾಚಿಕೆ ಆಗಬೇಕು. ನಾವು ಪಿಎಮ್ ಸ್ವನಿಧಿ ಹೆಸರಿನಲ್ಲಿ ಬೀದಿ ವ್ಯಾಪಾರಿಗಳಿಗೆ ಸಾಲ ನೀಡಿ ಸಶಕ್ತರನ್ನಾಗಿ ಮಾಡಿ ಸ್ವಂತ ಉದ್ಯೋಗ ಮಾಡಲು ಅವಕಾಶ ನೀಡಿದೆ ಮತ್ತು ಪಿಎಂ ವಿಶ್ವಕರ್ಮ ಹೆಸರಿನಲ್ಲಿ ಕರಕುಶಲಕರ್ಮಿಗಳಿಗೆ ಸಹಾಯಹಸ್ತ ಚಾಚಿದೆ.

**ಮೋದಿ ಜೀ ನೀವು ದೇಶಕ್ಕಾಗಿ ಕೆಲಸಮಾಡುತ್ತಿದ್ದೀರಿ ಆದರೆ ನಿಮಗೆ ವಿರೋಧವು ಕೂಡಾ ಮುಗಿಲುಮುಟ್ಟಿದೆ. ಮೊದಲು ತ್ರಿವಳಿ ತಲಾಖ್ ಈಗ ಏಕರೂಪ ನಾಗರಿಕ ಸಂಹಿತೆ (UCC) ಗೆ ನಮ್ಮ ಮುಸ್ಲಿಂ ಸಹೋದರ/ರಿಯರು ವಿರೋಧ ವ್ಯಕ್ತ ಮಾಡುತ್ತಿದ್ದಾರೆ. ಅವರಿಗೆ ನಾವು ಯಾವ ರೀತಿಯಾಗಿ ತಿಳಿ ಹೇಳಬೇಕು ಎಂಬುದನ್ನು ಮಾರ್ಗದರ್ಶನ ಮಾಡಿ.**

– ಕು. ರಾಣಿ ಚೌರಾಸಿಯಾ (ಉತ್ತರ ಪ್ರದೇಶ)

ಯಾರು ವೋಟ್ ಬ್ಯಾಂಕಿಗಾಗಿ ತ್ರಿವಳಿ ತಲಾಖ್ ವಿರುದ್ಧ ಮಾತನಾಡುತ್ತಾರೋ ಅವರು ಮುಸ್ಲಿಂ ಹೆಣ್ಣುಮಕ್ಕಳಿಗೆ ಅನ್ಯಾಯ ಮಾಡುತ್ತಿದ್ದಾರೆ. ತ್ರಿವಳಿ ತಲಾಖ್ ಇದು ಕೇವಲ ಆ ಹೆಣ್ಣುಮಗಳಿಗೆ ಹಾಳುಮಾಡುವುದಲ್ಲದೇ ಅವಳ ತವರುಮನೆಯನ್ನೂ ಸಂಪೂರ್ಣ ಹಾಳುಮಾಡುತ್ತದೆ. ಎಲ್ಲ ಮುಸ್ಲಿಂ ದೇಶಗಳಲ್ಲಿ ಇದನ್ನು ನಿಷೇಧ

ಮಾಡಿದ್ದಾರೆ. ಈಜಿಪ್ಟ್ ದೇಶದಲ್ಲಿ ಸುಮಾರು 90% ಸುನ್ನಿ ಮುಸ್ಲಿಂ ಇದ್ದಾರೆ, ಆದರೆ ನಮಗಿಂತ 90ವರ್ಷ ಮೊದಲೇ ಅವರು ತಿವಳಿ ತಲಾಖ್‌ನ್ನು ನಿಷೇಧಿಸಿದ್ದಾರೆ. ಅಷ್ಟೆ ಅಲ್ಲದೇ ಮುಸ್ಲಿಂ ದೇಶಗಳಾದ ಕತಾರ್, ಜೋರ್ಡಾನ್, ಇಂಡೋನೇಷಿಯಾ, ಸಿರಿಯಾ, ಬಾಂಗ್ಲಾದೇಶಗಳಲ್ಲಿ ನಿಷೇಧ ಮಾಡಿಲ್ಲವೇ!? ನಾವು ನಿಷೇಧ ಮಾಡಿರುವ ಕಾರಣಕ್ಕೆ ಮುಸ್ಲಿಂ ತಾಯಂದಿರು, ಸಹೋದರಿಯರು ಭಾಜಪಾ ಜೊತೆ ನಿಲ್ಲುತ್ತಾರೆ, ಮೋದಿ ಜೊತೆ ನಿಲ್ಲುತ್ತಾರೆ.

ದೇಶ ಎಂಬ ಒಂದೇ ಮನೆಯಲ್ಲಿ ಪ್ರತಿ ಮನೆ ಸದಸ್ಯನಿಗೆ ಒಂದೊಂದು ನಿಯಮಗಳು ಇದ್ರೆ, ಆ ಮನೆ ಚೆನ್ನಾಗಿ ನಡೆಯುತ್ತದೆಯೇ!? ನಮ್ಮ ಸಂವಿಧಾನ ಮತ್ತು ಸುಪ್ರೀಂ ಕೋರ್ಟ್ ಹೇಳುತ್ತದೆ ದೇಶದಲ್ಲಿ ಏಕರೂಪ ನಾಗರಿಕ ಸಂಹಿತೆ ಜಾರಿ ಮಾಡಬೇಕೆಂದು. ಆದರೆ ಈ ಜನ ತಮ್ಮ ವೋಟ್ ಬ್ಯಾಂಕ್ ರಾಜಕಾರಣಕ್ಕಾಗಿ ಇದನ್ನು ವಿರೋಧಿಸುತ್ತಿದ್ದಾರೆ.

**ಬೇರೆ ಬೇರೆ ವಿಚಾರಧಾರೆಗಳುಳ್ಳ ಮತ್ತು ಪರಸ್ಪರ ಅವುರುಗಳೇ ವಿರೋಧಿಸಿಕೊಳ್ಳುವ ಪಕ್ಷಗಳು ಬಿಜೆಪಿ ವಿರುದ್ಧ ಒಟ್ಟಾಗಿ ಹೋರಾಡಲು ಸಿದ್ಧವಾಗಿವೆ. ಇದನ್ನು ನೀವು ಯಾವ ರೀತಿಯಾಗಿ ನೋಡುತ್ತೀರಿ?**

– ಶ್ರೀಮತಿ ಹೇತಲ್ ಜಾನಿ (ಗುಜರಾತ್)

ಇತ್ತೀಚಿಗೆ 'ಗ್ಯಾರಂಟಿ' ಎಂಬ ಹೊಸ ಶಬ್ದ ತುಂಬಾ ಜನಪ್ರಿಯತೆ ಪಡೆದುಕೊಂಡಿದೆ. ವಿಪಕ್ಷಗಳು ಇದನ್ನೆ ತಮ್ಮ ಗಾಳವನ್ನಾಗಿ ಮಾಡಿಕೊಂಡಿವೆ. ಇದು ಇವರುಗಳು ಕೆಲಸದ ಗ್ಯಾರಂಟಿ ಅಲ್ಲ, ಇದು ಅವರ ಭ್ರಷ್ಟಾಚಾರದ ಗ್ಯಾರಂಟಿ. 2ಜಿ, ಕಾಮನ್ ವೆಲ್ತ್, ಹೆಲಿಕಾಪ್ಟರನಿಂದ ಸಬ್ ಮರಿನ್‌ವರೆಗೂ ಕಾಂಗ್ರೆಸ್ ಲಕ್ಷಾಂತರ ಕೋಟಿಗಳ ಹಗರಣ ಮಾಡಿದೆ. ಜೊತೆಗೆ RJD, DMK, NCP ಎಲ್ಲವೂ ಒಂದಿಲ್ಲಾವೊಂದು ಹಗರಣಗಳಲ್ಲಿ ಭಾಗಿಯಾಗಿವೆ. ಈ ದೇಶವು ಭ್ರಷ್ಟಾಚಾರದ ಗ್ಯಾರಂಟಿಯನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಇವರುಗಳ ಎಲ್ಲ ಗ್ಯಾರಂಟಿಗಳ ಮೇಲೆ ನನ್ನದೊಂದು ಗ್ಯಾರಂಟಿ ಇದೆ. ಅದು ಅವರಿಗೆ ತಕ್ಕ ಶಾಸ್ತಿ ಮಾಡುವುದು. ಎಲ್ಲ ವಿಪಕ್ಷಗಳ ಒಟ್ಟು ಭ್ರಷ್ಟಾಚಾರದ ಮೊತ್ತ 20ಲಕ್ಷ ಕೋಟಿ. ಮತ್ತೊಬ್ಬರ ಪರಿವಾರವನ್ನು ಬೆಳಸಬೇಕೆಂದರೆ ಬೇರೆ ಬೇರೆ ಪಕ್ಷಗಳಿಗೆ ಮತ ನೀಡಿ. ನಿಮ್ಮ, ನಿಮ್ಮ ಮಕ್ಕಳ ಮತ್ತು ಪರಿವಾರವನ್ನು ಬಲಗೊಳಿಸಬೇಕಾದರೆ ಬಿಜೆಪಿಗೆ ಮಾತ್ರ ಮತ ನೀಡಿ.

**ಬಿಜೆಪಿ ಸರ್ಕಾರದ ಹಲವಾರು ಯೋಜನೆಗಳಿಂದ ಜನರಿಗೆ ಸಾಕಷ್ಟು ಉಳಿತಾಯವಾಗಿದೆ. ಇದರ ಬಗ್ಗೆ ಜನರಿಗೆ ಬೂತ್ ಮಟ್ಟದಲ್ಲಿ ಯಾವ ರೀತಿಯಾಗಿ ತಿಳಿಸಬೇಕು?**

– ಶ್ರೀ ರಚಿತ್ ಕಚ್ವಾ (ರಾಜಸ್ಥಾನ)

ಕೋವಿಡ್ ಬಿಕ್ಕಟ್ಟಿನ ನಂತರ ಯಾವ ಯಾವ ದೇಶದಲ್ಲಿ ಏನೇನಾಗಿದೆ ಎಂಬುದು ನೋಡುತ್ತಿದ್ದೇವೆ. ಪಾಕಿಸ್ತಾನ, ಶ್ರೀಲಂಕಾ ಮತ್ತು ಇತರ ದೇಶಗಳಲ್ಲಿ ಯಾವ ಪರಿಸ್ಥಿತಿಯ ಬಗ್ಗೆ ಅರಿವಿದೆ. ನಮ್ಮ ದೇಶದ ಆರ್ಥಿಕತೆ ಬಲಿಷ್ಠವಾಗಿ ತಲೆ ಎತ್ತು ನಿಂತಿದೆ. ಒಂದು ಸಾಮಾನ್ಯ ಉದಾಹರಣೆ ಕೊಡುವುದಾದಾರೆ ಕಾಂಗ್ರೆಸ್ ಸರ್ಕಾರದಲ್ಲಿ ಒಂದು GB ಇಂಟರ್‌ನೆಟ್‌ಗೆ 300ರೂಪಾಯಿ ಇತ್ತು. ಇವತ್ತು ಅದೇ ಹಣದಲ್ಲಿ ಒಂದು ತಿಂಗಳಿಗಾಗುವಷ್ಟು ಡಾಟಾ ಬರುತ್ತೆ. ಒಬ್ಬ ವ್ಯಕ್ತಿ ತಿಂಗಳಿಗೆ ಕನಿಷ್ಟ 20GB ಖರ್ಚು ಮಾಡಿದರೆ 6,000/- ಬೇಕಾಗಿರುತ್ತಿತ್ತು. ಇವತ್ತು ಅಷ್ಟು ಹಣವನ್ನು ನಾವು ಅವರಿಗೆ ಉಳಿತಾಯ ಮಾಡಿ ಕೊಟ್ಟಿಲ್ಲವೇ?

ಒಂದು LED ಬಲ್ಬ್‌ಗೆ 300-400 ರೂಪಾಯಿ ಇತ್ತು, ಇವತ್ತು 50-60 ರೂಪಾಯಿಗೆ ಬರುತ್ತೆ. ಕಳೆದ ಬಾರಿ 40 ಕೋಟಿ ಬಲ್ಬಗಳನ್ನು ಬಡ ಮತ್ತು ಮಧ್ಯಮ ವರ್ಗದವರಿಗೆ ನೀಡಿದ್ದೆವು, ಇದರಿಂದ 2 ಸಾವಿರ ಕೋಟಿ ರೂ. ಕಮ್ಮಿಯಾಗಿದೆ.

ಪಿಎಮ್ ಜನೌಷಧಿ ಕೇಂದ್ರದಲ್ಲಿ ಅತೀ ಕಡಿಮೆ ದರದಲ್ಲಿ ಔಷಧಿ ಮತ್ತು ಮಾತ್ರೆ ನೀಡಲಾಗುತ್ತಿದೆ. ಆಯುಷ್ಮಾನ ಭಾರತದ ಅಡಿಯಲ್ಲಿ 5 ಲಕ್ಷದವರೆಗೆ ಉಚಿತ ಚಿಕಿತ್ಸೆ. ಈ ಎಲ್ಲ ಯೋಜನೆಗಳಿಂದ ಬಿಜೆಪಿ ಬಡವರ 60 ಸಾವಿರ ಕೋಟಿ ರೂಪಾಯಿಗಳನ್ನು ಉಳಿತಾಯ ಮಾಡಿದೆ.

ಇನ್ನು ಪೆಟ್ರೋಲ್ ದರವು ಕೇಂದ್ರ ಸರ್ಕಾರ ಎರಡು ಬಾರಿ ಎಕ್ಸೈಸ್ ಟ್ಯಾಕ್ಸನ್ನು ಕಮ್ಮಿ ಮಾಡಿದೆ. ಬಿಜೆಪಿ ಸರ್ಕಾರ ಇರುವ ರಾಜ್ಯಗಳಲ್ಲಿ ಪೆಟ್ರೋಲ್ ದರವು 100 ರೂಪಾಯಿಗಿಂತ ಕಮ್ಮಿ ಇದೆ. ಬಿಜೆಪಿಯೇತರ ರಾಜ್ಯದಲ್ಲಿ ಸ್ಟೇಟ್ ಟ್ಯಾಕ್ಸ್ ಹೆಚ್ಚಿಸಿ, ಹೆಚ್ಚಿನ ದರದಲ್ಲಿ ಮಾರಾಟ ಮಾಡಲಾಗುತ್ತಿದೆ.

**ರೈತರ ಬಗ್ಗೆ ಹಿಂದಿನ ಕಾಂಗ್ರೆಸ್ ಸರ್ಕಾರದ ನಿಲುವಿಗೂ ಮತ್ತು ನಮ್ಮ ಸರ್ಕಾರದ ನಿಲುವಿಗೂ ಇರುವ ಅಂತರವನ್ನು ಜನರಿಗೆ ಯಾವ ರೀತಿಯಾಗಿ ತಿಳಿಸಬೇಕು?**

– ಶ್ರೀ ಸಂಜಯ್ ಸೋಡಿ (ಛತ್ತಿಸಘರ್)

ನಮ್ಮ ಸರ್ಕಾರದಲ್ಲಿ ಪಿಎಮ್ ಕಿಸಾನ್ ಸಮ್ಮಾನ್ ನಿಧಿಯ ಮೂಲಕ ನೇರವಾಗಿ ರೈತರ ಖಾತೆಗೆ (DBT) ಹಣವನ್ನು ಜಮಾ ಮಾಡಲಾಗುತ್ತಿದೆ. ಇನ್ನು ನೀವು ರಸಗೊಬ್ಬರದ ಬಗ್ಗೆ ನೋಡುವುದಾದರೆ, ಅದರಲ್ಲೂ ಯೂರಿಯಾವು ಬೇರೆ ದೇಶಗಳಿಗಿಂತ ಅತ್ಯಂತ ಕಡಿಮೆ ಬೆಲೆಯಲ್ಲಿ ಒಂದು ಚೀಲಕ್ಕೆ ಕೇವಲ 260 ರೂಪಾಯಿಯಂತೆ ನೀಡುತ್ತಿದೆ. ಶ್ರೀ ಅನ್ನದ ಮೂಲಕ ನಿಸರ್ಗ ಸ್ನೇಹಿ, ಸೂಪರ್ ಫುಡ್ ಮಿಲೆಟ್‌ಗಳನ್ನು ಅಂತರಾಷ್ಟ್ರೀಯ ಮಟ್ಟದಲ್ಲಿ ಮನ್ನಣೆ ದೊರಕುವಂತೆ ಮಾಡಿದೆ. ಕೇವಲ 9 ವರ್ಷಗಳಲ್ಲಿಯೇ ಜಾಗತಿಕ ಮಟ್ಟದಲ್ಲಿ 10ನೇ ಸ್ಥಾನದಲ್ಲಿದ್ದ ಆರ್ಥಿಕತೆಯನ್ನು 5ನೇ ಸ್ಥಾನಕ್ಕೆ ತೆಗೆದುಕೊಂಡು ಬಂದಿದ್ದೇವೆ.

ಮುಂದಿನ 25 ವರ್ಷ ನಮ್ಮ ದೇಶಕ್ಕೆ ಸ್ವಾತಂತ್ರ್ಯದ ಅಮೃತಕಾಲ. ಸಾಮಾಜಿಕ ನ್ಯಾಯಕ್ಕಾಗಿ ನಾವು ಕೆಲಸ ಮಾಡಬೇಕಿದೆ. ಗಾಂಧಿ-ಅಂಬೇಡ್ಕರ್ ಅವರ ಆದರ್ಶಗಳೊಂದಿಗೆ ವಿಕಸಿತ ಭಾರತಕ್ಕಾಗಿ ಕೈಜೋಡಿಸಿ. ಹಳ್ಳಿಹಳ್ಳಿಗಳಿಗೆ ಹೋಗಿ, ಅಲ್ಲಿನ ಜನರಂತೆ ಅವರೊಡನೆ ವಾಸಿಸಿ. ಹಳ್ಳಿಗಳನ್ನು ವಿಕಸಿತಗೊಳಿಸಿ.



# ಭಾರತದ ಘನತೆ ಹೆಚ್ಚಿಸಿದ
# ಮೋದಿಯವರ ಅಮೇರಿಕಾ ಪ್ರವಾಸ



ಪ್ರತಾಪ್ ಸಿಂಗ್ ಬಿಳಿಗೆರೆ
ಕಾರ್ಯಕರ್ತರು

**ಮೋದಿಯವರ ಅಮೇರಿಕಾ ಭೇಟಿ ಭಾರತದ ಭವಿಷ್ಯವನ್ನೇ ಬದಲಾಯಿಸಬಲ್ಲ ವ್ಯಾಪಾರ, ತಂತ್ರಜ್ಞಾನ, ಬಾಹ್ಯಕಾಶ ಮತ್ತು ರಕ್ಷಣಾ ಕ್ಷೇತ್ರಗಳಿಗೆ ಸಂಬಂಧಪಟ್ಟ ಐತಿಹಾಸಿಕ ಒಪ್ಪಂದಗಳಿಂದಾಗಿ ಜಾಗತಿಕ ಗಮನ ಸೆಳೆಯಿತು. ಭಾರತ ಮತ್ತು ಅಮೇರಿಕಾ ಸಂಬಂಧಗಳು ಹಿಂದೆಂದಿಗಿಂತಲೂ ಈಗ ತುಂಬಾ ಹತ್ತಿರವಾಗಿವೆ. ಹಿಂದೆ ಯುದ್ಧ ನಡೆದರೆ ಶಸ್ತ್ರಾಸ್ತ್ರಗಳಿಗೆ ಭಾರತ ಬೇರೆ ದೇಶಗಳ ಮೇಲೆ ಅವಲಂಬಿತವಾಗಬೇಕಿತ್ತು. ಈಗ ಭಾರತ ರಕ್ಷಣಾ ಕ್ಷೇತ್ರದಲ್ಲಿ ಆತ್ಮನಿರ್ಭರವಾಗುವತ್ತ ದಾಪುಗಾಲಿರಿಸಿದೆ. ಯಾವುದೇ 2 ದೇಶಗಳ ಸೈನ್ಯ ಶಕ್ತಿಯು ಸಮಾನವಾಗಿದ್ದರೆ ಯುದ್ಧದ ಸಂಭವ ಕಡಿಮೆಯಾಗಿರುತ್ತದೆ ಎಂಬ ಮಾತಿಗನುಗುಣವಾಗಿ ಮೋದಿಯವರ ನೇತೃತ್ವದ ಸರ್ಕಾರವು ರಕ್ಷಣಾ ಮತ್ತು ಬಾಹ್ಯಾಕಾಶ ಕ್ಷೇತ್ರಗಳನ್ನು ಹೆಚ್ಚು ಸಶಕ್ತಗೊಳಿಸುತ್ತಿದೆ. ಪ್ರಸ್ತುತ ಅಮೇರಿಕಾ ಭೇಟಿಯ ಸಮಯದಲ್ಲಿ ಹತ್ತಕ್ಕೂ ಹೆಚ್ಚು ಮಹತ್ವದ ಒಪ್ಪಂದಗಳನ್ನು ಮಾಡಿಕೊಳ್ಳಲಾಗಿದೆ.**

ಕಳೆದ ತಿಂಗಳ ಪ್ರಧಾನಿ ನರೇಂದ್ರ ಮೋದಿಯವರ ಐತಿಹಾಸಿಕ ಅಮೇರಿಕಾ ಪ್ರವಾಸ ಹಲವು ವಿಶೇಷತೆಗಳಿಂದ ಕೂಡಿದ್ದು ಅದು ಅತ್ಯುನ್ನತ ಶ್ರೇಣಿಯ ರಾಜತಾಂತ್ರಿಕ ಭೇಟಿಯಾಗಿತ್ತು. ಕೆಂಪು ಹಾಸಿನ ಸ್ವಾಗತ, 21 ಕುಶಾಲುತೋಪುಗಳ ಗೌರವ, ಯು.ಎಸ್. ಕಾಂಗ್ರೆಸ್‌ನ್ನುದ್ದೇಶಿಸಿ ಭಾಷಣ ಮಾಡುವ ಅವಕಾಶ, ಅಂತರರಾಷ್ಟ್ರೀಯ ಯೋಗದಿನದಲ್ಲಿ ಪಾಲ್ಗೊಳ್ಳುವಿಕೆ ಮತ್ತು ಭಾರತದ ಭವಿಷ್ಯವನ್ನೇ ಬದಲಾಯಿಸಬಲ್ಲ ವ್ಯಾಪಾರ, ತಂತ್ರಜ್ಞಾನ, ಬಾಹ್ಯಕಾಶ ಮತ್ತು ರಕ್ಷಣಾ ಕ್ಷೇತ್ರಗಳಿಗೆ ಸಂಬಂಧಪಟ್ಟ ಐತಿಹಾಸಿಕ ಒಪ್ಪಂದಗಳಿಂದಾಗಿ ಜಾಗತಿಕ ಗಮನ ಸೆಳೆಯಿತು. ಭಾರತ ಮತ್ತು ಅಮೇರಿಕಾ ಸಂಬಂಧಗಳು ಹಿಂದೆಂದಿಗಿಂತಲೂ ಈಗ ತುಂಬಾ ಹತ್ತಿರವಾಗಿವೆ. ಹಿಂದೆ ಯುದ್ಧ ನಡೆದರೆ ಶಸ್ತ್ರಾಸ್ತ್ರಗಳಿಗೆ ಭಾರತ ಬೇರೆ ದೇಶಗಳ ಮೇಲೆ ಅವಲಂಬಿತವಾಗಬೇಕಿತ್ತು. ಈಗ ಭಾರತ ರಕ್ಷಣಾ ಕ್ಷೇತ್ರದಲ್ಲಿ ಆತ್ಮನಿರ್ಭರವಾಗುವತ್ತ ದಾಪುಗಾಲಿರಿಸಿದೆ. ಯಾವುದೇ 2 ದೇಶಗಳ ಸೈನ್ಯ ಶಕ್ತಿಯು ಸಮಾನವಾಗಿದ್ದರೆ ಯುದ್ಧದ ಸಂಭವ ಕಡಿಮೆಯಾಗಿರುತ್ತದೆ ಎಂಬ ಮಾತಿಗನುಗುಣವಾಗಿ ಮೋದಿಯವರ ನೇತೃತ್ವದ ಸರ್ಕಾರವು ರಕ್ಷಣಾ ಮತ್ತು ಬಾಹ್ಯಾಕಾಶ ಕ್ಷೇತ್ರಗಳನ್ನು ಹೆಚ್ಚು ಸಶಕ್ತಗೊಳಿಸುತ್ತಿದೆ. ಪ್ರಸ್ತುತ ಅಮೇರಿಕಾ ಭೇಟಿಯ ಸಮಯದಲ್ಲಿ ಹತ್ತಕ್ಕೂ ಹೆಚ್ಚು ಮಹತ್ವದ ಒಪ್ಪಂದಗಳನ್ನು ಮಾಡಿಕೊಳ್ಳಲಾಗಿದೆ.

### ಅತ್ಯಾಧುನಿಕ ಡ್ರೋನ್ ಖರೀದಿ



ರಕ್ಷಣೆ ಮತ್ತು ಗೂಡಾಚರ್ಯ ಕ್ಷೇತ್ರದಲ್ಲಿ ಇತ್ತೀಚೆಗೆ ವಿಮಾನ ಮತ್ತು ಹೆಲಿಕ್ಯಾಪ್ಟರ್‌ಗಳಿಗಿಂತ ಹೆಚ್ಚು ಹೆಸರು ಮಾಡಿರುವ ಮಾನವ ರಹಿತ ವಾಹನ ಡ್ರೋನ್. ಭಾರತವು 3 ಬಿಲಿಯನ್ ಡಾಲರ್ ವೆಚ್ಚದಲ್ಲಿ ಅಂದರೆ ಸುಮಾರು ರೂ.25,000 ಕೋಟಿ ರೂ ವೆಚ್ಚದಲ್ಲಿ ಅಮೇರಿಕಾದ ಹೆಸರಾಂತ ಎಂ.ಕ್ಯೂ 9 ಬಿ ಪ್ರೆಡಿಕ್ಟರ್ ಸರಣಿಯ 30 ಡ್ರೋನ್‌ಗಳನ್ನು ಖರೀದಿಸುವ ಒಪ್ಪಂದ ಏರ್ಪಟ್ಟಿತ್ತು. 1 ಡ್ರೋನ್‌ನ ಬೆಲೆ ಸುಮಾರು 818 ಕೋಟಿ ರೂಗಳಾಗಿದ್ದು ಇದು ಅತ್ಯಾಧುನಿಕ ರಾಫೆಲ್ ಯುದ್ಧ ವಿಮಾನಕ್ಕಿಂತ ಹೆಚ್ಚು ಬೆಲೆಯುಳ್ಳದ್ದಾಗಿದೆ. ಇವುಗಳನ್ನು ಭೂ, ವಾಯು ಮತ್ತು ನೌಕಾಸೇನೆಗಳಲ್ಲಿ ಬಾಂಬ್ ಮತ್ತು ಕ್ಷಿಪಣಿ ದಾಳಿ ನಡೆಸಲು ಮತ್ತು ಗೂಡಾಚರ್ಯ ಮಾಡಲು ಬಳಸಲಾಗುತ್ತಿದೆ. ವಿಶೇಷವೆಂದರೆ ಅಮೇರಿಕಾ ದೇಶವು ನ್ಯಾಟೋ ರಾಷ್ಟ್ರಗಳನ್ನು ಹೊರತು ಪಡಿಸಿ ಮತ್ಯಾವುದೇ ದೇಶಗಳಿಗೆ ಈ ಡ್ರೋನ್‌ಗಳನ್ನು ನೀಡಿಲ್ಲ. ಇವು ಭೂಮಿಯಿಂದ ಸುಮಾರು 50,000 ಅಡಿ ಎತ್ತರಕ್ಕೆ ಹಾರಬಲ್ಲ ಕ್ಷಮತೆ ಹೊಂದಿದ್ದು ಸುಮಾರು 40 ಗಂಟೆಗಳವರೆಗೆ ನಿರಂತರವಾಗಿ ಹಾರಬಲ್ಲವಾಗಿವೆ. ಈ ಡ್ರೋನ್‌ಗಳ ವ್ಯಾಪ್ತಿಯು 11,112 ಕಿ.ಮೀಗಳಾಗಿದ್ದು ಇದರ ನಿಯಂತ್ರಣ ಕೇಂದ್ರವನ್ನು ಭಾರತದಲ್ಲಿ ಸ್ಥಾಪಿಸಿದರೆ ನಮ್ಮ ಭೂಮಿಯ ಅರ್ಧಭಾಗ ಇದರ ವ್ಯಾಪ್ತಿಯಲ್ಲಿ ಬರುತ್ತದೆ. ಚೀನಾ, ಬ್ರಿಟನ್, ಯುರೋಪ್, ಆಸ್ಟ್ರೇಲಿಯಾ ಮತ್ತು ಆಫ್ರಿಕಾದ ದೇಶಗಳು ಇದರ ವ್ಯಾಪ್ತಿಯಲ್ಲಿ ಬರುತ್ತವೆ. ಇದು ಗಂಟೆಗೆ 388 ಕಿ.ಮೀ ವೇಗದಲ್ಲಿ ಹಾರಬಲ್ಲದು ಮತ್ತು ಮಾರಕ ಶಸ್ತ್ರಾಸ್ತ್ರ ಕ್ಷಿಪಣಿಗಳನ್ನು ಒಳಗೊಂಡಂತೆ ಇದರ ತೂಕ 5,670 ಕೆ.ಜಿ ಆಗಿರುತ್ತದೆ. 9 ಕ್ಷಿಪಣಿಗಳನ್ನು, ಆಧುನಿಕ ಬಾಂಬ್‌ಗಳನ್ನು ಹೊತ್ತೊಯ್ಯಬಲ್ಲ ಕಿಲ್ಲರ್ ಡ್ರೋನ್ ಎಂದೇ ಇದನ್ನು ಕರೆಯಲಾಗುತ್ತದೆ.

ಒಂದು ಕಂಟ್ರೋಲ್ ಸೆಂಟರ್‌ನಿಂದ ಇಬ್ಬರು ತಾಂತ್ರಿಕರು ಇದನ್ನು ನಿಯಂತ್ರಿಸಬಲ್ಲರು. ನಿಖರವಾದ ಗುರಿ ಹೊಂದಿರುವ ಅಮೇರಿಕಾದ ಈ ಡ್ರೋನ್ ಕಳೆದ ವರ್ಷ ಅಫ್ಘಾನಿಸ್ಥಾನದ ಕಾಬೂಲ್‌ನ ಕಟ್ಟಡವೊಂದರಲ್ಲಿ ಅವಿತಿದ್ದ ಅಲಖೈದಾ ಉಗ್ರ ಸಂಘಟನೆಯ ಪ್ರಮುಖ ಉಗ್ರ, ಐಮನ್-ಅಲ್-ಜವಾರಿಯನ್ನು ಹೊಡೆದು ಹಾಕುವಲ್ಲಿ ಯಶಸ್ವಿಯಾಯಿತು. ಅಂತೆಯೇ 2020ರಲ್ಲಿ ಅಮೇರಿಕಾವು ತನ್ನ ಶತ್ರು ರಾಷ್ಟ್ರ ಇರಾನ್‌ನ ಕಮಾಂಡರ್ ಜನರಲ್ ಖಾಸಿಂ ಸುಲೈಮಾನಿಯನನ್ನು ಕಾಬೂಲ್‌ನ ಏರ್‌ಪೋರ್ಟ್ ಹತ್ತಿರ ಇಂತಹದೇ ಡ್ರೋನ್ ಮೂಲಕ ಕ್ಷಿಪಣಿಯೊಂದನ್ನು ಹಾರಿಸಿ ಕೊಂದು ಹಾಕಿತ್ತು. 2019 ರಿಂದ ಇದುವರೆಗೆ ಅಮೇರಿಕಾ ದೇಶವು ಈ ಡ್ರೋನ್‌ಗಳ ಸಹಾಯದಿಂದ 4,121 ಏರ್ ಸ್ಟೈಕ್‌ಗಳನ್ನು ಮಾಡಿದ್ದು ಸಾವಿರದ ನೂರಕ್ಕೂ ಹೆಚ್ಚು ಶತ್ರುದೇಶದ ಭಯೋತ್ಪಾದಕರನ್ನು ಹತ್ಯೆಗೈದಿದೆ.

ವರ್ಲ್ಡ್‌ಟ್ರೇಡ್ ಸೆಂಟರ್‌ನ ಮೇಲೆ ದಾಳಿ ಮಾಡಿದ್ದರ ರೂವಾರಿ ಓಸಮಾ ಬಿನ್ ಲಾಡೆನ್‌ನ್ನು ಇದೇ ಡ್ರೋನ್ ಗೂಡಾಚರ್ಯೆ ಮೂಲಕ ಅವನು ಅಡಗಿರುವ ಜಾಗದ ನಿಖರವಾದ ಮಾಹಿತಿಯನ್ನು ಸಂಗ್ರಹಿಸಿ ನೀಡಿತ್ತು. ಈ ಅಮೇರಿಕಾದೊಂದಿಗಿನ ಡ್ರೋನ್ ಖರೀದಿ ಒಪ್ಪಂದವು ಪಾಕಿಸ್ತಾನದಲ್ಲಿರುವ ನಮ್ಮ ಶತ್ರು, ಭಯೋತ್ಪಾದಕರಾದ ದಾವೂದ್ ಇಬ್ರಾಹಿಂ, ಮಸೂದ್ ಅಝರ್ ಮತ್ತು ಹಫೀದ್ ಸೈಯದ್ ನಂತಹ ಉಗ್ರರ ನಿದ್ದೆಗೆಡಿಸಿದೆ. ಈ ಡ್ರೋನ್‌ಗಳು ಆಕಾಶದಲ್ಲಿ ಯುದ್ಧ ವಿಮಾನ ಮತ್ತು ಹೆಲಿಕ್ಯಾಪ್ಟರ್‌ಗಳ ಮೇಲೆ ಹಡಗು ಮತ್ತು ಜಲಂತಾರ್ಗಾಮಿಗಳ ಮೇಲೆ ಮಾರಕಾಸ್ತ್ರಗಳಿಂದ ನಿಖರವಾಗಿ ದಾಳಿ ಮಾಡಬಲ್ಲವು. ಈ ಆಧುನಿಕ ಡ್ರೋನ್‌ಗಳಿಂದ ಭಾರತದ ಚೀನಾ ಮತ್ತು ಪಾಕಿಸ್ಥಾನದ ಗಡಿಗಳಲ್ಲಿ ಗೂಡಾಚರ್ಯೆ ಮಾಡುವುದು ಮತ್ತು ಹಿಂದೂ ಮಹಾಸಾಗರ, ಬಂಗಾಳಕೊಲ್ಲಿಯಲ್ಲಿ ಚೀನಾದ ನಿಗೂಢ ಕಾರ್ಯಗಳ


ಬಗ್ಗೆ ನಿಗಾ ಇಡಬಹುದಾಗಿದೆ. ಈ ಒಪ್ಪಂದವು ಭಾರತದ ರಕ್ಷಣಾ ಕ್ಷೇತ್ರಕ್ಕೆ ಒಂದು ವರವಾಗಿ ಪರಿಣಮಿಸಿದೆ.

### ಭಾರತದಲ್ಲೇ ಆಧುನಿಕ ಯುದ್ಧ ವಿಮಾನಗಳ ಇಂಜಿನ್ ತಯಾರಿಕೆ ಒಪ್ಪಂದ



ಈ ಒಪ್ಪಂದವು ಅಮೇರಿಕಾದ ಜನರಲ್ ಎಲೆಕ್ಟ್ರಿಕಲ್ ಕಂಪನಿಯ ಸಹಯೋಗದೊಂದಿಗೆ ತಂತ್ರಜ್ಞಾನದ ವರ್ಗಾವಣೆಯ ಮೂಲಕ ಭಾರತದ ಹೆಚ್.ಎ.ಎಲ್‌ನಲ್ಲಿ ಜೆಟ್ ಯುದ್ಧ ವಿಮಾನಗಳ ಇಂಜಿನ್‌ಗಳನ್ನು ಉತ್ಪಾದಿಸುವುದಾಗಿದೆ. ಭಾರತದ ಸ್ವದೇಶಿ ನಿರ್ಮಿತ ಯುದ್ಧಮಾನ 'ತೇಜಸ್' ಅಂತಾರಾಷ್ಟ್ರೀಯ ಮಟ್ಟದಲ್ಲಿ ಒಳ್ಳೆಯ ಗುಣಮಟ್ಟದ ಲಘು ಯುದ್ಧ ವಿಮಾನವೆಂದು ಹೆಸರು ಮಾಡಿದೆ. ಇದರ ಸುಧಾರಿತ ಭಾಗವಾಗಿ ಜನರಲ್ ಎಲೆಕ್ಟ್ರಿಕಲ್ಸ್ ಕಂಪನಿಯ ಸಹಯೋಗದಲ್ಲಿ ಭಾರತದಲ್ಲೇ ಆಧುನಿಕ ಯುದ್ಧ ವಿಮಾನದ ಇಂಜಿನ್ ಎಫ್414 ನಿರ್ಮಿಸಲಿದ್ದು ಇದರಿಂದಾಗಿ ತೇಜಸ್ ವಿಮಾನವು ಅಂತಾರಾಷ್ಟ್ರೀಯ ಮಟ್ಟದಲ್ಲಿ ಇನ್ನೂ ಹೆಚ್ಚು ಶಕ್ತಿಶಾಲಿಯಾಗಲಿದೆ. ಭಾರತವು ಕಳೆದ ನಾಲ್ಕು ವರ್ಷಗಳಿಂದ ಶಸ್ತ್ರಾಸ್ತ್ರ ಯುದ್ಧ ವಿಮಾನಗಳ ರಫ್ತು ಮಾಡುವ ದೇಶವಾಗಿ ಹೊರಹೊಮ್ಮಿದ್ದು ಈ ಒಪ್ಪಂದವು ಭಾರತದ ಯುದ್ಧ ವಿಮಾನ ತಯಾರಿಕಾ ಕ್ಷೇತ್ರದ ಮೇಲೆ ಉತ್ತಮ ಪ್ರಭಾವ ಬೀರಲಿದೆ.

### ಭಾರತದಲ್ಲೇ ಆಧುನಿಕ ಸೆಮಿ ಕಂಡಕ್ಟರ್ ಚಿಪ್ (ಅರೆವಾಹಕ ಚಿಪ್) ಉತ್ಪಾದನೆ



ಸೆಮಿಕಂಡಕ್ಟರ್ ಉತ್ಪಾದನಾ ವಲಯವು, ಉಕ್ಕು ಉತ್ಪಾದನಾ ವಲಯ ಮತ್ತು ರಾಸಾಯನಿಕ ಉತ್ಪಾದನಾ ವಲಯಗಳಂತೆ ಮೂಲ(ಬೇಸಿಕ್) ಉತ್ಪಾದನಾ ವಲಯುವಾಗಿದ್ದು. ಇದರ ಉಪಯೋಗವು ವಿಮಾನ ತಯಾರಿಸುವಲ್ಲಿ, ರೈಲು, ಕಾರು, ಟಿ.ವಿ., ಮೊಬೈಲ್, ಕ್ಯಾಮರಾ ಮುಂತಾದ ಎಲ್ಲಾ ಎಲೆಕ್ಟ್ರಾನಿಕ್ ಉಪಕರಣಗಳಿಗೆ ಸೆಮಿಕಂಡಕ್ಟರ್‌ನ ಉಪಯೋಗವು ಅನಿವಾರ್ಯವಾಗಿದೆ. ಅಮೇರಿಕಾದ ಮೈಕ್ರಾನ್ ಟೆಕ್ನಾಲಜಿಸ್ ಕಂಪನಿಯು ಜಗತ್ತಿನ ಅತಿದೊಡ್ಡ ಸೆಮಿಕಂಡಕ್ಟರ್ ಉತ್ಪಾದನಾ ಕಂಪನಿಗಳಲ್ಲಿ ಒಂದಾಗಿದ್ದು ಇದು ಭಾರತದ ಗುಜರಾತ್‌ನಲ್ಲಿ ಮೇಕ್ ಇನ್ ಇಂಡಿಯಾ ಅಡಿಯಲ್ಲಿ ಆಧುನಿಕ ಸೆಮಿಕಂಡಕ್ಟರ್ ಉತ್ಪಾದನೆಗೆ 22,540 ಕೋಟಿ ರೂ ಬಂಡವಾಳ ಹೂಡಿಕೆ ಒಪ್ಪಂದಕ್ಕೆ ಸಹಿ ಹಾಕಿದ್ದು ಬರುವ ಒಂದೂವರೆ ವರ್ಷದಲ್ಲಿ ಉತ್ಪಾದನೆ ಪ್ರಾರಂಭವಾಗಲಿದೆ. ಇದರಿಂದಾಗಿ ಉದ್ಯೋಗ ಅವಕಾಶಗಳು ಹೆಚ್ಚಲಿವೆ ಮತ್ತು ಭಾರತದಲ್ಲಿ ಎಲೆಕ್ಟ್ರಾನಿಕ್ ಉಪಕರಣಗಳ ಉತ್ಪಾದನೆಯಲ್ಲಿ ಮಹತ್ತರ ಕ್ರಾಂತಿಯಾಗಲಿದೆ.

### ನಾಸಾ-ಇಸ್ರೋ ಅಂತರಿಕ್ಷ ಯಾನ ಒಪ್ಪಂದ




ಈ ಒಪ್ಪಂದವು ಅಮೇರಿಕಾದ ಪ್ರಖ್ಯಾತ ಬಾಹ್ಯಾಕಾಶ ಸಂಸ್ಥೆ ನಾಸಾ ಮತ್ತು ಭಾರತದ ಪ್ರತಿಷ್ಠಿತ ಇಸ್ರೋ ಬಾಹ್ಯಾಕಾಶ ಸಂಸ್ಥೆಗಳ ಮಧ್ಯೆ ಏರ್ಪಟ್ಟಿದ್ದು ಈ ಒಪ್ಪಂದದಲ್ಲಿ ಚಂದ್ರಯಾನ ಸೇರಿದಂತೆ 2024ರಲ್ಲಿ ಅಂತರಿಕ್ಷ ಕೇಂದ್ರಕ್ಕೆ ಮಾನವ ಸಹಿತ ಜಂಟಿ ಯಾನ ಮತ್ತು ಅಂತರಿಕ್ಷದಲ್ಲಿ ಭಾರತ ತನ್ನದೇ ಆದ ಬಾಹ್ಯಾಕಾಶ ಕೇಂದ್ರ ನಿರ್ಮಿಸುವಲ್ಲಿ ಸಹಯೋಗ ಹಾಗೂ ಬಾಹ್ಯಾಕಾಶ ಅನ್ವೇಷಣೆಗಳಲ್ಲಿ ನಾಸಾ ಮತ್ತು ಇಸ್ರೋ ಜಂಟಿಯಾಗಿ ಕಾರ್ಯನಿರ್ವಹಿಸಲಿವೆ. ಬಾಹ್ಯಾಕಾಶ ಕ್ಷೇತ್ರದಲ್ಲಿ ಇದೊಂದು ಮೈಲಿಗಲ್ಲಾಗಲಿದೆ.

### ಅಮೇರಿಕಾದ ಹೆಚ್1ಬಿ ವೀಸಾದ ನಿಯಮ ಸಡಿಲಿಕೆ




ಈ ಒಪ್ಪಂದದಿಂದ ವಿದ್ಯಾರ್ಥಿಗಳಿಗೆ ಮತ್ತು ಉದ್ಯೋಗ ಅರಸಿ ಅಮೇರಿಕಾಗೆ ಹೋಗಿರುವ ಲಕ್ಷಾಂತರ ಜನ ಭಾರತೀಯರಿಗೆ ಅನುಕೂಲವಾಗಲಿದೆ. ಹೆಚ್1ಬಿ ವೀಸಾ ನವೀಕರಣಕ್ಕೆ ಸಂಬಂಧಿಸಿದಂತೆ ನಿಯಮವನ್ನು ಸಡಿಲಿಸಲಾಗಿದ್ದು ಇದಕ್ಕಾಗಿ ಇನ್ನು ಮುಂದೆ ಅಮೇರಿಕಾದಿಂದ ಭಾರತಕ್ಕೆ ಬರಬೇಕಾದ ಅವಶ್ಯಕತೆ ಇರುವುದಿಲ್ಲ. ಇದು ಭಾರತ ಅಮೇರಿಕಾ ಸಂಬಂಧಗಳನ್ನು ಹೆಚ್ಚು ಉತ್ತಮಗೊಳಿಸುವಲ್ಲಿ ಸಹಕಾರಿಯಾಗಲಿದೆ. ಇದಕ್ಕೆ ಅನುಕೂಲವಾಗಲೆಂದು ಅಹಮದಾಬಾದ್ ಮತ್ತು ಬೆಂಗಳೂರು ನಗರಗಳಲ್ಲಿ ಹೊಸದಾಗಿ ಅಮೇರಿಕಾ ರಾಯಭಾರಿ ಕಚೇರಿಗಳನ್ನು ತೆರೆಯುತ್ತಿದೆ. ಇದಕ್ಕೆ ಪೂರಕವಾಗಿ ಭಾರತವೂ ಸಹ ಅಮೇರಿಕಾದ ಸಿಯಾಟಿಲ್ ಸೇರಿದಂತೆ ಮತ್ತೆರೆಡು ನಗರಗಳಲ್ಲಿ ಭಾರತದ ರಾಯಭಾರಿ ಕಚೇರಿಗಳನ್ನು ತೆರೆಯುತ್ತಿದೆ.

ಇಂತಹ ಇನ್ನೂ ಅನೇಕ ಐತಿಹಾಸಿಕ ಒಪ್ಪಂದಗಳು ಏರ್ಪಟಿದ್ದು ಇವು ಭಾರತದ ಭವಿಷ್ಯವನ್ನೇ ಬದಲಾಯಿಸಬಲ್ಲವಾಗಿವೆ. ಜಾಗತಿಕವಾಗಿ ಭಾರತದ ಶಕ್ತಿ ಹೆಚ್ಚಾಗಲಿದ್ದು ಪ್ರಧಾನಿ ಮೋದಿಯವರ ಈ ಭೇಟಿಯಿಂದ ಭಾರತವು ಪ್ರಮುಖ ಜಾಗತಿಕ ಶಕ್ತಿಯಾಗಿ ಹೊರಹೊಮ್ಮಲಿದೆ.





# ಏಕರೂಪ ನಾಗರಿಕ ಸಂಹಿತೆ ಮತ್ತು ರಾಜಕಾರಣ

**'ಏಕರೂಪ ನಾಗರಿಕ ಸಂಹಿತೆ' ಯ ಅರ್ಥ ದೇಶದ ಎಲ್ಲಾ ವರ್ಗದ ನಾಗರೀಕರು ಅವರ ಧಾರ್ಮಿಕ ಹಿನ್ನಲೆ ಏನೇ ಇದ್ದರೂ ಅವರ ಆಚರಣೆಗಳೇನೆ ಇದ್ದರೂ ಅದನ್ನು ಪರಿಗಣಿಸದೆ ಅವರಲ್ಲರಿಗೂ ಸಮಾನವಾದ ಕಾನೂನುಗಳನ್ನು ಜಾರಿಗೆ ತರುವುದು ಎಂದರ್ಥ. ಮದುವೆ, ಕುಟುಂಬ ನಿರ್ವಹಣೆ, ವಿಚ್ಛೇಧನ, ಆಸ್ತಿಯ ಹಕ್ಕು, ದತ್ತು ಸ್ವೀಕಾರ ಮುಂತಾದ ವಿಚಾರಗಳಲ್ಲಿ ಅವರು ಪ್ರತಿನಿಧಿಸುವ ಧರ್ಮದ ಬದಲು ಸಂವಿಧಾನಾತ್ಮಕವಾದ ಕಾನೂನುಗಳು ಅನ್ವಯ ಆಗಬೇಕು ಎಂಬುದು ಇದರ ಆಶಯ.**

ಭಾರತ ಒಂದು ಬಹು ಸಂಸ್ಕೃತಿಯ ದೇಶ, ಇಲ್ಲಿ ಅನೇಕ ಮತ ಪಂಥಗಳಿದ್ದು ದೇಶದ ಕಾನೂನಿನ ಮೇಲೂ ಈ ಬಹು ಸಂಸ್ಕೃತಿಯ ಪರಿಣಾಮ ಬೀರಿದೆ. ಆದರೆ ದೇಶದೊಳಗೆ ಎಲ್ಲಾ ನಾಗರಿಕರಿಗೂ ಏಕರೂಪ ಕಾಯಿದೆ ಜಾರಿಗೆ ತರಬೇಕು ಎಂಬುದು ಸಂವಿಧಾನ ನಿರ್ದೇಶಕ ತತ್ವಗಳು (Directive Principles of State Policy) ಆಶಯ ಕೂಡ ದೇಶದೊಳಗೆ ಏಕರೂಪ ನಾಗರೀಕ ಸಂಹಿತೆ (ಏನಾಸಂ) ಜಾರಿಯಾಗಬೇಕು ಎಂಬ ಚರ್ಚೆ ಬಹಳ ಕಾಲದಿಂದ ಇತ್ತು. ಇದು ದೇಶದ ಜಾತ್ಯಾತೀತತೆ, ಮೂಲಭೂತ ಹಕ್ಕು ಮತ್ತು ಕರ್ತವ್ಯಗಳ ದೃಷ್ಟಿಯಿಂದ ಯಾವ ರೀತಿಯ ಪರಿಣಾಮಗಳು ಬೀರಬಹುದು ಎಂಬ ಚರ್ಚೆ ದೇಶದಲ್ಲಿನಡೆಯುತ್ತಿದೆ. 'ಏನಾಸಂ' ದ ಅರ್ಥ ದೇಶದ ಎಲ್ಲಾ ವರ್ಗದ ನಾಗರೀಕರು ಅವರ ಧಾರ್ಮಿಕ ಹಿನ್ನಲೆ ಏನೇ ಇದ್ದರೂ ಅವರ ಆಚರಣೆಗಳೇನೆ ಇದ್ದರೂ ಅದನ್ನು ಪರಿಗಣಿಸದೆ ಅವರಲ್ಲರಿಗೂ ಸಮಾನವಾದ ಕಾನೂನುಗಳನ್ನು ಜಾರಿಗೆ ತರುವುದು ಎಂದರ್ಥ. ಮದುವೆ, ಕುಟುಂಬ ನಿರ್ವಹಣೆ, ವಿಚ್ಛೇಧನ, ಆಸ್ತಿಯ ಹಕ್ಕು, ದತ್ತು ಸ್ವೀಕಾರ ಮುಂತಾದ ವಿಚಾರಗಳಲ್ಲಿ ಅವರು ಪ್ರತಿನಿಧಿಸುವ ಧರ್ಮದ ಬದಲು ಸಂವಿಧಾನಾತ್ಮಕವಾದ ಕಾನೂನುಗಳು ಅನ್ವಯ ಆಗಬೇಕು ಎಂಬುದು ಇದರ ಆಶಯ.

### ಐತಿಹಾಸಿಕ ಹಿನ್ನೆಲೆ - ಸ್ವಾತಂತ್ರ್ಯ ಪೂರ್ವ

ಅಕ್ಟೋಬರ್ 1840 ರ ಲೆಕ್ಸ್ ಲೋಕಿ ವರದಿ (The Lex Loci Report of October 1840) ಅಪರಾದ ಪ್ರಕರಣಗಳಿಗೆ ಲಿಖಿತ ರೂಪದಲ್ಲಿ ಕಾನೂನುಗಳನ್ನು ತರುವುದು ಮತ್ತು ಏಕರೂಪ ಕಾಯಿದೆಯನ್ನು ಬಾರತದೊಳಗೆ ಜಾರಿಗೆ ತರುವ ಬಗ್ಗೆ ಹೆಚ್ಚಿನ ಒತ್ತು ಕೊಡಲಾಗಿತ್ತು. ಆದರೆ ಇದರಲ್ಲಿ ಹಿಂದೂ ಮತ್ತು ಮುಸ್ಲೀಮ್ ಸಮಾಜದಲ್ಲಿ ಆಚರಣೆಯಲ್ಲಿದ್ದ ವೈಯಕ್ತಿಕ ಕಾನೂನೂನುಗಳನ್ನು ಇದರಿಂದ ಹೊರಗಿಡಬೇಕು ಎಂಬುದು ವರದಿಯಲ್ಲಿ ಉಲ್ಲೇಖವಿತ್ತು. ರಾಣಿಯ 1859 ಘೋಷಣೆ (The Queen's 1859 Proclamation) ಇಲ್ಲಿ ಯಾವುದೇ ಧಾರ್ಮಿಕ ವಿಚಾರದೊಳಗೆ ಹಸ್ತಕ್ಷೇಪ ಮಾಡುವುದಿಲ್ಲ ಎಂಬ ವಾಗ್ದಾನ ಮಾಡಿದರು. ಹಾಗಾಗಿ ಏಕರೂಪ ಅಪರಾಧ ಸಂಹಿತೆಗಳಷ್ಟೇ ಜಾರಿಗೆ ಬಂದವು ಬಿಟ್ಟರೆ, ಧರ್ಮಾಧಾರಿತ ವೈಯಕ್ತಿಕ ಕಾನೂನುಗಳಿಗೆ ಇದು ಅನ್ವಯಿಸಲಿಲ್ಲ.

### ಸ್ವತಂತ್ರ ಭಾರತದಲ್ಲಿ (1947-1985)

ಸಂವಿಂಧಾನದ ಕರಡು ನಿರ್ಮಾಣ ಸಭೆಯಲ್ಲಿ ನೆಹರು ಮತ್ತು ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಏನಾಸಂ ಅನ್ನು ಬಲವಾಗಿ ಪ್ರತಿಪಾದಿಸಿದ್ದರು. ಆದರೆ ಇದಕ್ಕೆ

ಮುಸಲ್ಮಾನ ಧಾರ್ಮಿಕ ಮುಖಂಡರಿಂದ ಬಲವಾದ ವಿರೋಧ ಬಂದ ಕಾರಣ ಅದನ್ನ ಜಾರಿಗೆ ತಾರದೆ ಸಂವಿಧಾನದ ನಿರ್ದೇಶಕ ತತ್ವದಲ್ಲಿ ಸೇರಿಸಿದರು. Directive Principles of State Policy (DPSP, Article 44)

### ಈ ಅವಧಿಯ ಕೆಲವು ಇತರ ಸುಧಾರಣೆಗಳು

**ಹಿಂದೂ ಕೋಡ್ ಬಿಲ್ :**ಹಿಂದೂಗಳ ಕಾನೂನಿನಲ್ಲಿ ಸುಧಾರಣೆ ತರಲು ಅಂಬೇಡ್ಕರ್ ಅವರು ಕಾನೂನಿನಲ್ಲಿ ಸುಧಾರಣೆ ತರುತ್ತಾರೆ. ಇದು ವಿಚ್ಛೇದನವನ್ನು ಕಾನೂನುಬದ್ಧಗೊಳಿಸಿತು, ಬಹುಪತ್ನಿತ್ವವನ್ನು ವಿರೋಧಿಸಿತು, ಹೆಣ್ಣು ಮಕ್ಕಳಿಗೆ ಆಸ್ತಿಯ ಹಕ್ಕನ್ನು ಕೊಟ್ಟಿತು, ಇದಕ್ಕೂ ಒಂದಷ್ಟು ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ಇದರ ಸರಳ ರೂಪದ ಕಾನೂನು ನಂತರದ ದಿನಗಳಲ್ಲಿ ಜಾರಿಗೆ ಬಂದಿತು.

### ಹಿಂದೂ ವಿವಾಹ ಕಾಯಿದೆ, ಉತ್ತರಾಧಿಕಾರ ಕಾಯಿದೆ, ಅಲ್ಪಸಂಖ್ಯಾತ ಮತ್ತು ರಕ್ಷಕ ಕಾಯಿದೆ, ದತ್ತುಗಳು ಮತ್ತು ನಿರ್ವಹಣೆ ಕಾಯಿದೆ

ವಿಶೇಷ ವಿವಾಹ ಕಾಯಿದೆ ಇವುಗಳನ್ನು 1954 ರಲ್ಲಿ ಜಾರಿಗೊಳಿಸಲಾಯಿತು, ಇಲ್ಲಿ ಯಾವುದೇ ಧಾರ್ಮಿಕ ಮತ್ತು ವೈಯಕ್ತಿಕ ಆಚರಣೆಗಳ ಹೊರಗೂ ವಿವಾಹ ಆಗುವ ವ್ಯವಸ್ಥೆ ಒದಗಿಸಿತು. ಇವುಗಳಲ್ಲಿ ಕಾನೂನಿನ ಹಸ್ತಕ್ಷೇಪವನ್ನು (Judicial interventions) ಊರ್ಜಿತ ಗೊಳಿಸಿತು.

### 1985ರ ಶಹಬಾನು ಪ್ರಕರಣ

ಶಹಬಾನು ಎಂಬ 73 ವರ್ಷದ ಮಹಿಳೆಯನ್ನು ಆಕೆಯ ಪತಿ ತ್ರಿವಳಿ ತಲಾಖ್ (ನಾನು ನಿನಗೆ ವಿಚ್ಛೇದನ ನೀಡುತ್ತೇನೆ ಎಂದು ಮೂರು ಬಾರಿ ಹೇಳುವುದು) ಬಳಸಿ ವಿಚ್ಛೇದನ ನೀಡಿದನು. ಮತ್ತು ಆಕೆಗೆ ಜೀವನಾಂಶವನ್ನೂ ನಿರಾಕರಿಸಲಾಯಿತು. ಇದರ ವಿರುದ್ಧ ನ್ಯಾಯಾಲದ ಮೆಟ್ಟಿಲು ಹತ್ತಿದ ಆಕೆಗೆ ಜಿಲ್ಲಾ ಮತ್ತು ಉಚ್ಚನ್ಯಾಯಾಲದಲ್ಲಿ ತೀರ್ಪು ಆಕೆಯ ಪರಿವಾಗಿ ಬಂತು. ಆಕೆಯ ಪತಿ ಇಸ್ಲಾಮಿಕ್ ಕಾನೂನಿನಡಿಯಲ್ಲಿ ತನ್ನ ಎಲ್ಲಾ ಜವಾಬ್ದಾರಿಗಳನ್ನು ಪೂರೈಸಿದೆ ಎಂದು ಸುಪ್ರೀಂ ಕೋರ್ಟ್‌ಗೆ ಇದನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿದ. ಇಲ್ಲೂ ತೀರ್ಪು ಆಕೆಯ ಪರವಾಗಿಯೇ ಬಂತು. ಅಖಿಲ ಭಾರತ ಕ್ರಿಮಿನಲ್ ಕೋಡ್‌ನ ಹೆಂಡತಿಯರು, ಮಕ್ಕಳು ಮತ್ತು ಪೋಷಕರ ನಿರ್ವಹಣೆ ನಿಬಂಧನೆ 125ರ ಅಡಿಯಲ್ಲಿ 1985 (Section 125 of the All India Criminal Code,) ರಲ್ಲಿ ಸುಪ್ರೀಂ ಕೋರ್ಟ್ ಅವಳ ಪರವಾಗಿ ತೀರ್ಪು ನೀಡಿತು, ಇದು ಧರ್ಮವನ್ನು ಲೆಕ್ಕಿಸದೆ ಎಲ್ಲಾ ನಾಗರಿಕರಿಗೆ ಅನ್ವಯಿಸುತ್ತದೆ. ಇದಲ್ಲದೆ, ಇದರ ಜೊತೆಗೆ ನ್ಯಾಯಾಲಯ ದೇಶದಲ್ಲಿ ಏನಾಸಂ ಜಾರಿಗೆ ತರುವಂತೆಯೂ ಶಿಫಾರಸ್ಸು ಮಾಡಿತು.

### ಎರಡು ವೈರುಧ್ಯ ಅಂಶಗಳು

ಮುಸ್ಲಿಂ ವೈಯಕ್ತಿಕ ಕಾನೂನಿನ ಪ್ರಕಾರ, ಇದ್ದತ್ ಅವಧಿಯವರೆಗೆ ಮಾತ್ರ ಜೀವನಾಂಶವನ್ನು ಪಾವತಿಸಬೇಕಾಗಿತ್ತು. (ಮೂರು ಚಂದ್ರ ತಿಂಗಳುಗಳು–ಸುಮಾರು 90 ದಿನಗಳು). ಭಾರತೀಯ ಅಪರಾಧ ಸಂಹಿತೆ (CRPC) ಯ ಸೆಕ್ಷನ್ 125 ಈ ಕಾನೂನು ಎಲ್ಲಾ ನಾಗರಿಕರು ತಮ್ಮ ಪತ್ನಿಯ ಜೀವನ ನಿರ್ವಹಣೆಗಾಗಿ ಆಜೀವನದವರೆಗೆ ಅಥವ ಆಕೆ ಮರುಮದುವೆ ಆಗುವ ತನಕ ಒದಗಿಸಬೇಕು.

**ಪರಿಣಾಮ :** ಈ ಐತಿಹಾಸಿಕ ನಿರ್ಧಾರದ ನಂತರ ರಾಷ್ಟ್ರವ್ಯಾಪಿ ಚರ್ಚೆಗಳು, ಸಭೆಗಳು ಮತ್ತು ಆಂದೋಲನಗಳು ನಡೆದವು. ಒತ್ತಡದ ಕಾರಣಕ್ಕೆ ಆಗಿನ ಸರ್ಕಾರವು 1986 ರಲ್ಲಿ ಮುಸ್ಲಿಂ ಮಹಿಳೆಯರ (ವಿಚ್ಛೇದನದ ಮೇಲಿನ ರಕ್ಷಣೆಯ ಹಕ್ಕು) ಕಾಯಿದೆ (MWA) ಅನ್ನು ಅಂಗೀಕರಿಸಿತು, ಆದರೆ . ಭಾರತೀಯ ಅಪರಾಧ ಸಂಹಿತೆ (ಇಕಇ) ಯ ಸೆಕ್ಷನ್ 125 ಕೇವಲ ಪರುಷರ ಮೇಲಷ್ಟೇ ಹೊರತು ಮಹಿಳೆಯರಿಗೆ ಅನ್ವಯ ಆಗುವುದಿಲ್ಲ ಎಂದಿತು.

### ಡೇನಿಯಲ್ ಲತೀಫ್ ಪ್ರಕರಣ

ಮುಸ್ಲಿಂ ಮಹಿಳಾ ಕಾಯಿದೆ (MWA) 14 ಮತ್ತು 15 ನೇ ವಿಽ ಅಡಿಯಲ್ಲಿ ಸಮಾನತೆಯ ಹಕ್ಕನ್ನು ಉಲ್ಲಂಘಿಸುತ್ತದೆ. ಮತ್ತು ಆರ್ಟಿಕಲ್ 21 ರ ಅಡಿಯಲ್ಲಿ ಜೀವಿಸುವ ಹಕ್ಕನ್ನು ಉಲ್ಲಂಘಿಸುತ್ತದೆ ಎಂಬ ಆಧಾರದ ಮೇಲೆ ಪ್ರಶ್ನಿಸಲಾಯಿತು. ಆದರೆ ಸುಪ್ರೀಂ ಕೋರ್ಟ್ ಇದನ್ನು ಸಂವಿಧಾನಾತ್ಮಕ ಎಂದು ಪರಿಗಣಿಸಿ, ಮುಸ್ಲಿಂ ಮಹಿಳಾ ಕಾಯಿದೆಯನ್ನು CRPC ಯ ಸೆಕ್ಷನ್ 125ಜೊತೆಗೆ ಸೇರಿಸಿತು. ಇದ್ದತ್ ಅವಽಯಲ್ಲಿ ಆಕೆ ಪಡೆಯುವ ಪರಿಹಾರದ ಮೊತ್ತ ಇದ್ದತ್ ಸಮಯದಲ್ಲಿ ಅವಳ ಜೀವನ ನಿರ್ವಹಣೆ ಮತ್ತು ಭವಿಷ್ಯದಲ್ಲೂ ಅವಳ ಜೀವನ ನಿರ್ವಹಣೆಗೆ ಸಾಕಾಗುವಷ್ಟು ಪ್ರಮಾಣದಲ್ಲಿರಬೇಕು ಎಂದಿತು. ಹೀಗಾಗಿ ದೇಶದ ಕಾನೂನಿನ ಅಡಿಯಲ್ಲಿ, ವಿಚ್ಛೇದಿತ ಮುಸ್ಲಿಂ ಮಹಿಳೆಯು ಜೀವಮಾನದವರೆಗೆ ಅಥವಾ ಮರು ಮದುವೆಯಾಗುವವರೆಗೆ ಜೀವನಾಂಶವನ್ನು ಪಡೆಯಲು ಕಾನೂನಿನ ಅಡಿಯಲ್ಲಿ ಅವಕಾಶ ಸಿಕ್ಕಿತು.

### ಸರಳಾ ಮುದ್ಗಲ್ ಪ್ರಕರಣ

ಈ ಪ್ರಕರಣದಲ್ಲಿ ಹಿಂದೂ ಪತಿಯು ಹಿಂದೂ ಕಾನೂನಿನಡಿಯಲ್ಲಿ ಮದುವೆಯಾಗಿ, ನಂತರ ಇಸ್ಲಾಂ ಧರ್ಮವನ್ನು ಸ್ವೀಕರಿಸುವ ಮೂಲಕ ಎರಡನೇ ಮದುವೆಯನ್ನು ಮಾಡಿಕೊಳ್ಳಬಹುದೇ ಎಂಬ ಪ್ರಶ್ನೆ ಉದ್ಭವಿಸಿದಾಗ, ಹಿಂದೂ ಕಾನೂನಿನಡಿಯಲ್ಲಿ ವಿವಾಹವಾದ ಹಿಂದೂ ವಿವಾಹವನ್ನು ಹಿಂದೂ ವಿವಾಹ ಕಾಯಿದೆ 1955 ರ ಅಡಿಯಲ್ಲಿ ಅಂತ್ಯವಾಗಬೇಕು ಮತ್ತು ಇಸ್ಲಾಂಗೆ ಮತಾಂತರಗೊಂಡ ನಂತರ ಎರಡನೇ ವಿವಾಹ ಆಗುವುದು ಭಾರತೀಯ ದಂಡ ಸಂಹಿತೆಯ (IPC) ಸೆಕ್ಷನ್ 494 ರ ಅಡಿಯಲ್ಲಿ ಅಪರಾಧವಾಗುತ್ತದೆ ಎಂದಿತು

### ಜಾನ್ ವಲ್ಲಮಟ್ಟಂ ಪ್ರಕರಣ

ಈ ಪ್ರಕರಣದಲ್ಲಿ ಕೇರಳದ ಪಾದ್ರಿ, ಜಾನ್ ವಲ್ಲಮಟ್ಟಮ್ ಅವರು ಭಾರತೀಯ ಉತ್ತರಾಧಿಕಾರ ಕಾಯ್ದೆಯ ಸೆಕ್ಷನ್ 118 ರ ಸಾಂವಿಧಾನಿಕ ಸಿಂಧುತ್ವವನ್ನು ಪ್ರಶ್ನಿಸಿದರು, ಇದು ಭಾರತದಲ್ಲಿ ಹಿಂದೂಯೇತರರಿಗೆ ಅನ್ವಯಿಸುತ್ತದೆ. ಕಾಯಿದೆಯ ಸೆಕ್ಷನ್ 118 ಕ್ರಿಶ್ಚಿಯನ್ನರ ವಿರುದ್ಧ

ತಾರತಮ್ಯವನ್ನು ಮಾಡುತ್ತದೆ ಎಂದು ವಲ್ಲಾವ್ಯಾಟನ್ ವಾದಿಸಿದರು, ಏಕೆಂದರೆ ಇದು ಇಚ್ಛೆಯ ಮೂಲಕ ಧಾರ್ಮಿಕ ಅಥವಾ ದತ್ತಿ ಉದ್ದೇಶಗಳಿಗಾಗಿ ಆಸ್ತಿಯನ್ನು ದಾನ ಮಾಡಲು ನಿರ್ಬಂಧಗಳನ್ನು ವಿಧಿಸುತ್ತದೆ. ಇದನ್ನು ಆಲಿಸದ ಪೀಠವು ಅಸಂವಿಧಾನಿಕ ಸೆಕ್ಷನ್ ಅನ್ನು ರದ್ದುಪಡಿಸಿತು.

### ಶಾಯಿರಾ ಬಾನು ಪ್ರಕರಣ

ಈ ಪ್ರಕರಣದಲ್ಲಿ ತ್ರಿವಳಿ ತಲಾಖ್ ಮೂಲಕ ತನ್ನ ಪತಿಯಿಂದ ವಿಚ್ಛೇದಿತಳಾದ 35 ವರ್ಷದ ಮಹಿಳೆ ಶಾಯಿರಾ ಬಾನು ಇದನ್ನು ಪ್ರಶ್ನಿಸಿ 2017 ರಲ್ಲಿ, ಸುಪ್ರೀಂ ಕೋರ್ಟ್ ಮೆಟ್ಟಿಲೇರಿದರು. ನ್ಯಾಯಾಲಯ ತನ್ನ ತೀರ್ಪಿನಲ್ಲಿ ತ್ವರಿತ ತ್ರಿವಳಿ ತಲಾಖ್ ಅನ್ನು ರದ್ದುಗೊಳಿಸಿತು. ಸಾಂವಿಧಾನಿಕ ಪೀಠದ ಐವರು ನ್ಯಾಯಾಧೀಶರ ಪೈಕಿ ಮೂವರು ಈ ಪದ್ಧತಿಯನ್ನು ಇಸ್ಲಾಮಿನ ವಿರುದ್ಧ ಮತ್ತು ನಿರಂಕುಶ ಎಂದು ಕರೆದರು ಮತ್ತು ತ್ರಿವಳಿ ತಲಾಖ್ ಧಾರ್ಮಿಕ ಆಚರಣೆಯ ಅವಿಭಾಜ್ಯ ಅಂಗವಾಗಿದೆ ಎಂಬ ಅಭಿಪ್ರಾಯವನ್ನು ತಳ್ಳಿ ಹಾಕಿದರು. ಜೂನ್ 21 2019ಕ್ಕೆ ವರ್ತಮಾನದ ಮೋದಿ ಸರಕಾರ ತ್ರಿವಳಿ ತಲಾಖ್ ನಿಷೇದ ಕಾನೂನನ್ನು ಜಾರಿಗೆ ತಂದಿತು.

### ಏಕರೂಪ ನಾಗರಿಕ ಸಂಹಿತೆಯ ಕುರಿತು ಭಾರತದ ಸಂವಿಂಧಾನ

- ಸಂವಿಧಾನದ ಪರಿಚ್ಛೇದ 4ರ ಅರ್ಟಿಕಲ್ 44 ಸರಕಾರ ದೇಶವ್ಯಾಪಿ ಏನಾಸಂ ಅನ್ನು ಜಾರಿಗೆ ತರಬೇಕು ಎಂದು ಹೇಳುತ್ತದೆ. ಆದಾಗ್ಯೂ, ಸಂವಿಧಾನದ 37ನೇ ವಿಧಿಯು DPSP ಅನ್ನು ಯಾವುದೇ ನ್ಯಾಯಾಲಯದಿಂದ ಜಾರಿಗೊಳಿಸಲು ಸಾಧ್ಯವಿಲ್ಲ ಎಂದು ಸ್ಪಷ್ಟಪಡಿಸುತ್ತದೆ. ಅದೇನೆ ಇದ್ದರು ಸರಕಾರ ಯಾವುದಾದರು ಒಂದು ರೀತಿಯಲ್ಲಿ ಏನಾಸಂ ಅನ್ನು ಜಾರಿಗೆ ತರಬೇಕು, ಆದರೆ ಇದು ಕಡ್ಡಾಯವಲ್ಲ ಎಂದೂ ಹೇಳುತ್ತದೆ.
- ಧಾರ್ಮಿಕ ಸ್ವಾತಂತ್ರ್ಯ ಮತ್ತು ಜಾತ್ಯತೀತತೆಗೆ ಸಂಬಂಧಿಸಿದ ಇತರ ಸಾಂವಿಧಾನಿಕ ನಿಬಂಧನೆಗಳು.
- ಆರ್ಟಿಕಲ್15 ಪ್ರಕಾರ ಧರ್ಮ, ಜನಾಂಗ, ಜಾತಿ, ಲಿಂಗ ಅಥವಾ ಜನ್ಮಸ್ಥಳದ ಆಧಾರದ ಮೇಲೆ ಯಾವುದೇ ತಾರತಮ್ಯವಿಲ್ಲ.
- ಆರ್ಟಿಕಲ್25 ರ ಪ್ರಕಾರ ಆತ್ಮಸಾಕ್ಷಿಯ ಸ್ವಾತಂತ್ರ್ಯ ಮತ್ತು ಮುಕ್ತವಾಗಿ ಯಾವುದೇ ವೃತ್ತಿ, ಧಾರ್ಮಿಕ ನಂಬಿಕೆ ಆಚರಣೆ ಮತ್ತು ಅದರ ಪ್ರಚಾರ ಒಂದಷ್ಟು ಸಮಾಜದಲ್ಲಿ ಕಾನೂನು ಸುವ್ಯವಸ್ಥೆ, ಸಾಮಾಜಿಕ ಸ್ವಾಸ್ಥ್ಯ ಮತ್ತು ನೈತಿಕತೆಗೆ ಧಕ್ಕೆ ಬಾರದ ರೀತಿಯಲ್ಲಿ ಆರೋಗ್ಯ ನಿರ್ಭಂದಗಳ ಮೂಲಕ (subject to reasonable restrictions) ಮಾಡಬಹುದು.
- ಆರ್ಟಿಕಲ್25 (2)–ಸಾಮಾಜಿಕ ಸ್ವಾತಂತ್ರ್ಯ ಮತ್ತು ಒಳಿತಿಗಾಗಿ ಯಾವುದೇ ಧಾರ್ಮಿಕ ಆಚರಣೆಗಳಿಗೆ ಸಂಬಂಧಿಸಿದ ಜಾತ್ಯತೀತ ಚಟುವಟಿಕೆಗಳನ್ನು ನಿಯಂತ್ರಿಸುವ ಅವಕಾಶ.
- ಆರ್ಟಿಕಲ್26ರ ಪ್ರಕಾರ ಧಾರ್ಮಿಕ ಸಂಸ್ಥೆಗಳನ್ನು ಸ್ಥಾಪಿಸುವ ಮತ್ತು ನಿರ್ವಹಿಸುವ ಹಕ್ಕು
- ಆರ್ಟಿಕಲ್27– ಸರಕಾರ ಯಾವುದೋ ಒಂದು ನಿರ್ಧಿಷ್ಟ ಧರ್ಮದ ಲಾಭಕ್ಕಾಗಿ ತೆರಿಗೆಯನ್ನು ವಿಧಿಸುವುದನ್ನು ನಿಷೇಧಿಸುತ್ತದೆ.
- ಆರ್ಟಿಕಲ್ 28– ಶಿಕ್ಷಣ ಸಂಸ್ಥೆಗಳಲ್ಲಿ ಧಾರ್ಮಿಕ ವಿಷಯಗಳ ಬೋಧನೆಯ ಬಗ್ಗೆ ಹೇಳುತ್ತದೆ.
- 42ನೇ ಸಾಂವಿಧಾನಿಕ ತಿದ್ದುಪಡಿ ಕಾಯ್ದೆಯು ಮುನ್ನುಡಿಯಲ್ಲಿ ಜಾತ್ಯತೀತತೆ' ಎಂಬ ಪದವನ್ನು ಸೇರಿಸಿದೆ. S.R. Bommai V/s Union of India ಪ್ರಕರಣದಲ್ಲಿ, ಸುಪ್ರೀಂ ಕೋರ್ಟ್ ಜಾತ್ಯತೀತತೆಯನ್ನು ಸಂವಿಧಾನದ ಮೂಲ ಲಕ್ಷಣವೆಂದು ಪರಿಗಣಿಸಿತು.

### ಗೋವಾ ಸಿವಿಲ್ ಕೋಡ್

ಸಾಮಾನ್ಯ ಕೌಟುಂಬಿಕ ಕಾನೂನಿನ ರೂಪದಲ್ಲಿ ಏನಾಸಂಹೊಂದಿರುವ ಏಕೈಕ ಭಾರತೀಯ ರಾಜ್ಯ ಗೋವಾ. ಇಂದಿಗೂ ಜಾರಿಯಲ್ಲಿರುವ ಪೋರ್ಚುಗೀಸ್ ಸಿವಿಲ್ ಕೋಡ್ ಅನ್ನು 19 ನೇ ಶತಮಾನದಲ್ಲಿ ಗೋವಾದಲ್ಲಿ ಪರಿಚಯಿಸಲಾಯಿತು ಮತ್ತು ಅದರ ವಿಮೋಚನೆಯ ನಂತರ ಅದನ್ನು ಹಾಗೆಯೆ ಮುಂದುವರಿಸಲಾಯಿತು

#### ವಿಶೇಷತೆಗಳು:

ಗೋವಾದಲ್ಲಿನ ಏಕರೂಪ ನಾಗರಿಕ ಸಂಹಿತೆಯು ಪ್ರಗತಿಪರ ಕಾನೂನಾಗಿದ್ದು ಅದು ಗಂಡ ಮತ್ತು ಹೆಂಡತಿಯ ನಡುವೆ ಮತ್ತು ಮಕ್ಕಳ ನಡುವೆ ಆಸ್ತಿ (ಲಿಂಗವನ್ನು ಲೆಕ್ಕಿಸದೆ) ಸಮಾನ ವಿಭಜನೆಯನ್ನು ಪ್ರತಿಪಾದಿಸುತ್ತದೆ. ಪ್ರತಿ ಜನನ, ಮದುವೆ ಮತ್ತು ಮರಣವನ್ನು ಕಡ್ಡಾಯವಾಗಿ ನೋಂದಾಯಿಸಬೇಕು. ವಿಚ್ಛೇದನಕ್ಕೂ ಹಲವು ಮಾರ್ಗಗಳಿವೆ. ಗೋವಾದಲ್ಲಿ ತಮ್ಮ ವಿವಾಹವನ್ನು ನೋಂದಾಯಿಸಿದ ಮುಸ್ಲಿಮರು ಬಹುಪತ್ನಿತ್ವವನ್ನು ಪಾಲಸುವಂತಿಲ್ಲ ಮತ್ತು ತ್ರಿವಳಿ ತಲಾಕ್ ವಿಚ್ಛೇದನವೂ ಮಾಡುವಂತಿಲ್ಲ. ಮದುವೆಯ ಸಮಯದಲ್ಲಿ ಪ್ರತಿಯೊಬ್ಬ ಸಂಗಾತಿಯು ಸುಪರ್ದಿಯಲ್ಲಿರಯವ ಆಸ್ತಿ ಮತ್ತು ಸಂಪತ್ತುಗಳು ಸಮಾನವಾಗಿ ನಿಭಾಯಿಸುತ್ತಾರೆ. ವಿಚ್ಛೇದನದ ಸಂದರ್ಭದಲ್ಲಿ ಪ್ರತಿಯೊಬ್ಬ ಸಂಗಾತಿಯು ಆಸ್ತಿಯ ಅರ್ಧದಷ್ಟು ಮಾಲೀಕತ್ವಕ್ಕೆ ಅರ್ಹರಾಗಿರುತ್ತಾರೆ. ಮರಣದ ಸಂದರ್ಭದಲ್ಲಿ ಉಳಿದಿರುವ ಸದಸ್ಯರಿಗೆ ಆಸ್ತಿ ಸಿಗುತ್ತದೆ. ಪೋಷಕರು ತಮ್ಮ ಮಕ್ಕಳಿಗೆ ಸಂಪೂರ್ಣವಾಗಿ ತಮ್ಮ ಆಸ್ತಿಯಿಂದ ವಂಚಿಸುವಂತಿಲ್ಲ, ಆಸ್ತಿಯ ಅರ್ಧ ಭಾಗವನ್ನು ಮಕ್ಕಳಿಗೆ ಕೊಡಬೇಕು, ಅಂತೆಯೇ ಮಕ್ಕಳೂ ಕೂಡ ಬಂದ ಆಸ್ತಿಯ ಅರ್ಧ ಭಾಗವನ್ನು ತಮ್ಮ ಮಕ್ಕಳಿಗೆ ಸಮಾನವಾಗಿ ಹಂಚಬೇಕು.

ಇದರಲ್ಲೂ ಒಂದಷ್ಟು ನ್ಯೂನ್ಯತೆಗಳಿವೆ ಇದು ಏನಾಸಂ ಅಂತೆ ಕಟ್ಟುನಿಟ್ಟಿನ ಕಾಯಿದೆ ಅಲ್ಲ. ಇಲ್ಲಿ ಹಿಂದೂ ಗಂಡಸರಿಗೆ ಕೆಲವು ವಿಶೇಷ ಸಂದರ್ಭದಲ್ಲಿ ಬಹುಪತ್ನಿತ್ವದ ಅವಕಾಶ ಇದೆ. ಉದಾಹರಣೆಗೆ ಪತ್ನಿ ತನ್ನ 25 ವಯಸ್ಸಿಗೆ ಮುಂಚೆ ಮಗುವನ್ನು ಹಡೆಯದೆ ಇದ್ದರೆ ಅಥವ ತನ್ನ 30ನೇ ವಯಸ್ಸಿನವರಿಗೆ ಗಂಡುಮಗವಿಗೆ ಜನ್ಮ ಕೊಡದೇ ಹೋದರೆ ಹಿಂದೂ ಯುವಕ ಇನ್ನೊಂದು ಮದುವೆಯಾಗಬಹುದು. ಉಳಿದ ಸಮುದಾಯಗಳಿಗೆ ಈ ಕಾನೂನು ಬಹುಪತ್ನಿತ್ವವನ್ನು ನಿಷೇಧಿಸಿದೆ.

## ಏಕರೂಪ ನಾಗರಿಕ ಸಂಹಿತೆ – ಪರ ಮತ್ತು ವಿರುದ್ಧ ವಾದಗಳು

### ಏಕರೂಪ ನಾಗರಿಕ ಸಂಹಿತೆಯ ಪರವಾಗಿ ವಾದಗಳು

- **ಇದು ಭಾರತವನ್ನು ಏಕೀಕರಿಸುತ್ತದೆ** – ಭಾರತವು ಅನೇಕ ಧರ್ಮಗಳು, ಪದ್ಧತಿಗಳು ಮತ್ತು ಆಚರಣೆಗಳನ್ನು ಹೊಂದಿರುವ ದೇಶವಾಗಿದೆ. ಏಕರೂಪದ ನಾಗರಿಕ ಸಂಹಿತೆ, ಸಮಗ್ರಗೊಳಿಸಲು ಅದರಲ್ಲೂ ವಿಶೇಷವಾಗಿ ಸ್ವಾತಂತ್ರ್ಯಾ ನಂತರದ ಭಾರತವನ್ನು ಈ ಸಂಹಿತೆ ಸಹಾಯ ಮಾಡುತ್ತದೆ.
- ಪ್ರತಿಯೊಬ್ಬ ಭಾರತೀಯನ ಜಾತಿ, ಧರ್ಮ ಅಥವಾ ಬುಡಕಟ್ಟಿನ ಹೊರತಾಗಿಯೂ, ಒಂದು ರಾಷ್ಟ್ರೀಯ ನಾಗರಿಕ ನೀತಿ ಸಂಹಿತೆಯ ಅಡಿಯಲ್ಲಿ ದೇಶದ ಪ್ರಜೆಗಳೆಲ್ಲರನ್ನೂ ಒಂದೇ ಕಾನೂನಿನಡಿ ತರುವುದಾಗಿದೆ.
- **ವೋಟ್ ಬ್ಯಾಂಕ್ ರಾಜಕೀಯವನ್ನು ಕಡಿಮೆ ಮಾಡಲು ಖಿಇಇ ಸಹಾಯ ಮಾಡುತ್ತದೆ**– ವೋಟ್ ಬ್ಯಾಂಕ್ ರಾಜಕೀಯವನ್ನು ಕಡಿಮೆ ಮಾಡಲು UCC ಸಹ ಸಹಾಯ ಮಾಡುತ್ತದೆ. ಬಹುತೇಕ ರಾಜಕೀಯ ಪಕ್ಷಗಳು ಪ್ರತಿ ಚುನಾವಣೆಯ ಸಂದರ್ಭದಲ್ಲಿಯೂ ವೋಟ್‌ಬ್ಯಾಂಕ್ ರಾಜಕಾರಣ ಪ್ರಚಲಿತದಲ್ಲಿರುತ್ತದೆ.
- ವೈಯಕ್ತಿಕ ಕಾನೂನುಗಳಲ್ಲಿನ ಒಂದು ಲೋಪದೋಷ– ವೈಯಕ್ತಿಕ ಕಾನೂನುಗಳನ್ನು ಅನುಮತಿಸುವ ಮೂಲಕ ಸಾವಿರಾರು ವರ್ಷಗಳ ಹಳೆಯ ಮೌಲ್ಯಗಳ ಮೇಲೆ ಕಾರ್ಯನಿರ್ವಹಿಸುವ ಪರ್ಯಾಯ ನ್ಯಾಯಾಂಗ ವ್ಯವಸ್ಥೆಯಲ್ಲಿಯೇ ಕಾರ್ಯ ನಿರ್ವಹಿಸುತ್ತಿದ್ದೇವೆ. UCC ಅದನ್ನು ಬದಲಾಯಿಸುತ್ತದೆ.
- **ಆಧುನಿಕ ಪ್ರಗತಿಶೀಲ ರಾಷ್ಟ್ರದ ಸಂಕೇತ** – ಇದು ರಾಷ್ಟ್ರವು ಜಾತಿ ಮತ್ತು ಧರ್ಮಾಧಾರಿತ ಕಾನೂನಿಂದ ಬದಲಾಗುತ್ತಿರುವುವುದರ ಸಂಕೇತವಾಗಿದೆ
- ನಮ್ಮ ಆರ್ಥಿಕ ಬೆಳವಣಿಗೆ ಗಮನಾರ್ಹವಾಗಿದ್ದರೂ, ಸಾಮಾಜಿಕ ಬೆಳವಣಿಗೆ ಹಿಂದುಳಿದಿದೆ. ಯುಸಿಸಿಯು ಸಾಮಾಜಿಕವಾಗಿ ಅಭ್ಯುದಯ ಹೊಂದಲು ಹಾಗೂ ಭಾರತವನ್ನು ನಿಜವಾದ ಅಭಿವೃದ್ಧಿ ಹೊಂದಿದ ರಾಷ್ಟ್ರದ ಗುರಿಯತ್ತ ಕೊಂಡೊಯ್ಯುತ್ತದೆ
- **ಇದು ಮಹಿಳೆಯರಿಗೆ ಹೆಚ್ಚಿನ ಹಕ್ಕುಗಳನ್ನು ನೀಡುತ್ತದೆ** – ಧಾರ್ಮಿಕ ವೈಯಕ್ತಿಕ ಕಾನೂನುಗಳು ಪ್ರಕೃತಿಯಲ್ಲಿ ಸ್ತ್ರೀ ಸಮಾನತೆಯ ವಿರೋಧವಾಗಿದೆ.
- ಹಳೆಯ ಧಾರ್ಮಿಕ ಕಾನೂನುಗಳು ಮಹಿಳೆಯರ ಕೌಟುಂಬಿಕ ಜೀವನವನ್ನು ನಿಯಂತ್ರಿಸಲು ಅವಕಾಶ ನೀಡುವುದನ್ನು ನಾವು ಎಲ್ಲಾ ಭಾರತೀಯರನ್ನು ಖಂಡಿಸುತ್ತಿದ್ದೆವು. ಮಹಿಳಾ ಸ್ವಾತಂತ್ರ್ಯ ಮತ್ತು ಮಹಿಳೆಯರನ್ನು ದುರುಪಯೋಗ ಪಡಿಸಿಕೊಳ್ಳುವುದನ್ನು ತಡೆಯಲು ಈ ಏಕರೂಪ ನಾಗರಿಕ ಸಂಹಿತೆ ಸಹಾಯ ಮಾಡುತ್ತದೆ
- **ಎಲ್ಲಾ ಭಾರತೀಯರನ್ನು ಒಂದೇ ರೀತಿ ಪರಿಗಣಿಸಬೇಕು** – ಮದುವೆ, ಉತ್ತರಾಧಿಕಾರ, ಕುಟುಂಬ, ಭೂಮಿಗೆ ಸಂಬಂಧಿಸಿದ ಎಲ್ಲಾ ಕಾನೂನುಗಳು ಇತ್ಯಾದಿಗಳು ಎಲ್ಲಾ ಭಾರತೀಯರಿಗೆ ಸಮಾನವಾಗಿರಬೇಕು. ಎಲ್ಲಾ ಭಾರತೀಯರನ್ನೂ ಒಂದೇ ಕಾನೂನಿನಡಿ ತರುವುದಕ್ಕೆ ಏನಾಸಂನ ಏಕ ಮಾತ್ರ ಮಾರ್ಗವಾಗಿದೆ.
- **ಇದು ನಿಜವಾದ ಸೆಕ್ಯುಲರಿಸಂ ಅನ್ನು ಉತ್ತೇಜಿಸುತ್ತದೆ**– ಏಕರೂಪದ ನಾಗರಿಕ ಸಂಹಿತೆಯು ಸ್ವಾತಂತ್ರ್ಯವನ್ನು ಮಿತಿಗೊಳಿಸುತ್ತದೆ ಎಂದು ಅರ್ಥವಲ್ಲ ಜನರು ತಮ್ಮ ಧರ್ಮವನ್ನು ಅನುಸರಿಸಲು ಅವಕಾಶವಿರುತ್ತದೆ, ಭಾರತದ ನಾಗರಿಕರೆಲ್ಲರೂ ಹಿಂದೂಗಳಾಗಿರಲೂ, ಮುಸ್ಲಿಮರಾಗಿರಲೀ ಅಥವಾ ಕ್ರಿಶ್ಚಿಯನ್ನರಾಗಿರಲೀ, ಸಿಖ್ಖರಾಗಿರಲೀ ಭಾರತದ ಒಂದೇ ಕಾನೂನುಗಳನ್ನು ಪಾಲಿಸಬೇಕು.
- **ಬದಲಾವಣೆಯು ಪ್ರಕೃತಿಯ ನಿಯಮ** – ತಮ್ಮಿಷ್ಟದಂತ ಆಯ್ಕೆಗೆ, ಆಡಳಿತಕ್ಕೆ ಅಲ್ಪಸಂಖ್ಯಾತ ಜನರಿಗೆ ಅವಕಆಶ ನೀಡಬಾರದು. ವೈಯುಕ್ತಿಕ ಕಾನೂನುಗಳು ನಿರ್ದಿಷ್ಟವಾದ ಧರ್ಮದ ಅಥವಾ ಜನರನ್ನು ದೃಷ್ಟಿಯಲ್ಲಿಟ್ಟುಕೊಂಡ ರೂಪಿತವಾದವಗುಗಳಾಗಿವೆ. ಮತ್ತು ಅಂದಿನ ಸಂದರ್ಭಕ್ಕೆ ಅನುಗುಣವಾಗಿ ರಚಿಸಲ್ಪಟ್ಟ ಕಾನೂನುಗಳಾಗಿವೆ. ಕಾಲ ಕಾಲಕ್ಕೆ ಅವನ್ನು ಪುನರ್ ಪರಿಶೀಲಿಸಬೇಕಾದ ಅಗತ್ಯತೆಯಿದೆ.
- ನಿರ್ದಿಷ್ಟ ವಾದ ಕೆಲವು ವೈಯಕ್ತಿಕ ಕಾನೂನುಗಳಲ್ಲಿನ ಹಲವು ನಿಬಂಧನೆಗಳಲ್ಲಿ ಮಾನವ ಹಕ್ಕುಗಳ ಉಲ್ಲಂಘನೆಯಾಗಿದೆ.
- ಆರ್ಟಿಕಲ್ 25 ಮತ್ತು ಆರ್ಟಿಕಲ್ 26 ಧಾರ್ಮಿಕ ಸ್ವಾತಂತ್ರ್ಯವನ್ನು ಖಾತರಿಪಡಿಸುತ್ತದೆ ಮತ್ತು ಖಿಇಇ ಜಾತ್ಯತೀತತೆಗೆ ವಿರುದ್ಧವಾಗಿಲ್ಲ.
- ವೈವಿಧ್ಯಮಯವಾಗಿರುವ ವೈಯುಕ್ತಿಕ ಕಾನೂನುಗಳ ಕ್ರೋಡೀಕರಣ ಮತ್ತು ಏಕೀಕರಣವು ಹೆಚ್ಚು ಸೂಕ್ತವಾದ ನ್ಯಾಯಾಂಗ ವ್ಯವಸ್ಥೆಯ ಸ್ಥಾಪನೆಗೆ ಕಾರಣವಾಗುತ್ತದೆ.ಈಗ ಸಾಮಾಜಿಕ ವ್ಯವಸ್ಥೆಯಲ್ಲಿನ, ನ್ಯಾಯಾಂಗ ವ್ಯವಸ್ಥೆಯಲ್ಲಿನ ಗೊಂದಲಗಳನ್ನು ಕಡಿಮೆ ಮಾಡುತ್ತದೆ ಮತ್ತು ಸುಲಲಿತವಾದ ಮತ್ತು ಹೆಚ್ಚು ಪರಿಣಾಮಕಾರಿ ಆಡಳಿತವನ್ನು ನೀಡಲು ಸಹಕಾರಿಯಾಗುತ್ತದೆ.

### ಏಕರೂಪ ನಾಗರಿಕ ಸಂಹಿತೆ-ಅದರ ಅನುಷ್ಠಾನದಲ್ಲಿನ ಸವಾಲುಗಳು

ಎಲ್ಲಾ ಸಮುದಾಯಗಳನ್ನು ಆಳುವಂತಹ ನಿಯಮ ರೂಪಿಸುವ ಕಾರ್ಯ ಒಂದು ಸವಾಲಿನ ಕೆಲಸವೇ. ಎಲ್ಲಾ ಸಮುದಾಯಗಳ, ಜನಾಂಗಗಳ ಹಿತಾಸಕ್ತಿಯ ಭಾವನೆಗಳನ್ನು ಪರಿಗಣಿಸಿ ಜಾರಿಗೊಳಿಸುವ ಅವಶ್ಯಕತೆಯಿದ್ದು ಸ್ವಲ್ಪ ಮಟ್ಟಿಗೆ ಅಡಚಣೆಗೆ ಕಾರಣವಾಗಬಹುದು.

- UCC ಬಗ್ಗೆ ತಪ್ಪು ಮಾಹಿತಿ – UCC ಯ ವಿಷಯವು ಅಲ್ಪಸಂಖ್ಯಾತರ ಹಿತಾಸಕ್ತಿಯನ್ನು ಕಡೆಗಣಿಸಲಾಗಿದೆ ಎಂಬ ತಪ್ಪು ಮಾಹಿತಿ. ಇದು ಅವರ ಮೇಲೆ ಬಹುಸಂಖ್ಯಾತರ ಅಭಿಪ್ರಾಯಗಳನ್ನು ಹೇರುವ ವಿಧಾನವಾಗಿದೆ ಎಂಬ ತಪ್ಪು ಮಾಹಿತಿ.
- ಬರಬಹುದಾದ ಸೂಕ್ಷ್ಮ ಪರಿಸ್ಥಿತಿಗಳನ್ನು ನಿಭಾಯಿಸುವಲ್ಲಿನ ಸಾಮರ್ಥ್ಯದ ಕೊರತೆ ಹಾಗೂ ರಾಜಕೀಯ ಇಚ್ಛಾಶಕ್ತಿಯ ಕೊರತೆ.
- ವಿವಿಧ ಧಾರ್ಮಿಕ ಸಮುದಾಯಗಳು ವಿಭಿನ್ನ ವೈಯಕ್ತಿಕ ಕಾನೂನು ಹೊಂದಿದ್ದು, ರಾಜಕೀಯದ ವಸ್ತುವಾಗುವ ಸಾಧ್ಯತೆ.



# ಸಮಾನ ನಾಗರಿಕ ಸಂಹಿತೆ ಅಸಲಿಯತ್ತೇನು?

**ಹೆಣ್ಣುಮಕ್ಕಳ ವಿವಾಹದ ವಯಸ್ಸು ನೆಲದ ಕಾನೂನಿನಲ್ಲಿ ಒಂದಿದ್ದರೆ ಮತೀಯ ಕಾನೂನುಗಳಲ್ಲಿ ಮತ್ತೊಂದಿದೆ. ಹೀಗಿರುವಾಗ ಇಂಥ ವಿವಾದಗಳು ಕೋರ್ಟಿನ ಮೆಟ್ಟಿಲೇರಿದಾಗ ನ್ಯಾಯಾಂಗ ಒಂದರಲ್ಲಿ ಅಪರಾಧಿಗೆ ಶಿಕ್ಷೆ ನೀಡಿದರೆ ಮತ್ತೊಂದರ ಮುಖೇನ ಪಾರಾಗುವ ಅವಕಾಶಗಳಿರುತ್ತವೆ. ಇದೇ ರೀತಿ ಬಹುಪತ್ನಿತ್ವದ ಬಗ್ಗೆ ನೆಲದ ಮತ್ತು ಮತೀಯ ಕಾನೂನುಗಳು ವಿಭಿನ್ನವಾಗಿವೆ. ಮತೀಯ ಕಾನೂನಿನ ಪ್ರಕಾರ ಇದು ತಪ್ಪಲ್ಲ. ನೆಲದ ಕಾನೂನಿ ಪ್ರಕಾರ ತಪ್ಪು. ಮುಸ್ಲಿಂ ಧರ್ಮದಲ್ಲಿನ ತ್ರಿಪಲ್ ತಲಾಕ್ ಕೂಡಾ ಇದರ ಇನ್ನೊಂದು ಭಾಗವೇ ಸರಿ.**



**ರಾಹುಲ್ ಹಜಾರೆ**
ಅಂಕಣಕಾರರು

ಒಂದು ದೇಶದ ಡೆಮೊಗ್ರಾಫಿಯನ್ನು ಒಂದು ಸಮುದಾಯ ಸುಲಭವಾಗಿ ಬದಲಿಸಬಲ್ಲದು. ಯಾವಾಗೆಲ್ಲಾ ಒಂದು ಸಮುದಾಯದವರ ಸಂಖ್ಯೆ ಜಾಸ್ತಿಯಾಗಿ ನೆಲದ ಕಾನೂನಿಗಿಂತ ತಮ್ಮ ಮತೀಯ ಕಾನೂನುಗಳೇ ಹೆಚ್ಚು ಅನ್ನುವ ಅಭಿಪ್ರಾಯ ಹೊರಹೊಮ್ಮುವುದೋ ಆಗೆಲ್ಲಾ ಆ ದೇಶದ ಅಭಿವೃದ್ಧಿ ಅಸಾಧ್ಯ. ಜನರಿಗೆ ಬದುಕಲು ಯೋಗ್ಯವಲ್ಲದ ಸಾಮಾಜಿಕ ಅಸ್ಥಿರತೆ ಆ ದೇಶದಲ್ಲಿ ಸ್ಥಾಪಿತಗೊಳ್ಳುತ್ತದೆ. ಪಕ್ಕದ ಪಾಕಿಸ್ತಾನವನ್ನೇ ನೋಡಿ ಇಸ್ಲಾಮಿನ ತಳಹದಿಯ ಮೇಲೆ ಕಟ್ಟಿದ ಆ ದೇಶ ಇವತ್ತು ತನ್ನ ಹೊಟ್ಟೆಪಾಡಿಗೂ ಗತಿ ಇಲ್ಲದೇ ಸಾಯುತ್ತಿದೆ. ರಿಲಿಜಿಯನ್ ಉಳಿದರೆ ಸಾಕು ಜನಜೀವನ ಎಷ್ಟೇ ವಿಚಲಿತವಾದರೂ ಪರವಾಗಿಲ್ಲ ಎಂಬಂಥ ಮನಸ್ಥಿತಿಯಿಂದ ಈ ಪರಿಸ್ಥಿತಿಯನ್ನು ಪಾಕ್ ತಲುಪಿದೆ.

ನೆಲದ ಕಾನೂನು ಮತ್ತು ಮತೀಯ ಕಾನೂನುಗಳು ವಿಭಿನ್ನವಾದಾಗ ನ್ಯಾಯದಾನ ವ್ಯವಸ್ಥೆಯಲ್ಲೂ ಗೊಂದಲಗಳು ಏರ್ಪಡುತ್ತವೆ. ಕ್ರಿಮಿನಲ್ ವಿಚಾರಗಳಿಗೆ ಸದ್ಯದ ಕಾನೂನಿನಲ್ಲಿ ಏಕರೂಪವಾದ ಕಾನೂನು ಜಾರಿಯಲ್ಲಿದೆ. ಮದುವೆ, ವಿಚ್ಛೇದನ, ಉತ್ತರಾಧಿಕಾರಿ ಇಂಥ ವಿಚಾರಗಳಲ್ಲಿ ಧರ್ಮದಿಂದ ಧರ್ಮಕ್ಕೆ ವಿಭಿನ್ನವಾದ ಕಾನೂನುಗಳಿವೆ. ಹಾಗಾದರೆ ಈ ಧಾರ್ಮಿಕ ಕಾನೂನುಗಳು ಬಂದಿದ್ದು ಹೇಗೆ? ಏಕೆ? ಭಾರತದಲ್ಲಿ ನ್ಯಾಯದಾನ ವ್ಯವಸ್ಥೆ ಅಷ್ಟೊಂದು ಕಷ್ಟಕರ ಸಂಗತಿಯಾಗಿರಲಿಲ್ಲ. ಐದಾರು ಜನ ಊರ ಹಿರಿಯರು ಕುಟುಂಬಗಳ ಕ್ಲಿಷ್ಟ ಸಮಸ್ಯೆಗಳನ್ನು ಪಂಚಾಯಿತಿ ಕಟ್ಟೆಯಲ್ಲಿ ಕೂತು ಬಗೆಹರಿಸುತ್ತಿದ್ದರು. ಕೋರ್ಟಿನ ಮೆಟ್ಟಿಲೇರುವ ಮುನ್ನವೇ ಹಲವಾರು ವಿಷಯಗಳು ಇತ್ಯರ್ಥವಾಗಿ ಬಿಡುತ್ತಿದ್ದವು. ಹಾಗೆಂದು ಕಾನೂನೇ ಇರಲಿಲ್ಲ ಎಂದೇನಲ್ಲ. ಹಲವಾರು ಸ್ಮೃತಿ ಮತ್ತು ಶೃತಿಗಳನ್ನು ದಾಟಿಕೊಂಡು ಬಂದ ನಾಡಿದು. ಇವತ್ತಿಗೂ ಹಿಂದುಗಳನ್ನು ಮನುವಾದಿಗಳೆಂದು ಆಡಿಕೊಳ್ಳುವ ಎಡಪಂಥೀಯರು ಆ ಸ್ಮೃತಿಯಿಂದ ಇಲ್ಲಿಯ ತನಕ ನಾವು ಬೆಳೆದು ಬಂದು ಇವತ್ತಿನ ಕಾಲಮಾನಕ್ಕೆ ತಕ್ಕಂತೆ ನಮ್ಮ ಕಾನೂನು, ಸಂಪ್ರದಾಯಗಳು ಬದಲಾದದ್ದರ ಬಗ್ಗೆ ಮಾತಾಡುವುದಿಲ್ಲ. ಇವತ್ತಿಗೂ ಹಳೇ ಜಮಾನದ ಕಾನೂನುಗಳನ್ನೇ ಪಾಲಿಸುತ್ತಾ ಇರುವ ರಿಲಿಜಿಯನ್ನಿನ ಬಗ್ಗೆ ಅವರಿಗೆ ಜಾಣಕುರುಡು. ಅದಿರಲಿ, ಈ ಧರ್ಮಾಧಾರಿತ ಕಾನೂನುಗಳ ನಮ್ಮಲ್ಲಿ ನುಸುಳಿದ್ದೇ ವಸಾಹತುಶಾಹಿಗಳು ನಮ್ಮನ್ನು ಒಡೆದಾಳಲು ಅಸ್ತ್ರವಾಗಿ ಪ್ರಯೋಗಿಸಿದ ಘಳಿಗೆಯಲ್ಲಿ. ಇಷ್ಟಾದರೂ ಹಿಂದೂಗಳು ಕಾಲಕ್ಕೆ ತಕ್ಕಂತೆ ಬದಲಾಯಿಸಿಕೊಂಡು Hindu Succession Act ಅಡಿಯಲ್ಲಿ ಹಲವು ವಿಚಾರಗಳನ್ನು ಇತ್ಯರ್ಥಗೊಳಿಸಿಕೊಳ್ಳುತ್ತಾರೆ.

ಇದು ಸಾಮಾಜಿಕ ವಿಚಾರದಲ್ಲಿ ಏರಿಳಿತ ಉಂಟು ಮಾಡುವುದಲ್ಲದೇ ನ್ಯಾಯದಾನ ವ್ಯವಸ್ಥೆಯಲ್ಲೂ ಸುಧಾರಣೆ ತರುವುದು. ಉದಾಹರಣೆಗೆ ಹೆಣ್ಣುಮಕ್ಕಳ ವಿವಾಹದ ವಯಸ್ಸು ನೆಲದ ಕಾನೂನಿನಲ್ಲಿ ಒಂದಿದ್ದರೇ ಮತೀಯ ಕಾನೂನುಗಳಲ್ಲಿ ಮತ್ತೊಂದಿದೆ. ಹೀಗಿರುವಾಗ ಇಂಥ ವಿವಾದಗಳು ಕೋರ್ಟಿನ

ಮೆಟ್ಟಿಲೇರಿದಾಗ ನ್ಯಾಯಾಂಗ ಒಂದರಲ್ಲಿ ಅಪರಾsಗೆ ಶಿಕ್ಷೆ ನೀಡಿದರೆ ಮತ್ತೊಂದರ ಮುಖೇನ ಪಾರಾಗುವ ಅವಕಾಶಗಳಿರುತ್ತವೆ. ಇದೇ ರೀತಿ ಬಹುಪತ್ನಿತ್ವದ ಬಗ್ಗೆ ನೆಲದ ಮತ್ತು ಮತೀಯ ಕಾನೂನುಗಳು ವಿಭಿನ್ನವಾಗಿವೆ. ಮತೀಯ ಕಾನೂನಿನ ಪ್ರಕಾರ ಇದು ತಪ್ಪಲ್ಲ, ನೆಲದ ಕಾನೂನಿ ಪ್ರಕಾರ ತಪ್ಪು. ಮುಸ್ಲಿಂ ಧರ್ಮದಲ್ಲಿ ತ್ರಿವಳಿ ತಲಾಕ್ ಕೂಡಾ ಇದರ ಇನ್ನೊಂದು ಭಾಗವೇ ಸರಿ.

ಏಕರೂಪ ನಾಗರಿಕ ಸಂಹಿತೆ ಜಾರಿಯ ಕುರಿತು ಚರ್ಚೆ ಶುರುವಾಗುತ್ತಿದ್ದಂತೆ ಇದನ್ನು ಮುಸ್ಲಿಂ ವಿರೋಧಿ ಕಾನೂನು ಎಂಬಂತೆ ಬಿಂಬಿಸುತ್ತಿರುವ ಹಲವರಿಗೆ ಇವತ್ತಿಗೆ ಗೊತ್ತಿಲ್ಲದ ಸಂಗತಿ ಎಂದರೆ ಈ ಕಾನೂನಿನ ಕುರಿತು ಈ ಮಟ್ಟಿಗಿನ ಚರ್ಚೆಗೆ ಬರಲು ಕಾರಣವೇ ಇಬ್ಬರು ಮುಸ್ಲಿಂ ಹೆಣ್ಣುಮಕ್ಕಳು ಒಬ್ಬಳು ಶಾಬಾನು ಇನ್ನೊಬ್ಬಳು ಸಾಹಿರಾ ಬಾನು. ಶಾಬಾನುಳ ಕೇಸನ್ನೊಮ್ಮೆ ಮೆಲುಕು ಹಾಕುವುದುದು ಸೂಕ್ತ. ಮಧ್ಯಪ್ರದೇಶದಲ್ಲಿ ಮೊಹಮ್ಮದ್ ಅಹ್ಮದ್ ಖಾನ್ ಎಂಬುವವನು ಶಾಬಾನುಳನ್ನು ಮದುವೆಯಾಗಿ ಹದಿನಾಲ್ಕು ವರ್ಷಗಳ ನಂತರ ಇನ್ನೊಬ್ಬಳನ್ನು ಮದುವೆಯಾಗುತ್ತಾನೆ. ಇಷ್ಟಾಗಿಯೂ ಆಕೆ ಆತನ ಎರಡನೇಯ ಹೆಂಡತಿಯ ಜೊತೆಗೆ ಅದೇ ಮನೆಯಲ್ಲಿರುತ್ತಾಳೆ. ಒಂದು ದಿನ ಆಕೆ ಬೇಡವೆನಿಸಿ ಅವಳನ್ನು ಹೊರಹಾಕಿದಾಗ ಐದು ಮಕ್ಕಳೊಂದಿಗೆ 62 ವರ್ಷದ ಶಾಬಾನೂ ಬೀದಿ ಪಾಲಾಗುತ್ತಾಳೆ. ತನಗೆ ಮೆಂಟೆನೆನ್ಸ್ ಕೊಡುವಂತೆ ಕೋರ್ಟಿನ ಮೆಟ್ಟಿಲೇರಿದ ಆಕೆಯನ್ನು ತುಳಿಯೋದಕ್ಕೆ ಮುಸ್ಲಿಂ ಪರ್ಸನಲ್ ಲಾ ಬೋರ್ಡ್ ಸನ್ನದ್ಧವಾಗುತ್ತದೆ. ಇದ್ದತ್(ತಲಾಕ್ ಆಗಿ ಮೂರು ತಿಂಗಳು)ನ ಸಮಯದಲ್ಲಿ ಮಾತ್ರ ಮೆಂಟೆನನ್ಸ್ ಕೊಡಬೇಕು ಆಕೆ ತಲಾಕ್‌ನ ವೇಳೆಯಲ್ಲಿ ಗರ್ಭಿಣಿಯಾಗಿದ್ದರೇ ಮಗು ಹುಟ್ಟುವ ತನಕ ಆಕೆಗೆ ಮೆಂಟೆನನ್ಸ್ ಕೊಡಬೇಕು ಎಂಬ ಮುಸ್ಲಿಂ ಕಾನೂನನ್ನು ಮುಂದಿಟ್ಟುಕೊಂಡು ವಾದಕ್ಕೆ ನಿಲ್ಲುತ್ತದೆ. ಈ ಒಂದು ಕೇಸು ದೇಶದೆಲ್ಲೆಡೆ ಸಂಚಲನ ಮೂಡಿಸುತ್ತಿರುವಾಗ ಸ್ವತಃ ಅಂದಿನ ಪ್ರಧಾನಿ ರಾಜೀವ್ ಗಾಂs ಇದರ ಚರ್ಚೆಯನ್ನು ಮುನ್ನೆಲೆಗೆ ತಂದು ಇದಕ್ಕೊಂದು ಕಾನೂನು ರೂಪಿಸಬೇಕು ಎಂದು ಮಾತಾಡುತ್ತಾರೆ.

ಹೀಗೆಯೇ ಇತ್ತೀಚೆಗೆ ಸಾಹಿರಾ ಬಾನು ಕೂಡಾ ಸಂತ್ರಸ್ತೆಯಾಗಿ ಕುಟುಂಬದಿಂದ ಹೊರಬಂದ ನಂತರ ತ್ರಿಪಲ್ ತಲಾಕನ್ನು ಬ್ಯಾನ್ ಮಾಡುವಂತೆ ಕೋರ್ಟಿನ ಮೊರೆ ಹೋಗುತ್ತಾಳೆ.

ಇವೆರಡೂ ಕೇಸಿನ ನಂತರವೂ ಖಿಇಇ ಮುಸ್ಲಿಂ ವಿರೋs ಕಾನೂನು ಆಗುವುದು ಹೇಗೆ? ಬಹುಪತ್ನಿತ್ವ, ತಲಾಕ್, ಉತ್ತರಾsಕಾರಿಗಳ ನಿರ್ಧಾರ ಇಂಥ ಕಾನೂನುಗಳ ಮತೀಯವಾದದಡಿಯಲ್ಲಿ ಕಾಲಕ್ಕೆ ತಕ್ಕಂತೆ ಬದಲಾಗದೇ ಸಮಾಜಕ್ಕೂ ದೇಶಕ್ಕೂ ಪಿಡುಗಾದರೆ ಅದನ್ನು ಸರಿದೂಗಿಸುವ ಕರ್ತವ್ಯ ಆಳುವ ಸರ್ಕಾರಗಳದ್ದಾಗಬೇಕು. ಹಾಗಾದರೆ ಈ ಕಾನೂನುಗಳ ಅಡಿಯಲ್ಲಿ ಸಂಪ್ರದಾಯ ಆಚರಣೆಗಳಿಗೆ ಧಕ್ಕೆ ಬರುತ್ತಾ ಅಂದರೆ ಖಂಡಿತ ಇಲ್ಲ. ಯಾವ್ಯಾವ ಆಚರಣೆಗಳು ESSENTIAL RELIGIOUS PRACTICEನಡಿಯಲ್ಲಿ ಬರುತ್ತದೋ ಅಂಥದ್ದರ ಆಚರಣೆಗೆ ಯಾವ ತೊಂದರೆಗಳೂ ಇಲ್ಲ. ಇದು ಇವತ್ತಿನ ಸರ್ಕಾರ ಓಟ್ ಬ್ಯಾಂಕಿಗೋಸ್ಕರ ಮಾಡುತ್ತಿದೆ ಅನ್ನುವವರು ಗಮನಿಸ ಬೇಕಾದ ಸಂಗತಿ ಅಂಬೇಡ್ಕರ್ ಅವರು ಈ ವಿಚಾರವನ್ನು ಅಂದಿನ ಸಂಸತ್ ಅಧಿವೇಶನದಲ್ಲಿಯೇ ಚರ್ಚಿಸಿದ್ದರು. Directive Principles of State Policyಯಲ್ಲಿ ಇದನ್ನು ಅಳವಡಿಸಿ ಅಗತ್ಯ ಬಿದ್ದಾಗ ಜಾರಿಗೊಳಿಸುವಂತೆಯೂ ಹೇಳಿದ್ದರು.

ಇನ್ನೂ ಮುಂದುವರೆದು ಕೆಲವರು ಇದನ್ನು ಹಿಂದೂಗಳ ಕಾನೂನನ್ನು ಮುಸ್ಲಿಮರ ಮೇಲೆ ಹೇರುತ್ತಿದ್ದಾರೆ ಎಂಬಂತೆ ಮಾತಾಡುತ್ತಿದ್ದಾರೆ. ಹಿಂದೂ ಮತ್ತು ಮುಸ್ಲಿಮರ ಧಾರ್ಮಿಕ ಕಾನೂನುಗಳಲ್ಲಿರುವ ಲೋಪಗಳನ್ನು ಏಕರೂಪವಾಗಿ ಪರಿಶೀಲಿಸಿ ಅದಕ್ಕೊಂದು ಸಮಾನ ಕಾನೂನನ್ನು ಪ್ರಸ್ತುತ ಪರಿಸ್ಥಿತಿಗೆ ಒಗ್ಗುವಂತೆ ತಯಾರು ಮಾಡುವುದೇ ಇದರ ಉದ್ದೇಶ. ಇಂಥ ಉದ್ದೇಶವನ್ನು ತಿರುಚಿ ನಾಲ್ಕು ಜನರಿಗೆ ಹಂಚುವವರಲ್ಲಿ ಕೆಲವರು ಇದು ಮೀಸಲಾತಿಯ ವಿರೋಧವೆಂದೂ ಭಾವಿಸುತ್ತಿದ್ದಾರೆ. ಖಂಡಿತ ಈಗಿರುವ ಮುಂದೆ ಬರುವ ಯಾವುದೇ ಮೀಸಲಾತಿಗೂ ಇದರಿಂದ ಯಾವುದೇ ತೊಂದರೆಯಾಗುವುದಿಲ್ಲ. ಅಸಲಿಗೆ ಮೀಸಲಾತಿಗೂ ಖಿಇಇಗೂ ಸಂಬಂಧವೇ ಇಲ್ಲ. ಇದೆಲ್ಲಾ ಒಂದು ಆಯಾಮವಾದರೆ ಪಾಂಡೀಚೆರಿ, ಗೋವಾಗಳಲ್ಲಿ ಪ್ರೆಂಚ್ ಮತ್ತು ಪೋರ್ಚುಗೀಸ್ ಕಾನೂನುಗಳಿವೆ. ನರಸಿಂಹ ರಾಯರ ಕಾಲದಲ್ಲಿ ವಕ್ಫ್ ಬೋರ್ಡಿಗೆ ಸುಪ್ರಿಂ ಕೋರ್ಟ್ ಹೆಚ್ಚಿನ ಶಕ್ತಿ ತುಂಬಿದ್ದ ಕಾರಣ ಹಲವಾರು ಕೇಸ್‌ಗಳ ಇತ್ಯರ್ಥದಲ್ಲಿ ಈ ಎಲ್ಲಾ ಕಾನೂನು ವ್ಯವಸ್ಥೆಗಳು ತಲೆ ಹಾಕುತ್ತವೆ. ಮುಜರಾಯಿ ಮತ್ತು ವಕ್ಫ್‌ನ ಟ್ರಸ್ಟ್ ಲಾಗಳು UCCಯಡಿಯಲ್ಲಿ ಚರ್ಚೆ ಮತ್ತು ಮಾರ್ಪಾಟಾಗುವ ಸಾಧ್ಯತೆಗಳಿವೆ.

ಈಗ ಸರ್ಕಾರ ಇದನ್ನು ಸಾರ್ವಜನಿಕರ ಸಮ್ಮತಿ ಅಸಮ್ಮತಿ, ಸಲಹೆ, ಚರ್ಚೆಗಳಿಗೆ ಒಂದು ವೇದಿಕೆ ಒದಗಿಸಿದೆ. ಅದಾದ ನಂತರ ಲಾ ಕಮಿಷನ್ನಿನಲ್ಲಿ ಕಾನೂನು ತಜ್ಞರು ಚರ್ಚಿಸಿ ಒಂದು ಕರಡು ಪ್ರತಿಯನ್ನು ರಚಿಸಿ ಮತ್ತೊಮ್ಮೆ ಜನರ ಮುಂದೆ ಬರುತ್ತದೆ. ಆಗ ಮತ್ತೊಂದು ಸುತ್ತಿನ ಚರ್ಚೆಯಾಗುತ್ತದೆ. ಈ ವಿಚಾರವಾಗಿ ಪ್ರತಿ ರಾಜ್ಯದಲ್ಲೂ ಆ ರಾಜ್ಯದ ಕಾನೂನು ತಜ್ಞರ ಸಮಿತಿಗಳು ರಚನೆಯಾಗಿವೆ. ನಂತರದ ಕಾಲಘಟ್ಟದಲ್ಲಿ ಇದು ಸಂಸತ್ತಿನಲ್ಲಿ ಚರ್ಚೆಗೆ ಒಳಪಟ್ಟು ಕಾನೂನು ತಯಾರಾಗುತ್ತದೆ. ಇಷ್ಟಾದ ನಂತರವೂ ಇದೊಂದು concurrent ಕಾನೂನಾದ ಕಾರಣ ರಾಜ್ಯಗಳಿಗೆ ಪ್ರತ್ಯೇಕ ಕಾನೂನನ್ನು ಹೊಂದುವ ಅವಕಾಶ ಮಾಡಿಕೊಡುತ್ತಾರೆ ಎಂಬುದು ಕೇಳಿ ಬರುತ್ತಿದೆ. ಹೀಗಾಗಿ ಇಲ್ಲೆಲ್ಲೂ ದಿಢೀರ್ ನಿರ್ಧಾರಗಳಿಲ್ಲ. ಸಂವಿಧಾನಾತ್ಮಕವಾಗಿ ಎಲ್ಲಾ ಹಂತಗಳನ್ನು ದಾಟಿಯೇ ಈ ಕಾನೂನು ರೂಪಿತವಾಗುತ್ತದೆ. ಲಿಂಗ ತಾರತಮ್ಯವನ್ನು ಹೋಗಲಾಡಿಸಿ ಸಾಮಾಜಿಕ ನ್ಯಾಯದಡಿಯಲ್ಲಿ ಸರ್ವಧರ್ಮ ಸಮನ್ವತೆಯನ್ನು ಸಾಧಿಸುವುದಲ್ಲದೇ ಧರ್ಮದ ಸಂಕೋಲೆಯಲ್ಲಿರುವ ಹೆಣ್ಣುಮಕ್ಕಳನ್ನು ಸಮಾಜದ ಮುಖ್ಯವಾಹಿನಿಗೆ ತರುವುದರಲ್ಲಿ ಈ ಕಾನೂನು ಕಾರ್ಯನಿರ್ವಹಿಸುವುದೆಂದರೆ ತಪ್ಪಾಗಲಿಕ್ಕಿಲ್ಲ.



## 9 ವರ್ಷ ಮೋದಿ ಸರ್ಕಾರದ ಸಂಭ್ರಮಕ್ಕೆ


# ಜಿಲ್ಲಾ ಸಮಾವೇಶ

ಅನೇಕ ಏಳು-ಬೀಳು, ಸವಾಲು ಸಂಕಷ್ಟಗಳ ನಡುವೆ ನರೇಂದ್ರ ಮೋದಿ ಸರ್ಕಾರ ಎಲ್ಲವನ್ನು ಸಮರ್ಥವಾಗಿ ಎದುರಿಸಿ ದೇಶಕ್ಕೆ ಮತ್ತು ದೇಶದ ಜನತೆಯ ಕಲ್ಯಾಣ ಸೇವೆಯನ್ನು ಮಾಡುತ್ತಾ ಒಂಬತ್ತು ವರ್ಷಗಳನ್ನು ಪೂರೈಸಿದೆ. ದೇಶದಲ್ಲಾದ ಆಮೂಲಾಗ್ರ ಬದಲಾವಣೆಯ ಸಾಧನೆಯು ಜನ ಸಾಮಾನ್ಯರಿಗೂ ತಿಳಿದಾಗ ಮಾತ್ರ ಸಾಧನೆಗೆ ಒಂದು ಅರ್ಥ ಸಿಕ್ಕಂತಾಗುತ್ತದೆ.

ನರೇಂದ್ರ ಮೋದಿ ನೇತೃತ್ವದ ಕೇಂದ್ರದ ಬಿಜೆಪಿ ಸರ್ಕಾರಕ್ಕೆ 9 ವರ್ಷ ಕಳೆದಿದ್ದು, ಅಲ್ಲದೆ ಮುಂದಿನ ವರ್ಷ ಲೋಕಸಭೆ ಚುನಾವಣೆ ನಡೆಯಲಿದ್ದು, ಕೇಂದ್ರದ ಸಾಧನೆಗಳನ್ನು ಜನರಿಗೆ ತಲುಪಿಸುವ ನಿಟ್ಟಿನ ಭಾಗವಾಗಿ ದೇಶಾದ್ಯಂತ ಅನೇಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಅದರ ಭಾಗವಾಗಿ ರಾಜ್ಯದಲ್ಲಿ ಪ್ರತಿ ಜಿಲ್ಲೆಯಲ್ಲಿ ಕಾರ್ಯಕರ್ತರ ಸಮಾವೇಶ ಮಾಡುವ ಮೂಲಕ ಮೋದಿ ಸಾಧನೆಗಳನ್ನು ಜನರಿಗೆ ತಲುಪಿಸಲು ಮುಂದಡಿ ಇಡಲಾಯಿತು. ಕರ್ನಾಟಕದ ವಿಧಾನಸಭೆ ಚುನಾವಣೆಯಲ್ಲಿ ಪಕ್ಷಕ್ಕಾದ ಸೋಲಿನಿಂದ ಸಹಜವಾಗಿ ಕಾರ್ಯಕರ್ತರಲ್ಲಿ ತುಸು ಬೇಸರವಾಗಿತ್ತು. ಆದರೆ ಕೇಂದ್ರದ ಮೋದಿ ಸರ್ಕಾರಕ್ಕೆ 9 ವರ್ಷ ಪೂರೈಸಿದ್ದು ಮತ್ತೆ ಕಾರ್ಯಕರ್ತರಲ್ಲಿ ಕೆಲಸ ಮಾಡಲು ಉತ್ಸಾಹ ಬಂದಂತಾಗಿದೆ.

ಕೇಂದ್ರ ಸರ್ಕಾರದ ಸಾಧನೆಗಳನ್ನು ಜನರಿಗೆ ತಿಳಿಸಲು ರಾಜ್ಯ ನಾಯಕರು ಏಳು ತಂಡವನ್ನಾಗಿ ಮಾಡಿಕೊಂಡು ರಾಜ್ಯ ಪ್ರವಾಸವನ್ನು ಮಾಡಿತು. ಏಳು ತಂಡವು ರಾಜ್ಯದ ಪ್ರತೀ ಜಿಲ್ಲೆಗೆ ಹೋಗಿ ಜಿಲ್ಲಾಮಟ್ಟದಲ್ಲಿ ಕಾರ್ಯಕರ್ತರ ಸಮಾವೇಶ ಮಾಡಿ ಕಾರ್ಯಕರ್ತರಲ್ಲಿ ಉತ್ಸಾಹ ತುಂಬಲಾಯಿತು.

ಮಹೇಶ್ ಹೆಗಡೆ
ಬಿಜೆಪಿ ಕಾರ್ಯಕರ್ತರು



# ಜೂನ್-22 ರಿಂದ ಜೂನ್-26

**ತಂಡಗಳ ವಿವರ:**

**ತಂಡ-1 :** ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪ ನೇತೃತ್ವದ ತಂಡದಲ್ಲಿ ಮಾಜಿ ಸಚಿವರಾದ ಶ್ರೀ ಗೋವಿಂದ ಕಾರಜೊಳ, ಮುಖಂಡರಾದ ಶ್ರೀ ನಾರಾಯಣಸ್ವಾಮಿ, ಸಂಸದರಾದ ಶ್ರೀ ಪ್ರತಾಪ ಸಿಂಹ, ಶ್ರೀ ಪಿ.ಸಿ.ಮೋಹನ್, ಶ್ರೀ ತೇಜಸ್ವಿ ಸೂರ್ಯ ಶ್ರೀ ಮುದ್ದಹನುಮೇಗೌಡ, ಶ್ರೀ ರೇಣುಕಾಚಾರ್ಯ, ಶ್ರೀ ಮಾಧುಸ್ವಾಮಿ, ಅವರು ಪ್ರವಾಸ ಮಾಡಿದರು.

**ಪ್ರವಾಸ ಮಾಡಿದ ಜಿಲ್ಲೆಗಳು:** ದಾವಣಗೆರೆ, ಚಿತ್ರದುರ್ಗ, ಮಧುಗಿರಿ, ತುಮಕೂರು, ಬೆಂಗಳೂರು ಉತ್ತರ, ಬೆಂಗಳೂರು ಕೇಂದ್ರ, ಬೆಂಗಳೂರು ದಕ್ಷಿಣ.

**ತಂಡ-2 :** ಶ್ರೀ ನಳಿನ್ ಕುಮಾರ್ ಕಟೀಲ್ ನೇತೃತ್ವದ ತಂಡದಲ್ಲಿ ಕೇಂದ್ರ ಸಚಿವರಾದ ಶ್ರೀ ಭಗವಂತ ಖೂಬಾ, ಮಾಜಿ ಸಚಿವ ಶ್ರೀ ಶ್ರೀರಾಮುಲು, ಮುಖಂಡರಾದ ಶ್ರೀ ಎಂ.ಪಿ.ದೇವೇಂದ್ರಪ್ಪ, ಶ್ರೀ ರಾಜೂಗೌಡ, ಶ್ರೀ ಪಿ.ವಿ.ನಾಯಕ್, ಶ್ರೀ ಸಂಗಣ್ಣ ಕರಡಿ ಶ್ರೀ ಎಂ.ಪಿ.ಪ್ರಕಾಶ್, ಶ್ರೀ ಎಂ.ಪಿ.ಸುಮಾ ಶ್ರೀ ವಿಜಯ್ ಅವರು ಇದ್ದರು.

**ಪ್ರವಾಸ ಮಾಡಿದ ಜಿಲ್ಲೆಗಳು:** ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು, ಬಳ್ಳಾರಿ, ವಿಜಯನಗರ,

**ತಂಡ -3:** ಮಾಜಿ ಮುಖ್ಯ ಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿ ನೇತೃತ್ವದ ತಂಡದಲ್ಲಿ ಸಂಸದರಾದ ಶ್ರೀ ರಮೇಶ್ ಜಿಗಜಿಣಗಿ, ಮುಖಂಡರಾದ ಶ್ರೀ ಗದ್ದಿಗೌಡರ, ಶ್ರೀಮತಿ ಮಂಗಳಾ ಸುರೇಶ್ ಅಂಗಡಿ, ಶ್ರೀ ಬಸನಗೌಡ ಪಾಟೀಲ ಯತ್ನಾಳ್, ಶ್ರೀ ರಮೇಶ್ ಜಾರಕಿ ಹೊಳಿ, ಶ್ರೀ ಮುರುಗೇಶ್ ನಿರಾಣಿ, ಶ್ರೀ ಶಶಿಕಲಾ ಜೊಲ್ಲೆ, ಶ್ರೀ ಬೈರತಿ ಬಸವರಾಜು, ಶ್ರೀ ವೀರಣ್ಣ ಚರಂತಿಮಠ, ಶ್ರೀ ರಮೇಶ್ ಕತ್ತಿ ವರು ಇದ್ದರು.

**ಪ್ರವಾಸ ಮಾಡಿದ ಜಿಲ್ಲೆಗಳು:** ವಿಜಯಪುರ, ಬಾಗಲಕೋಟೆ, ಬೆಳಗಾವಿ ನಗರ, ಗ್ರಾಮಾಂತರ ಮತ್ತು ಚಿಕ್ಕೋಡಿ.

**ತಂಡ -4:** ಮಾಜಿ ಮುಖ್ಯ ಮಂತ್ರಿ ಶ್ರೀ ಡಿ.ವಿ.ಸದಾನಂದ ಗೌಡ ನೇತೃತ್ವದ ತಂಡದಲ್ಲಿ ಮುಖಂಡರಾದ ಶ್ರೀ ವಿ.ಸೋಮಣ್ಣ, ಕು.ಶೋಭಾ ಕರಂದ್ಲಾಜೆ, ಶ್ರೀ ಗೋಪಾಲಯ್ಯ, ಶ್ರೀ ಮಲ್ಲಿಕಾರ್ಜುನಪ್ಪ, ಶ್ರೀ ವಿಜಯಶಂಕರ್, ಶ್ರೀ ಶ್ರೀನಿವಾಸ ಪ್ರಸಾದ್, ಶ್ರೀ ನಿರಂಜನ್, ಶ್ರೀ ರಾಮದಾಸ್, ಶ್ರೀ ನಾಗೇಂದ್ರ ಇದ್ದರು.

**ಪ್ರವಾಸ ಮಾಡಿದ ಜಿಲ್ಲೆಗಳು:** ಚಾಮರಾಜನಗರ, ಮೈಸೂರು, ಮೈಸೂರು ಗ್ರಾಮಾಂತರ, ಮಂಡ್ಯ- ರಾಮನಗರ.

**ತಂಡ -5:** ಕೇಂದ್ರ ಸಚಿವರಾದ ಶ್ರೀ ಪ್ರಹ್ಲಾದ ಜೋಶಿ ನೇತೃತ್ವದ ತಂಡದಲ್ಲಿ ಮುಖಂಡರಾದ ಶ್ರೀ ಸಿ.ಟಿ.ರವಿ, ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ, ಶ್ರೀ ಸುನೀಲ್‌ಕುಮಾರ್, ಶ್ರೀ ಕೋಟ ಶ್ರೀನಿವಾಸ ಪೂಜಾರಿ, ಶ್ರೀ ವಿಜಯೇಂದ್ರ, ಶ್ರೀ ಪ್ರಮೋದ್ ಮಧ್ವರಾಜ್, ಶ್ರೀ ಬಿ.ವೈ.ವಿಜಯೇಂದ್ರ, ಶ್ರೀ ಶಿವರಾಮ ಹೆಬ್ಬಾರ್, ಶ್ರೀ ದಿನಕರ ಶೆಟ್ಟಿ ಶ್ರೀ ಆರಗ ಜ್ಞಾನೇಂದ್ರ, ಶ್ರೀ ವೇದವ್ಯಾಸ ಕಾಮತ್ ರವರು ಇದ್ದರು.

**ಪ್ರವಾಸ ಮಾಡಿದ ಜಿಲ್ಲೆಗಳು:** ಶಿವಮೊಗ್ಗ, ದಕ್ಷಿಣ ಕನ್ನಡ, ಉತ್ತರ ಕನ್ನಡ, ಉಡುಪಿ.

**ತಂಡ -6:** ಮಾಜಿ ಸಚಿವರಾದ ಶ್ರೀ ಈಶ್ವರಪ್ಪ ಅವರ ತಂಡದಲ್ಲಿ ಮುಖಂಡರಾದ ಶ್ರೀ ಡಾ.ಸಿ.ಎನ್. ಶಿವಕುಮಾರ್, ಶ್ರೀ ಅಶ್ವತ್ಥನಾರಾಯಣ, ಶ್ರೀ ಅರವಿಂದ ಬೆಲ್ಲದ, ಶ್ರೀ ಬಿ.ಸಿ.ಪಾಟೀಲ, ಶ್ರೀ ಸಂಗಣ್ಣ ಕರಡಿ, ಶ್ರೀ ಶಂಕರ ಪಾಟೀಲ ಮುನೇನಕೊಪ್ಪ ಶ್ರೀ ಬಿ.ಸಿ.ಪಾಟೀಲ, ಶ್ರೀ ಶಿವರಾಜ್ ಸಜ್ಜನ್ ಇದ್ದರು.



**ಪ್ರವಾಸ ಮಾಡಿದ ಜಿಲ್ಲೆಗಳು:** ಹಾವೇರಿ, ಹುಬ್ಬಳ್ಳಿ– ಧಾರವಾಡ ಗ್ರಾಮಾಂತರ, ಗದಗ, ಕೊಪ್ಪಳ, ಧಾರವಾಡ.

**ತಂಡ –7:** ಮಾಜಿ ಸಚಿವರಾದ ಶ್ರೀ ಆರ್.ಅಶೋಕ ನೇತೃತ್ವದಲ್ಲಿ ಮುಖಂಡರಾದ ಶ್ರೀ ಪ್ರತಾಪಸಿಂಹ, ಶ್ರೀ ಎಸ್.ಟಿ.ಸೋಮಶೇಖರ್, ಶ್ರೀ ಕೆ.ಜಿ.ಬೋಪಯ್ಯ, ಶ್ರೀ ಎ.ಟಿ.ರಾಮಸ್ವಾಮಿ, ಶ್ರೀ ಪಿ.ಸಿ.ಮೋಹನ್, ಶ್ರೀ ಮುನಿಸ್ವಾಮಿ, ಶ್ರೀ ಪ್ರೀತಂಗೌಡ, ಶ್ರೀ ಅಪ್ಪಚ್ಚು ರಂಜನ್, ಶ್ರೀ ಮಂಜುನಾಥ್,

**ಪ್ರವಾಸ ಮಾಡಿದ ಜಿಲ್ಲೆಗಳು:** ಚಿಕ್ಕಬಳ್ಳಾಪುರ, ಕೋಲಾರ, ಬೆಂಗಳೂರು ಗ್ರಾ. ಹಾಸನ, ಚಿಕ್ಕಮಗಳೂರು, ಕೊಡಗು.

ಆಯಾ ಜಿಲ್ಲೆಗಳಲ್ಲಿ ನಡೆದ ಸಮಾವೇಶಗಳಲ್ಲಿ ಜಿಲ್ಲಾಧ್ಯಕ್ಷರು, ಜಿಲ್ಲಾ ಪದಾಧಿಕಾರಿಗಳು, ಜಿಲ್ಲಾ ವ್ಯಾಪ್ತಿಯ ಹಾಲಿ ಶಾಸಕರು, ಮಾಜಿ ಶಾಸಕರು, ವಿಧಾನ ಪರಿಷತ್ ಸದಸ್ಯರು ಸೇರಿದಂತೆ ಮುಖಂಡರು, ನಾಯಕರು ಭಾಗಿಯಾಗಿದ್ದರು.

ಈ ಎಲ್ಲಾ ಏಳು ತಂಡದ ನಾಯಕರು ರಾಜ್ಯಾದ್ಯಂತ ಪ್ರವಾಸ ಮಾಡಿ ಪ್ರಧಾನಿ ಶ್ರೀ ಮೋದಿ ನೇತೃತ್ವದ ಸರ್ಕಾರದಿಂದಾದ ಮೂಲಭೂತ ಸೌಕರ್ಯದಲ್ಲಾದ ಕ್ರಾಂತಿ, ರೈತರ ಖಾತೆಗೆ 6,000 ರೂ., ಮಹಿಳೆಯರಿಗೆ ಗ್ಯಾಸ್ ಸಿಲಿಂಡರ್, ಜನೌಷಧ ಕೇಂದ್ರದ ಮೂಲಕ ಬಡವರಿಗೆ ಆರೋಗ್ಯ ಸೌಕರ್ಯ, ಮೆಡಿಕಲ್ ಕಾಲೇಜು, ಐಐಟಿ, ಏಮ್ಸ್ ಸಂಸ್ಥೆಗಳ ದೊಡ್ಡ ಸಂಖ್ಯೆಯಲ್ಲಿ ಹೆಚ್ಚಳ, ರಾಮಮಂದಿರ ನಿರ್ಮಾಣ, ಸರ್ಜಿಕಲ್ ಸ್ಟ್ರೈಕ್, ಮನೆ ಮನೆಗೆ ನಲ್ಲಿ ನೀರು ಸೇರಿದಂತೆ ಕೇಂದ್ರದ ಕಲ್ಯಾಣ ಯೋಜನೆಗಳನ್ನು ತಿಳಿಸಿದರು.

## ಮನೆ ಮನೆಗೆ ತೆರಳಿ ಪ್ರಚಾರ

ಮೋದಿಯವರ ಸರ್ಕಾರ ಮತ್ತೊಮ್ಮೆ ಅಧಿಕಾರಕ್ಕೆ ಬರುವ ದೃಷ್ಟಿಯಿಂದ ಕಾರ್ಯಕರ್ತರಲ್ಲಿ ಸ್ಫೂರ್ತಿ ತುಂಬಲಾಗುತ್ತಿದೆ. ಆ ನಿಟ್ಟಿನಲ್ಲಿ ಮೋದಿ ಸರ್ಕಾರದ 9 ವರ್ಷದ ಸಾಧನೆಯನ್ನು ಜೂ.26 ರಿಂದ ಜು.5 ರವರೆಗೆ ರಾಜ್ಯಾದ್ಯಂತ ಪ್ರತಿ ಬೂತ್‌ಮಟ್ಟದ ಮನೆಮನೆಗೆ ತೆರಳಿ ಮೋದಿ ಕರಪತ್ರ ವಿತರಿಸಲಾಗಿದೆ. 50 ಲಕ್ಷಕ್ಕೂ ಹೆಚ್ಚು ಮನೆಗಳಿಗೆ ಕರಪತ್ರ ನೀಡುವ ಮೂಲಕ ಸಾಧನೆಯ ವಿವರವನ್ನು ಜನ ಸಾಮಾನ್ಯರಿಗೆ ತಿಳಿಸಲಾಯಿತು.

ಒಟ್ಟಾರೆ 2024 ರಲ್ಲಿ ನಡೆಯುವ ಲೋಕಸಭೆ ಚುನಾವಣೆಗೆ ಪೂರ್ವತಯಾರಿ ಆರಂಭವಾಗಿದ್ದು, ಸಂಘಟನಾತ್ಮಕ ಎಲ್ಲಾ 36 ಜಿಲ್ಲೆಗಳಲ್ಲಿ ಕಾರ್ಯಕರ್ತರ ಸಮಾವೇಶ ಯಶಸ್ವಿಯಾಗಿ ನಡೆದಿದ್ದು, ಮತ್ತೊಮ್ಮೆ ದೇಶದ ಗದ್ದುಗೆಯಲ್ಲಿ ಮೋದಿಯವರನ್ನು ಕುಳ್ಳರಿಸಲು ಕಾರ್ಯಕರ್ತರು ಉತ್ಸಾಹದಿಂದ ಕಾರ್ಯಕ್ಷೇತ್ರಕ್ಕೆ ಧುಮುಕಿದ್ದಾರೆ.













ಸ್ವಾತಂತ್ರ್ಯ ಪೂರ್ವದಲ್ಲಿ ದೇಶದ ಆರ್ಥಿಕತೆಗೆ ಕೃಷಿ ಕ್ಷೇತ್ರದ ಕೊಡುಗೆ ಉತ್ತಮವಾಗಿತ್ತು. ಸ್ವಾತಂತ್ರ್ಯದ ನಂತರ ಆಹಾರ ಸ್ವಾವಲಂಬನೆ ಸಾಧಿಸುವ ನಿಟ್ಟಿನಲ್ಲಿ ಸಾಕಷ್ಟು ಕ್ರಮಗಳನ್ನು ಕೈಗೊಂಡಿದ್ದರು. ಆದರೆ ರೈತರ ಆದಾಯವನ್ನು ದ್ವಿಗುಣಗೊಳಿಸುವಲ್ಲಿ ವಿಫಲವಾಗಿದೆ.

ಈ ವಿಷಯಗಳನ್ನು ಮನಗಂಡು ಏಪ್ರಿಲ್ 2016 ರಂದು ವಿವಿಧ ಇಲಾಖೆಗಳ ತಜ್ಞರ ಸಮಿತಿಯನ್ನು ನೇಮಕ ಮಾಡಲಾಗಿತ್ತು ಸೆಪ್ಟೆಂಬರ್ 2018 ರಂದು ಈ ಸಮಿತಿಯು ತನ್ನ ವರದಿಯಲ್ಲಿ ಏಳು ವಿಚಾರಗಳನ್ನು ಶಿಫಾರಸ್ಸು ಮಾಡಲಾಗಿದೆ.

- ಬೆಳೆ ಉತ್ಪಾದನೆಯನ್ನು ಹೆಚ್ಚಿಸುವುದು
- ಕೃಷಿ ಪೂರಕ ವಲಯಗಳಾದ ಪಶು ಸಂಗೋಪನೆ , ತೋಟಗಾರಿಕೆ, ಮೀನುಗಾರಿಕೆ ,ಜೇನು ಸಾಕಾಣಿಕೆ, ಕೃಷಿ ಅರಣ್ಯ, ಕೃಷಿ ಪ್ರವಾಸೋದ್ಯಮಗಳಿಗೆ ಒತ್ತು ನೀಡುವುದು.
- ಕೃಷಿ ಉತ್ಪನ್ನಗಳನ್ನು ಉತ್ಪಾದನೆ ಮಾಡುವಾಗ ಖರ್ಚನ್ನು ಕಡಿಮೆಗೊಳಿಸುವುದು.
- ಕೃಷಿಯಲ್ಲಿ ವೈವಿಧ್ಯತೆಯನ್ನು ಅಳವಡಿಸಿಕೊಳ್ಳುವುದು.
- ಹೆಚ್ಚು ಆದಾಯ ತರುವ ಬೆಳೆಗಳನ್ನು ಬೆಳೆಯಲು ಪ್ರೋತ್ಸಾಹಿಸುವುದು.
- ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆಯನ್ನು ನೀಡುವುದು.
- ಕೃಷಿಯನ್ನು ವೃತ್ತಿಯಾಗಿ ಕೃಷಿಯೇತರ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವ್ಯಕ್ತಿಗಳು ಮತ್ತು ಸಂಸ್ಥೆಗಳು ಕೃಷಿಯಲ್ಲಿ ತೊಡಗಿಸಿಕೊಳ್ಳಲು ಕಾರ್ಯಕ್ರಮಗಳನ್ನು ರೂಪಿಸುವುದು.

# ಕೃಷಿ ಕ್ಷೇತ್ರದಲ್ಲಿ ಅದ್ಭುತ ಸಾಧನೆ



ಡಾ. ನವೀನ್ ಕುಮಾರ್ ಬಿ.ಸಿ.
ಕಾರ್ಯದರ್ಶಿ,
ಬಿಜೆಪಿ ರಾಜ್ಯ ರೈತ ಮೋರ್ಚಾ



ಕೃಷಿ ರಾಜ್ಯದ ವಿಷಯವಾಗಿರುವುದರಿಂದ ಕೇಂದ್ರ ಸರ್ಕಾರ ರಾಜ್ಯ ಸರ್ಕಾರಗಳಿಗೆ ಸಹಾಯವನ್ನು ನೀಡುವ ಮುಖಾಂತರ ರೈತರ ಆದಾಯವನ್ನು ದ್ವಿಗುಣಗೊಳಿಸುವಲ್ಲಿ ಸಾಕಷ್ಟು ಕ್ರಮಗಳನ್ನು ಮತ್ತು ಹಣಕಾಸು ವ್ಯವಸ್ಥೆಗಳನ್ನು ನೀಡುತ್ತಿದೆ, ಉನ್ನತ ಸಮಿತಿಯ ಸಲಹೆಯ ಮೇರೆಗೆ ಹೊಸ ನೀತಿಗಳನ್ನು ಮತ್ತು ಬದಲಾವಣೆಗಳನ್ನು ಮತ್ತು ಅಭಿವೃದ್ಧಿ ಕಾರ್ಯಕ್ರಮಗಳನ್ನು ವಿವಿಧ ಯೋಜನೆಗಳನ್ನು ನೀಡಿದೆ. 201516ರಲ್ಲಿ ಕೃಷಿ ಕೇಂದ್ರ ಕೃಷಿ ಮಂತ್ರಾಲಯವು 25460.51 ಕೋಟಿ ಹಣವನ್ನು ನೀಡಿತ್ತು. 2022 23ರಲ್ಲಿ 1ಕೋಟಿ 38 ಲಕ್ಷ ಹಣವನ್ನು ನೀಡಲಾಗಿದೆ. ಕಳೆದ 9 ವರ್ಷಗಳಲ್ಲಿ ಕೃಷಿ ಬಜೆಟ್ ಗಾಗಿ 5 ಪಟ್ಟು ಹೆಚ್ಚು ಹಣವನ್ನು ನೀಡಲಾಗಿದೆ. ಈ ಹಣದ ಮುಖಾಂತರ ಕೃಷಿ ಕ್ಷೇತ್ರದ ಬೆಳವಣಿಗೆಗೆ ಹೆಚ್ಚು ಪ್ರೋತ್ಸಾಹವನ್ನು ನೀಡಲಾಗಿದೆ.

ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ಯೋಜನೆ ಅಡಿಯಲ್ಲಿ 11.3 ಕೋಟಿ ರೈತ ಕುಟುಂಬಗಳಿಗೆ 2 ಲಕ್ಷ ಕೋಟಿ ಹಣವನ್ನು 2019 ರಿಂದ ನೀಡಲಾಗಿತ್ತು. ಈ ಹಣದ ಮುಖಾಂತರ ಕೃಷಿ ಕ್ಷೇತ್ರದ ಬೆಳವಣಿಗೆ ಹೆಚ್ಚು ಪ್ರೋತ್ಸಾಹ ನೀಡಲಾಗಿತ್ತು. ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದ 10 ಸಾವಿರ ಹಣವನ್ನು ವರ್ಷಕ್ಕೆ ನೀಡುವ ಮುಖಾಂತರ ಸಣ್ಣ ರೈತರನ್ನು ಸಾಲಗಾರರ ಕಪಿಮುಷ್ಠಿಯಿಂದ ತಪ್ಪಿಸಲು ಸಹಾಯವಾಗಿದೆ.

- ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆ ಅಡಿಯಲ್ಲಿ 2016 ರಿಂದ ಕಳೆದ ಆರು ವರ್ಷಗಳಲ್ಲಿ 38 ಕೋಟಿ ರೈತರ ನೋಂದಣಿ ಮಾಡಿಕೊಂಡಿದ್ದರು. ಅದರಲ್ಲಿ 12 ಕೋಟಿ ರೈತರು ಈ ಯೋಜನೆಯ ಫಲಾನುಭವಿಗಳಾಗಿದ್ದಾರೆ.25,185 ಕೋ.ರೂ. ಹಣವನ್ನು ರೈತರು 'ಪ್ರೀಮಿಯಂ' ರೂಪದಲ್ಲಿ ತುಂಬಿಸಿದ್ದರು ಅವರಿಗೆ 1,24,223ಕೋ.ರೂ. ನೀಡಲಾಗಿದೆ. ಪ್ರತಿ 100 ರೂ. ಪ್ರೀಮಿಯಂನಿಂದ ರೈತರು 493ರೂ. ಪಡೆದುಕೊಂಡಿದ್ದಾರೆ.
- ಕೃಷಿ ವಲಯಕ್ಕೆ 2015-16 ರಲ್ಲಿ 8.5 ಲಕ್ಷ ಕೋ.ರೂ. ನೀಡಲಾಗಿತ್ತು. 2023ರಲ್ಲಿ 18.5 ಲಕ್ಷ ಕೋ.ರೂ. ನೀಡಲಾಗಿದೆ. ಈ ಯೋಜನೆಯಿಂದ ರೈತರಿಗೆ ಸಾಲ ನೀಡುವ ವ್ಯವಸ್ಥೆಯಲ್ಲಿ 2 ಪಟ್ಟು ಬದಲಾವಣೆ ತಂದಿರುವುದರಿಂದ ರೈತರಿಗೆ ಬಂಡವಾಳ ಒದಗಿಸುವ ಮೂಲಕ ಕೃಷಿ ಕ್ಷೇತ್ರವನ್ನು ಉತ್ತೇಜಿಸಲಾಗಿದೆ.
- ಕಿಸಾನ್ ಕ್ರೆಡಿಟ್ ಕಾರ್ಡ್ ಸೌಲಭ್ಯವನ್ನು ಪಶುಸಂಗೋಪನೆ ಮತ್ತು ಮೀನುಗಾರಿಕೆ ಮಾಡುವ ರೈತರಿಗೆ ಈ ಸೌಲಭ್ಯವನ್ನು ವಿತರಿಸಲಾಗಿದೆ. ಫೆ. 2020 ರಿಂದ ನ. 2022 ರವರೆಗೆ ಕಿಸಾನ್ ಕಾರ್ಡ್ ವಿತರಿಸುವ ಆಂದೋಲನವನ್ನು ಹಮ್ಮಿಕೊಳ್ಳಲಾಗಿತ್ತು. 376.97 ಲಕ್ಷ ಹೊಸ ಕಿಸಾನ್ ಕ್ರೆಡಿಟ್ ಕಾರ್ಡ್‌ಗಳನ್ನು ನೀಡಲಾಗಿದೆ.ಕಿಸಾನ್ ಕಾರ್ಡ್ ಆಂದೋಲನವೂ ರೈತರಿಗೆ ಕಷ್ಟಕಾಲದಲ್ಲಿ ಆರ್ಥಿಕವಾಗಿ ನೀಡುವ ಮುಖಾಂತರ ಸಣ್ಣ ಹಿಡುವಳಿದಾರರು ಸಂಕಷ್ಟದಿ0ದ ಪಾರಾಗಿದ್ದಾರೆ.
- ಭಾರತದ ದೇಶದಲ್ಲಿ ಭತ್ತ ಮತ್ತು ಗೋಧಿ ಬೆಳೆಗಳನ್ನು ಹೆಚ್ಚು ಬೆಳೆಯಲಾಗುತ್ತಿದ್ದು, ಈ ಬೆಳೆಗಳನ್ನು ಬೆಳೆಯುವ ರೈತರಿಗೆ ಬೆಂಬಲ ಬೆಲೆಯನ್ನು ಶೇಕಡಾ 80 ರಷ್ಟು ಹೆಚ್ಚು ಘೋಷಿಸುವ ಮುಖಾಂತರ ಈ ಬೆಳೆಗಳ ಬೆಳವಣಿಗೆಗೆ ಹೆಚ್ಚು ಉತ್ತೇಜ ನೀಡಲಾಗಿದೆ. 2013-14 ರಲ್ಲಿ ಭತ್ತಕ್ಕೆ ಪ್ರತಿ ಕ್ವಿಂಟಲ್ಗೆ ರೂ.1310 ನೀಡಲಾಗುತ್ತಿತ್ತು. ಆದರೆ 2022-23 ರಲ್ಲಿ ರೂ.2040 ನಿಡಲಾಗುತ್ತಿದೆ. ಹಾಗೆ ಗೋಽ ಗೆ 201314ರಲ್ಲಿ ಪ್ರತಿ ಕ್ವಿಂಟಲ್ಗೆ ರೂ.1400 ಬೆಂಬಲ ಬೆಲೆ ನೀಡಲಾಗುತ್ತಿತ್ತು, ಈಗ 2022-23 ರಲ್ಲಿ ರೂ. 2125 ಗಳನ್ನು ನೀಡಲಾಗುತ್ತಿದೆ.
- ದೇಶದ ಮಣ್ಣು ಮತ್ತು ನೀರಿನ ಆರೋಗ್ಯವನ್ನು ಗಮನದಲ್ಲಿಟ್ಟು 201516 ರಲ್ಲಿ ಪಾರಂಪರಿಕ ಕೃಷಿ ವಿಕಾಸ ಯೋಜನೆಯ ಮುಖಾಂತರ 32,384 ಬ್ಲಾಕ್ ಗಳನ್ನು ಮಾಡಿ 6.53 ಲಕ್ಷ ಹೆಕ್ಟೇರ್ ಭೂಮಿಯನ್ನು ಸಹಜ ಕೃಷಿಗೆ ಪರಿವರ್ತಿಸಲಾಗಿದೆ. ಇದರಿಂದ 16.19 ಲಕ್ಷ ಕೃಷಿಕರಿಗೆ ಸಹಾಯವಾಗಿದೆ. ಭಾರತೀಯ ಪ್ರಾಕೃತಿಕ ಕೃಷಿ ಪದ್ಧತಿಯ ಮುಖಾಂತರ ಕೃಷಿ ವೆಚ್ಚವನ್ನು ಕಡಿಮೆ ಮಾಡಿ ರೈತರ ಆದಾಯವನ್ನು ದ್ವಿಗುಣಗೊಳಿಸುವುದು, ನೈಸರ್ಗಿಕ ಸಂಪನ್ಮೂಲವನ್ನು ಸಮರ್ಪಕವಾಗಿ ಬಳಸಿಕೊಂಡು ಉತ್ತಮ ಮತ್ತು ಆರೋಗ್ಯವಂತ ಮಣ್ಣು ನೀರು ಮತ್ತು ವಾತಾವರಣವನ್ನು ನಿರ್ಮಿಸಲು ಮತ್ತು ಉತ್ತಮ ಆರೋಗ್ಯ ಪೂರ್ಣ ಆಹಾರವನ್ನು ಉತ್ಪಾದಿಸಲು ಪ್ರಯತ್ನಿಸಲಾಗಿದೆ.
- 2015-16 ರಲ್ಲಿ 'ಪ್ರತಿಹನಿಗೆ ಹೆಚ್ಚು ಬೆಳೆ' ಕಾರ್ಯಕ್ರಮದಡಿ ನೀರನ್ನು ಸಮರ್ಪಕ ಬಳಕೆಯಿಂದ ಖರ್ಚನ್ನು ಕಡಿಮೆಗೊಳಿಸಿ ಉತ್ಪಾದನೆ ಹೆಚ್ಚಿಸಲು ಹನಿ ನೀರಾವರಿ ವ್ಯವಸ್ಥೆಯನ್ನು ರೂಪಿಸಲಾಗಿದೆ. 2015-16 ರಿಂದ 69.55 ಲಕ್ಷ ಹೆಕ್ಟರ್ ಭೂಮಿಯನ್ನು ಈ ವ್ಯವಸ್ಥೆಗೆ ಒಳಪಡಿಸಲಾಗಿದೆ. ನೀರಿನ ಸಮರ್ಪಕ ಬಳಕೆಯಿಂದ ಕೃಷಿ ಉತ್ಪಾದನೆಯನ್ನು ಹೆಚ್ಚಿಸಿ ಮಣ್ಣಿನ ಸವಕಳಿಯನ್ನು ತಡೆಯಲಾಗಿದೆ.
- ರೈತರನ್ನು ಉದ್ಯೋಗದಾತರು ಮತ್ತು ಉದ್ಯಮಿಪತಿಗಳನ್ನಾಗಿ ರೂಪಿಸಲು 10,000 ರೈತ ಉತ್ಪಾದಕರ ಸಂಸ್ಥೆಗಳನ್ನು ಪ್ರಾರಂಭಿಸಲು ಫೆಬ್ರವರಿ 2020 ರಲ್ಲಿ 6,865 ಕೋ.ರೂ. ಹಣವನ್ನು ನೀಡಲಾಗಿದೆ. ಈ ಹಣವನ್ನು 202728ರ ವರೆಗೆ ಖರ್ಚು ಮಾಡಬಹುದಾಗಿದೆ. 31.10.2022ರ ವರೆಗೆ 3,855 DPL ಗಳನ್ನು



# ಕೃಷಿ ಕ್ಷೇತ್ರದಲ್ಲಿ ತಂತ್ರಜ್ಞಾನ

- 2014-15 ರಿಂದ ಮಾರ್ಚ್ 2022 ರವರಿಗೆ 5490. 82 ಕೋ.ರೂ. ಹಣವನ್ನು ಕೃಷಿಯಲ್ಲಿ ಯಾಂತ್ರಿಕರಣಗೊಳಿಸಲು ಬಳಸಲಾಗಿದೆ. 1388314 ರಷ್ಟು ಯಂತ್ರಗಳನ್ನು ಮತ್ತು ಕೃಷಿ ಉಪಕರಣಗಳನ್ನು ರೈತರಿಗೆ ಸಬ್ಸಿಡಿ ರೂಪದಲ್ಲಿ ನೀಡಲಾಗಿದೆ. 18,824 ಕೃಷಿ ಯಂತ್ರಗಳು ಬಾಡಿಗೆ ಕೇಂದ್ರ ಮತ್ತು 403 ಅತ್ಯುತ್ತಮ ತಂತ್ರಜ್ಞಾನವುಳ್ಳ ಕೇಂದ್ರ 16791 ಕೃಷಿ ಯಂತ್ರಗಳ ಬ್ಯಾಂಕನ್ನು ಪ್ರಾರಂಭಿಸಲಾಗಿದೆ.
- 2022-23 ರಲ್ಲಿ 504.43 ಕೊ.ರೂ. ಹಣವನ್ನು 65,3020 ಯಂತ್ರಗಳನ್ನು ಸಬ್ಸಿಡಿ ರೂಪದಲ್ಲಿ ನೀಡಲಾಗಿದೆ. 2804 ಕೃಷಿ ಯಂತ್ರಗಳು ಬಾಡಿಗೆ ಕೇಂದ್ರ .12 ಅತ್ಯುತ್ತಮ ತಂತ್ರಜ್ಞಾನವುಳ್ಳ ಕೇಂದ್ರ , 1260 ಗ್ರಾಮೀಣ ಆಡಳಿತ ಕೃಷಿ ಯಂತ್ರಗಳ ಬ್ಯಾಂಕ್ಗಳನ್ನು ಪ್ರಾರಂಭಿಸಲಾಗಿದೆ.ಕೃಷಿ ವಲಯದಲ್ಲಿ ಕೃಷಿಕಾರ್ಮಿಕರ ಸಮಸ್ಯೆಯೂ ಅತ್ಯಂತನಿಚ್ಚಳವಾಗಿದ್ದು, ಈ ಸಮಸ್ಯೆಯನ್ನು ಬಗೆಹರಿಸಲು ಕೇಂದ್ರ ಸರ್ಕಾರವೂ ತಂತ್ರಜ್ಞಾನ ಮತ್ತು ವಿಜ್ಞಾನದ ಮುಖಾಂತರ ಹೊಸ ಇತಿಹಾಸವನ್ನು ನಿರ್ಮಾಣಮಾಡಿದೆ.
- ಮಣ್ಣಿನ ಆರೋಗ್ಯದ ಬಗ್ಗೆ ವಿಶೇಷ ಕಾಳಜಿಯನ್ನು ಹೊಂದಿರುವ ಕೇಂದ್ರ ಸರ್ಕಾರ ಮಣ್ಣಿನ ಆರೋಗ್ಯಕಾರ್ಡ್ ಗಳನ್ನು 2015 ರಿಂದ 2017ರ ವರೆಗೆ 10.74 ಕೋಟಿ ಮತ್ತು 2017ರಿಂದ 2019ರ ವರೆಗೆ 11.97 ಕೋಟಿ ಕಾರ್ಡ್ ಗಳನ್ನು ನೀಡಲಾಗಿದೆ. ಮಾದರಿ ಗ್ರಾಮ ಎಂಬ ವಿಶೇಷ ಕಾರ್ಯಕ್ರಮದ ಅಡಿಯಲ್ಲಿ 2019-20 ರಲ್ಲಿ 19.64 ಲಕ್ಷ ಕಾರ್ಡ್ ಗಳನ್ನು ನೀಡಲಾಗಿದೆ. ಅನಾವಶ್ಯಕವಾಗಿ ರಸಗೊಬ್ಬರವನ್ನು ಮಣ್ಣಿಗೆ ನೀಡಿ ಮಣ್ಣಿನ ಆರೋಗ್ಯವನ್ನು ಹಾಳು ಮಾಡುತ್ತಿದ್ದರು. ವೈಜ್ಞಾನಿಕ ರೀತಿಯಲ್ಲಿ ಮಣ್ಣಿನ ಆರೋಗ್ಯವನ್ನು ಕಾಪಾಡುವ ಮುಖಾಂತರ ರೈತರ ಖರ್ಚನ್ನು ಕಡಿಮೆಗೊಳಿಸಲಾಗಿದೆ.
- ರೈತರು ಕೃಷಿ ಮಾಡುವಾಗ ಕೃಷಿಯಲ್ಲಿನ ಅಂತಿಮ ಘಟ್ಟವಾದ ಕೃಷಿ ಮಾರುಕಟ್ಟೆ ವ್ಯವಸ್ಥೆಯನ್ನು ಸರಳೀಕರಣಗೊಳಿಸಲು ರೈತರಿಗೆ ಅನಾವಶ್ಯಕವಾಗಿ ತಗಲುವ ಖರ್ಚು ವೆಚ್ಚಗಳನ್ನು ಮತ್ತು ಶೋಷಣೆಯನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ರಾಷ್ಟ್ರೀಯ ಕೃಷಿ ಮಾರುಕಟ್ಟೆಗಳನ್ನು ಬೆಸೆಯುವ ಕಾರ್ಯಕ್ರಮಗಳಾಗಿದೆ. ಈ ಕಾರ್ಯಕ್ರಮದಲ್ಲಿ 22 ರಾಜ್ಯಗಳಲ್ಲಿ 1,260 ಮಂಡಿಗಳನ್ನು ಮತ್ತು ಮೂರು ಕೇಂದ್ರ ಆಡಳಿತದಲ್ಲಿರುವ ಮಾರುಕಟ್ಟೆಗಳನ್ನು ಸೇರಿಸುವ ಮುಖಾಂತರ ರೈತ ದೇಶದ ಯಾವ ಮೂಲೆಯಲ್ಲಿದ್ದರೂ ತಾನು ಬೆಳೆದ ಕೃಷಿ ಉತ್ಪನ್ನಗಳನ್ನು ಮಧ್ಯವರ್ತಿಗಳಿಂದ ಶೋಷಣೆಗೆ ಒಳಗಾಗದೆ ಗ್ರಾಹಕರನ್ನು ಮತ್ತು ವ್ಯಾಪಾರಸ್ಥರನ್ನು ತಲುಪುವ ಕಾರ್ಯಕ್ರಮ ಇದಾಗಿದೆ. 1.74 ಕೋಟಿ ರೈತರು ಮತ್ತು 2.36 ಲಕ್ಷ ವ್ಯಾಪಾರಸ್ಥರು ಈ ವ್ಯವಸ್ಥೆಯಲ್ಲಿ ನೋಂದಾಯಿಸಿಕೊಂಡಿದ್ದಾರೆ. 31.10.2022 ವರೆಗೆ 2.2 ಲಕ್ಷ ಕೋಟಿಯಷ್ಟು ಕೃಷಿ ಉತ್ಪನ್ನಗಳ ವಹಿವಾಟು ನಡೆದಿದೆ.
- ಕೃಷಿ ಮೂಲ ಸೌಕರ್ಯ ಅಭಿವೃದ್ಧಿಗೆ 13681 ಕೋಟಿ ಹಣವನ್ನು ನೀಡಿದೆ, 18,133 ಯೋಜನೆಗಳಿಗೆ ಖರ್ಚು ಮಾಡಲಾಗಿದೆ. ಉದಾ : 8076 ದಾಸ್ತಾನು ,ದಾಸ್ತಾನು ಘಟಕಗಳು 2788 ಪ್ರಾಥಮಿಕ ಸಂಸ್ಕರಣ ಘಟಕಗಳು, 1860 ಕೃಷಿ ಯಂತ್ರಗಳು ಬಾಡಿಗೆ ಕೇಂದ್ರ , 937 ವರ್ಗೀಕರಣ ಮತ್ತು ಮೌಲ್ಯ ಮಾಪನ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ. ಕೃಷಿ ಉತ್ಪನ್ನಗಳನ್ನು ವೈಜ್ಞಾನಿಕವಾಗಿ ನಿರ್ವಹಣೆ ಮಾಡಲು ಕೊಯ್ಲು ತರ ನಿರ್ವಹಣಾ ಘಟಕಗಳನ್ನು ಪ್ರಾರಂಭಿಸಲಾಗಿದೆ.




## ಕಿಸಾನ್ ರೈಲ್ ಕಾರ್ಯಕ್ರಮ

- ದೇಶದ ವಿವಿಧ ಮೂಲೆಗಳಲ್ಲಿ ಕೇಡಾಗುವಂತಹ ತೋಟಗಾರಿಕಾ ಮತ್ತು ಕೃಷಿ ಉತ್ಪನ್ನಗಳನ್ನು ಉತ್ತರದಿಂದ ದಕ್ಷಿಣಕ್ಕೆ ಪೂರ್ವದಿಂದ ಪಶ್ಚಿಮಕ್ಕೆ ಕೃಷಿಕರಿಂದ ಗ್ರಾಹಕರಿಗೆ ಕೃಷಿ ಉತ್ಪನ್ನಗಳನ್ನು ತಲುಪಿಸಲು ವಿಶೇಷ ಯೋಜನೆ ಆಗಿದ್ದು, ರೈತರಿಗೆ ಬಹಳಷ್ಟು ಸಹಾಯವಾಗಿದೆ. ಜುಲೈ 2020 ರಿಂದ ಅಕ್ಟೋಬರ್ 2022 ರವರೆಗೆ 2,359 ಸೇವೆಗಳನ್ನು 167 ರೂಟ್ ಗಳನ್ನು ನಿರ್ವಹಣೆ ಮಾಡಲಾಗಿದೆ.
- ರೈತರು ತಾವು ಬೆಳೆಯುವ ಬೆಳೆಯನ್ನು ಬೀಜದಿಂದ ಬಜಾರ್ ವರೆಗೆ ವೈಜ್ಞಾನಿಕವಾಗಿ ನಿರ್ವಾಹಣೆಮಾಡಲು ವಿಫಲರಾಗಿದ್ದರು, ಈ ವಿಫಲತೆಯಿಂದ ರೈತರ ಆದಾಯವೂ ಕಡಿಮೆ ಆಗಿತ್ತು, ಈ ಸಮಸ್ಯೆಗೆ ಪರಿಹಾರ ರೂಪಿಸಲು ಸಮಗ್ರ ಅಭಿವೃದ್ಧಿ ತೋಟಗಾರಿಕಾ ಮಿಷನ್ ಮುಖಾಂತರ ಗೊಂಚಲು ಆಧಾರಿತ ಯೋಜನೆಯನ್ನು







ರೂಪಿಸಲಾಗಿತ್ತು, ಕೃಷಿ ಉತ್ಪಾದನ ಪೂರ್ವ ಮತ್ತು ಕೃಷಿ ಉತ್ಪಾದನಾ ನಂತರ ಮತ್ತು ದಾಸ್ತಾನು, ಬ್ರಾಂಡಿ0ಗ್ ಮತ್ತು ಮಾರುಕಟ್ಟೆ ಆಧಾರಿತ ಯೋಜನೆಗಳನ್ನು ರೂಪಿಸಲಾಗಿದೆ.

- ಕೃಷಿ ವಲಯ ಮತ್ತು ಕೃಷಿ ಪೂರಕ ವಲಯಗಳಾದ ಪಶು ಸಂಗೋಪನೆ ಮತ್ತು ಮೀನುಗಾರಿಕೆ ಜೇನು ಸಾಕಾಣಿಕೆ ಕೃಷಿ ಅರಣ್ಯ ಯೋಜನೆಗಳಿಗೆ ತಂತ್ರಜ್ಞಾನದ (ನವೋದ್ಯಮಗಳು) ಸ್ಪರ್ಶವನ್ನು ನೀಡಲಾಗಿದೆ.
- ಕೃಷಿ ರಫ್ತು 201516ರಲ್ಲಿ 32.81 ಯುಎಸ್ ಡಾಲರ್ ನಷ್ಟು ಇತ್ತು. ಅದು 2022 21 ರಲ್ಲಿ 50.24 ಬಿಲಿಯನ್ ಯುಎಸ್ ಡಾಲರ್ ರಷ್ಟು ಆಗಿದೆ. ಶೇಕಡ 53.1 ರಷ್ಟು ಹೆಚ್ಚಳವಾಗಿದೆ. ಕೃಷಿ ಮೂಲ ಸೌಕರ್ಯ ಅಭಿವೃದ್ಧಿಗೆ 1 ಲಕ್ಷ ಕೋಟಿ ಹಣವನ್ನು ನೀಡುವ ಮುಖಾಂತರ ಆಮದನ್ನು ಕಡಿಮೆಮಾಡಿ ರಫ್ತನ್ನು ಹೆಚ್ಚು ಉತ್ತೇಜಿಸಿ ದೇಶದಲ್ಲಿ ಆತ್ಮ ನಿರ್ಭರತೆಯನ್ನು ಸಾಽಸಲಾಗಿದೆ.
- ಕೃಷಿ ಆಧರಿತ ಆದಾಯದಿಂದ ಪ್ರತಿ ರೈತ ಕುಟುಂಬಗಳಿಗೆ 2012 13 ರಲ್ಲಿ 6,426ರೂ ಇತ್ತು. ಕೇಂದ್ರ ಸರ್ಕಾರದ ರೈತ ಪರ ಯೋಚನೆ ಮತ್ತು ಯೋಜನೆಗಳಿಂದ 201819 ರಲ್ಲಿ 10,218 ಆಗಿದೆ. ಈ ವಿಷಯದಿಂದ ರೈತರ ಆದಾಯದಲ್ಲಿ ಶೇಕಡ 40 ರಷ್ಟು ಬೆಳವಣಿಗೆಯನ್ನು ನಾವು ಕಾಣಬಹುದಾಗಿದೆ.
- ದೇಶದ ಅಡುಗೆ ಎಣ್ಣೆಯ ಆಮದನ್ನು ಕಡಿತಗೊಳಿಸಲು ಖಾದ್ಯ ತೈಲ ಉದ್ಯಮಕ್ಕಾಗಿ ರಾಷ್ಟ್ರೀಯ ಮಿಷನ್ ಪ್ರಾರಂಭಿಸಲಾಗಿದೆ. 11.04 ಕೋಟಿಹಣವನ್ನು ಖರ್ಚುಮಾಡಿ 6.5 ಲಕ್ಷ ಹೆಕ್ಟೇರ್ ಭೂಮಿಯನ್ನು ತಾಳೆ ಎಣ್ಣೆ ತೋಟಗಳನ್ನಾಗಿ ಅಭಿವೃದ್ಧಿಪಡಿಸಲಾಗಿದೆ

ಪ್ರಧಾನಿ ಶ್ರೀ ನರೇಂದ್ರ ಮೋದಿ ಅವರ ನೇತೃತ್ವದ ಸರ್ಕಾರದಲ್ಲಿ ಕಳೆದ 9 ವರ್ಷಗಳಲ್ಲಿ ಕೃಷಿ ಕ್ಷೇತ್ರದಲ್ಲಿರುವ ಎಲ್ಲಾ ರೀತಿಯ ನ್ಯೂನತೆಗಳನ್ನು ಸರಿಪಡಿಸಲು ಸಾಕಷ್ಟು ಯೋಜನೆ ಹಾಗೂ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ಜೊತೆಗೆ ರೈತರ ಖರ್ಚನ್ನು ಕಡಿಮೆಗೊಳಿಸಿ ರೈತರ ಆದಾಯವನ್ನು ದ್ವಿಗುಣಗೊಳಿಸಿ ಕೃಷಿ ಕ್ಷೇತ್ರದಲ್ಲಿ ತಂತ್ರಜ್ಞಾನ ಮತ್ತು ವಿಜ್ಞಾನವನ್ನು ಅಳವಡಿಸಿ ಕೃಷಿಗೆ ಉದ್ಯಮ ರೂಪವನ್ನು ನೀಡಿ, ಕೃಷಿಕರನ್ನು ಉದ್ಯೋಗದಾತರನ್ನಾಗಿ ಮಾಡಿ, ಕೃಷಿ ಉತ್ಪನ್ನಗಳ ಮಾರುಕಟ್ಟೆಯಲ್ಲಿರುವ ಶೋಷಣೆಗಳನ್ನು ಕಡಿಮೆಗೊಳಿಸಿ ಕೃಷಿ ಉತ್ಪನ್ನಗಳ ಮೌಲ್ಯವರ್ಧನೆಗೆ ಹೆಚ್ಚು ಒತ್ತು ನೀಡಿ, ರೈತರ ಸಂಕಷ್ಟಗಳಿಗೆ ಹೃದಯವಂತಿಕೆಯಿಅದ ಸ್ಪಂದಿಸಿ, ರಾಜಕೀಯ ರಹಿತವಾಗಿ ಆಲೋಚಿಸಿ, ಯೋಜನೆಗಳನ್ನು ರೂಪಿಸಿರುವುದನ್ನು ಕಳೆದ 9 ವರ್ಷಗಳಲ್ಲಿ ಕೇಂದ್ರ ಸರ್ಕಾರ ಸಾಧಿಸಿದೆ.

ಈ ಎಲ್ಲಾ ರೈತ ಸ್ನೇಹಿ ಕಾರ್ಯಕ್ರಮಗಳು ರೈತರ ಆತ್ಮ ವಿಶ್ವಾಸವನ್ನು ಇಮ್ಮಡಿಗೊಳಿಸಿ ರೈತರ ಆದಾಯವನ್ನು ದ್ವಿಗುಣಗೊಳಿಸಿರುವುದನ್ನು ಕಾಣಬಹುದಾಗಿದೆ. ಈ ಹೃದಯವಂತ ಕೆಲಸದ ಬಗ್ಗೆ ಪ್ರತಿಯೊಬ್ಬ ಬಿಜೆಪಿ ಕಾರ್ಯಕರ್ತನು ಹೆಮ್ಮೆ ಪಡಬೇಕಾಗಿದೆ.






## ಬುಡಕಟ್ಟು ವ್ಯಕ್ತಿ ದಶಮತ್ ರಾವತ್ ಅವರನ್ನು ಮುಖ್ಯಮಂತ್ರಿ ನಿವಾಸಕ್ಕೆ ಕರೆದುಕೊಂಡು ಬಂದು ಪಾದವನ್ನು ತೊಳೆದು ಕ್ಷಮೆ ಯಾಚಿಸಿದ

## ಮುಖ್ಯಮಂತ್ರಿ ಶ್ರೀ ಶಿವರಾಜ್ ಸಿಂಗ್ ಚೌಹಾಣ್

ಭೋಪಾಲ್ ಮಧ್ಯಪ್ರದೇಶದ ಸಿದ್ದಿ ಜಿಲ್ಲೆಯಲ್ಲಿ ಇಡೀ ನಾಗರಿಕ ಸಮಾಜವೇ ತಲೆ ತಗ್ಗಿಸುವಂತಹ ವಿಡಿಯೋವೊಂದು ವೈರಲ್ ಆಗಿತ್ತು. ಬುಡಕಟ್ಟು ವ್ಯಕ್ತಿಯೊಬ್ಬರ ಮೇಲೆ ದುರುಳನೊಬ್ಬ ಮೂತ್ರ ವಿಸರ್ಜನೆ ಮಾಡಿರುವ ಘಟನೆಗೆ ಸಾರ್ವಜನಿಕ ವಲಯದಲ್ಲಿ ತೀವ್ರ ಆಕ್ರೋಶ ವ್ಯಕ್ತವಾಗಿತ್ತು ಮುಖ್ಯಮಂತ್ರಿಗಳಾದ ಶ್ರೀ ಶಿವರಾಜ್‌ಸಿಂಗ್ ಚೌಹಾಣ್ ಅವರು ಮೂತ್ರ ವಿಸರ್ಜನೆ ಮಾಡಲಾಗಿದ್ದ ಬುಡಕಟ್ಟು ವ್ಯಕ್ತಿ ದಶಮತ್ ರಾವತ್ ಅವರನ್ನು ಮುಖ್ಯಮಂತ್ರಿ ನಿವಾಸಕ್ಕೆ ಕರೆದುಕೊಂಡು ಬಂದು ಪಾದವನ್ನು ತೊಳೆದು ಈ ಘಟನೆಗೆ ಕ್ಷಮೆ ಯಾಚಿಸಿದ್ದಾರೆ.




## ಸುರಿಯುವ ಮಳೆಯಲ್ಲಿಯೇ ಸಾಧಕಿ ಮಹಿಳೆಯ ಭಾಷಣ.....

**ನೆಚ್ಚಿನ ನಾಯಕಿಯ ಭಾಷಣವನ್ನು ಬಿಟ್ಟು ಹೋಗಲು ಅಭಿಮಾನಿಗಳಿಗೂ ಮನಸ್ಸಿಲ್ಲ... ವರುಣನಿಗೂ ಮನಸ್ಸಿಲ್ಲ...**



# ಸಿದ್ದೇಶ್ ಯಾದವ್

# ಕಾರ್ಯಕರ್ತನ ನಾಯಕನಿಗೆ ಅಕ್ಷರತರ್ಪಣ...



ಅದು ಬಸಪ್ಪನ ಮಾಳಿಗೆ. ಚಿತ್ರದುರ್ಗ–ಹಿರಿಯೂರು ನಡುವಿನ ಗಡಿಯಂಚಿನ ಗ್ರಾಮ. ಎಲ್ಲಿಯ ಬಸಪ್ಪನ ಮಾಳಿಗೆ ? ಎಲ್ಲಿಯ ಕುಷ್ಟಗಿ ? ಸಿದ್ದೇಶ್ ಯಾದವ್ ಇನ್ನಿಲ್ಲ ಎಂಬ ಸುದ್ದಿ ತಿಳಿದು ದೂರದ ಕೊಪ್ಪಳ ಜಿಲ್ಲೆಯ ಕುಷ್ಟಗಿಯ ಕಾರ್ಯಕರ್ತರು ಸುರಿಯುವ ಮಳೆಯಲ್ಲೂ ಊರ ಕೇಂದ್ರ ವೃತ್ತದಲ್ಲಿ ಶ್ರದ್ಧಾಂಜಲಿ ಸಲ್ಲಿಸಿದರು.

ಬಸಪ್ಪನ ಮಾಳಿಗೆ ಗ್ರಾಮದಲ್ಲಿ ಸಣ್ಣ ಈರಣ್ಣ – ಚಿಕ್ಕವ್ವ ದಂಪತಿಗಳ ಒಂದು ಸಣ್ಣ ಕುಟುಂಬ. ಚಿಕ್ಕದೊಂದು ಚಿಲ್ಲರೆ ಅಂಗಡಿ, ಸಣ್ಣ ಹಿಡುವಳಿಯ ಒಣಭೂಮಿ, ಮಣ್ಣಿನ ಮನೆ. ತಮ್ಮ ಚಿದಾನಂದ, ತಂಗಿಯರಾದ ರಾಧಮ್ಮ, ಸಿದ್ದಗಂಗಮ್ಮನವರಿಗೆ ಸಿದ್ದೇಶ್ ಹಿರಿಯಣ್ಣ. ಕಾಲೇಜು ಓದಲು ಚಿತ್ರದುರ್ಗಕ್ಕೆ ಬಂದ ಸಿದ್ದೇಶ್ ಆರೆಸ್ಸೆಸ್, ಎಬಿವಿಪಿ ತೆಕ್ಕೆಗೆ ಬಿದ್ದರು. ಇದು 1990 ರ ದಶಕದ ಮಾತು. ಆ ನಂತರದ ಮೂರು ದಶಕ ಸಿದ್ದೇಶ್ ಅವರದ್ದು ಎಣೆಯಿಲ್ಲದ ಸಕ್ರಿಯತೆ. ಓದುವಾಗಲೇ ಚಿತ್ರದುರ್ಗದ ಎಬಿವಿಪಿ ನಗರ ಕಾರ್ಯದರ್ಶಿ. ಬಿಎ ಮುಗಿಯುತ್ತಿದ್ದಂತೆಯೇ ಶಿವಮೊಗ್ಗದಲ್ಲಿ ವಿಸ್ತಾರಕ್, ನಗರ ಸಂಘಟನಾ ಕಾರ್ಯದರ್ಶಿ, ವಾಪಸ್ ಚಿತ್ರದುರ್ಗಕ್ಕೆ. ರಾಜ್ಯಶಾಸ್ತ್ರದಲ್ಲಿ ಎಂ.ಎ ಗೆ ನೊಂದಣಿ. ಎಂ.ಎ. ಮುಗಿದ ನಂತರ ಸಿದ್ದೇಶ್ ರಾಜ್ಯಶಾಸ್ತ್ರದ ವಿದ್ಯಾರ್ಥಿಗಳಿಗೊಂದು ಪುಸ್ತಕ ಬರೆದ ನೆನಪು. ಚಿತ್ರದುರ್ಗದ ಎಬಿವಿಪಿ ಘಟಕಕ್ಕೆ ರಾಜ್ಯದಲ್ಲೇ ಹೆಸರು. ವಿಷ್ಣುಕಾಂತ್, ರಾಜೀವಲೋಚನ್ ಇಬ್ಬರು ಮೇಷ್ಟ್ರುಗಳ ನಿಗಾವಣೆ. ಹಲವು ಬಗೆಯ ಚಟುವಟಿಕೆಗಳು, ಹೋರಾಟಗಳು. ಸಿದ್ದೇಶ್ ಎಬಿವಿಪಿಯ ಜಿಲ್ಲಾ ಪ್ರಮುಖರಾದರು. ಚಿತ್ರಲಿಂಗಪ್ಪ, ಡಿ.ಆರ್. ತಿಪ್ಪೇಸ್ವಾಮಿ, ಮಲ್ಲಿಕಾರ್ಜುನ್ (ವಕೀಲರು), ಟಿ.ವಿ.ಎಸ್. ವೆಂಕಟೇಶ್, ಹಿರಿಯೂರು ರಾಘು, ಶ್ರೀದೇವಿ , ಚೈತ್ರಾ, ಮಂಜುಳ ... ಹೀಗೆ ಕಾರ್ಯಕರ್ತರ ದೊಡ್ಡ ದಂಡು .

2004 ರಲ್ಲಿರಬೇಕು ಸಿದ್ದೇಶ್ ಬಿಜೆಪಿಗೆ ಹೊರಳಿದರು. 2008–09 ರಲ್ಲಿ ಬಿಜೆಪಿಯ ಜಿಲ್ಲಾಧ್ಯಕ್ಷರಾದರು. ಆನಂತರ ಒಬಿಸಿ ಮೋರ್ಚಾದ ರಾಜ್ಯ ಪ್ರಧಾನ ಕಾರ್ಯದರ್ಶಿ, ರಾಜ್ಯ ಉಪಾಧ್ಯಕ್ಷ, ಸ್ಲಮ್ ಮೋರ್ಚಾದಲ್ಲಿ ರಾಜ್ಯ ಪ್ರಧಾನ ಕಾರ್ಯದರ್ಶಿ. ಸ್ಲಮ್‌ಗಳ ಸರ್ವೇಕ್ಷಣೆ ಮಾಡಿ ಚಿತ್ರಸಹಿತ ವರದಿ ಪುಸ್ತಕ ತಂದು ಸರ್ಕಾರದ ಕಣ್ಣು, ಕಿವಿ ತೆರೆಸಿದವರು ಸಿದ್ದೇಶ್.

**ವಾದಿರಾಜ್ ಸಾಮರಸ್ಯ**


2011 ರಲ್ಲಿ ಪೇಜಾವರ ಶ್ರೀಗಳ ಸಾಮರಸ್ಯ ಪಾದಯಾತ್ರೆ ಸಿದ್ದೇಶ್ ಅವರ ಸ್ವಗ್ರಾಮ ಬಸಪ್ಪನ ಮಾಳಿಗೆಯಲ್ಲಿ. ಎಸ್ಸೆಸ್ಸೆಲ್ಸಿ, ಪಿಯೂಸಿಯಲ್ಲಿ ಒಳ್ಳೆಯ ಅಂಕ ಪಡೆದ ಇಬ್ಬರು ವಿದ್ಯಾರ್ಥಿಗಳ ಮನೆಗೆ ಮತ್ತು ತುಂಬಾ ಕಷ್ಟದಲ್ಲಿರುವ ಎರಡು ಮನೆಗಳಿಗೆ ಸ್ವಾಮೀಜಿಯವರೇ ಖುದ್ದು ಭೇಟಿ. ಸ್ವಾಮೀಜಿ ಗುಡಿಸಲಿನ ಪುಟ್ಟ ಮನೆಗೆ ಬಂದು ಹೃದಯ ಸಂಬಂಧಿ ಖಾಯಿಲೆಯಿಂದ ಬಳಲುತ್ತಿದ್ದ ವೃದ್ಧರನ್ನು ಮೈದಡವಿ ಮಾತನಾಡಿಸಿ, ಬೆಂಗಳೂರಿನ ನಾರಾಯಣ ಹೃದಯಾಲಯದ ಡಾ. ದೇವಿಶೆಟ್ಟಿಗೆ ದೂರವಾಣಿಯಲ್ಲಿ ಮಾತನಾಡಿ ಚಿಕಿತ್ಸೆ ಉಚಿತವಾಗಬೇಕೆಂದು ಹೇಳಿ, ಆ್ಯಂಬುಲೆನ್ಸ್ ಖರ್ಚುಕೊಟ್ಟು ಬೆಂಗಳೂರಿಗೆ ಆ ವೃದ್ಧರನ್ನು ಕಳುಹಿಸುವಂತೆ ಮಾಡಿದರು. ವೈದ್ಯರ ಕೈಗುಣ, ಸ್ವಾಮೀಜಿಯವರ ನಿಸ್ಪೃಹ ನೆರವು ಹೃದಯ ರೋಗಿಯನ್ನು ಉಳಿಸಿತ್ತು.

ಕೆಲ ವರ್ಷಗಳ ಹಿಂದೆ ಸಿದ್ದೇಶ್ 'ಅಂತ್ಯೋದಯ' ಸಮಾಜ ಸೇವಾ ಟ್ರಸ್ಟ್ ಸ್ಥಾಪಿಸಿ ಕಾಡುಗೊಲ್ಲರೂ ಸೇರಿದಂತೆ ತಳವರ್ಗಗಳ ವಿದ್ಯಾರ್ಥಿ, ಯುವಕರಿಗಾಗಿ ಕಾರ್ಯಚಟುವಟಿಕೆ ಮಾಡುತ್ತಿದ್ದರು. ಸಿದ್ದೇಶ್ ಸಿಕ್ಕಾಗಲೆಲ್ಲ ಕಾಡುಗೊಲ್ಲರ ಎಸ್ಟಿ ಮೀಸಲಾತಿಯ ಪ್ರಸ್ತಾಪವಿಲ್ಲದೆ ಮಾತು ಮುಗಿಯುತ್ತಿರಲಿಲ್ಲ. 2013 ರಲ್ಲಿ ಹಿರಿಯೂರಿನಿಂದ ವಿಧಾನಸಭೆಗೆ ಸ್ಪರ್ಧಿಸಿ,ಸೋತಿದ್ದು ಸಿದ್ದೇಶ್ ಪಾಲಿಗೆ ಕಹಿ ನೆನಪು. ರಾಜಕೀಯದ ಏಳುಬೀಳುಗಳು ಸಿದ್ದೇಶ್ ಅವರನ್ನು ವಿಚಲಿತರನ್ನಾಗಿಸುತ್ತಿರಲಿಲ್ಲ. ಇತ್ತೀಚಿಗೆ ಅವರಿಗೆ ಬಳ್ಳಾರಿ ವಿಭಾಗದ ನೊಗ ಹೊರುವ ಜವಾಬ್ದಾರಿ. ಅವರದು ನಿರಂತರ ತಿರುಗಾಟ. ಸದಾ ಕಾರ್ಯಕರ್ತರನ್ನು ಕಟ್ಟಿಕೊಂಡು ಹೋರಾಟಗಳಿಗೆ, ಸಮಾವೇಶಗಳಿಗೆ, ಚುನಾವಣೆಗಳಿಗೆ ಸಂಘಟನೆಯನ್ನು ಅಣಿ ಮಾಡುವುದೇ ಅವರ ನಿರಂತರ ಕಾಯಕ .

51 ಸಾಯುವ ವಯಸ್ಸೇ? ವಿಧಿ ಮಾತ್ರ ಇಂತಹ ಸಾವನ್ನು ಬರೆಯಬಲ್ಲದು . ಮಡದಿ ಶಿವಲೀಲಾ, ಇನ್ನು ಕಾಲೇಜು – ಹೈಸ್ಕೂಲು ಕಲಿಯುತ್ತಿರುವ ಪ್ರಜ್ವಲ್ , ಋಷಿಕೇಶ್ ಈ ಆಘಾತವನ್ನು ಹೇಗೆ ಸಂಭಾಳಿಸುವರೋ ... ಸಿದ್ದೇಶ್ ಯಾದವ್ ಬಹಳ ದೊಡ್ಡ ರಾಜಕೀಯ ನಾಯಕರಲ್ಲ , ಆದರೆ ಅವರೊಬ್ಬ ಕಾರ್ಯಕರ್ತರ ನಾಯಕ. ಅವರನ್ನು ಸಾವು ಹುಡುಕಿ ಬಂದಿದ್ದು ಅವರು ಕಾರ್ಯಕರ್ತರ ನಡುವಿನ ಸಭೆಯಲ್ಲಿ ಇದ್ದಾಗಲೇ ...

# ಕರ್ನಾಟಕ ಕೇಸರಿ
# ಶ್ರೀ ಜಗನ್ನಾಥ ರಾವ್ ಜೋಶಿ
## ಪುಸ್ತಕ ಬಿಡುಗಡೆ ಸಮಾರಂಭ






**ಜಗನ್ನಾಥರಾಯರ ಬಗ್ಗೆ ಈಗಿನ ಹೊಸ ಪೀಳಿಗೆಯ ಬಿಜೆಪಿ ಕಾರ್ಯಕರ್ತರಿಗೆ ಹಾಗೂ ಜನರಿಗೆ ತಿಳಿಸಬೇಕಾಗಿದೆ. ಹುಬ್ಬಳ್ಳಿಯ ಒಬ್ಬ ಹುಡುಗ ಬೆಂಗಳೂರಿನ ಬಿಜೆಪಿ ರಾಜ್ಯ ಕಚೇರಿಯ ಹೆಸರು ಜಗನ್ನಾಥ ಭವನ ಎಂದಿದೆ. ಬಹುಶ ಪೂರಿ ಜಗನ್ನಾಥ ದೇವರ ಹೆಸರಿನಲ್ಲಿ ಆ ಹೆಸರನ್ನು ಇಟ್ಟಿರಬೇಕು ಎಂದು ನನ್ನಲ್ಲಿ ಹೇಳಿದ. ಜಗನ್ನಾಥರಾಯರ ಬಗ್ಗೆ ಹಾಗೂ ಅವರ ಹೆಸರಿನಲ್ಲಿ ರಾಜ್ಯ ಕಚೇರಿಗೆ ಹೆಸರಿಡಲಾಗಿದೆ ಎಂಬುದು ತಿಳಿಯದ ಇನ್ನೂ ಹಲವರಿದ್ದಾರೆ. ಕರ್ನಾಟಕದಲ್ಲಿ ಭಾರತೀಯ ಜನತಾ ಪಕ್ಷ ಇಂದು ಆಲದ ಮರದಂತೆ ಬೆಳೆದಿರಬಹುದು. ಆದರೆ ಪಕ್ಷ ಆ ದಿನಗಳಲ್ಲಿ ಆಳ ಹಾಗೂ ವಿಸ್ತಾರವಾಗಿ ಬೇರು ಬಿಡಲು ಅವಿರತವಾಗಿ ಶ್ರಮಿಸಿದ, ಸಂಘಟಿಸಿದ ಶ್ರೀ ಜಗನ್ನಾಥ ರಾವ್ ಜೋಶಿಯವರ ಜೀವನ, ಸಾಧನೆ ಬಗ್ಗೆ ಬೆಳಕು ಚೆಲ್ಲಿ ಸ್ಫೂರ್ತಿ ನೀಡುವುದಂತೂ ದಿಟ. ಅವರ ಬಗ್ಗೆ ತಿಳಿಸುವ ಸದುದ್ದೇಶವೇ ಈ ಪುಸ್ತಕ.**

(ವರದಿ)




**ರತನ್ ರಮೇಶ್ ಪೂಜಾರಿ**
ರಾಜ್ಯ ಮಾಧ್ಯಮ ಸಮಿತಿ ಸದಸ್ಯರು,
ಬಿಜೆಪಿ ಕರ್ನಾಟಕ


ಬೆಂಗಳೂರಿನ ಮಲ್ಲೇಶ್ವರದ ಕಾಡು ಮಲ್ಲೇಶ್ವರ ದೇವಸ್ಥಾನದ ಹತ್ತಿರ ಭಾರತೀಯ ಜನತಾ ಪಾರ್ಟಿಯ ರಾಜ್ಯ ಕಚೇರಿ ಇದೆ. ರಾಜ್ಯ ಕಚೇರಿಯ ಹೆಸರು ಜಗನ್ನಾಥ ಭವನ. ಕಚೇರಿಯ ಹೊರಗಡೆ ಇರುವ ಹೆಚ್ಚಿನ ಬಿಜೆಪಿ ಕಾರ್ಯಕರ್ತರಿಗೂ ಈ ಕಚೇರಿಗೆ ಜಗನ್ನಾಥ ಭವನ ಎಂದು ಏಕೆ ಹೆಸರಿಟ್ಟಿದ್ದಾರೆ ಎಂಬ ವಿಷಯ ಗೊತ್ತಿರಲಿಕ್ಕಿಲ್ಲ. ಕೆಲವರು ಪೂರಿ ಜಗನ್ನಾಥ ದೇವರ ಹೆಸರಿನಲ್ಲಿ ಈ ಭವನಕ್ಕೆ ಹೆಸರಿಟ್ಟಿರಬಹುದು ಎಂದುಕೊಂಡವರೂ ಇದ್ದಾರೆ. ಇನ್ನು ಕೆಲವರು ಇನ್ನೇನೊ ಕಾರಣವನ್ನು ಊಹಿಸಿರಲೂಬಹುದು. ಭಾರತೀಯ ಜನತಾ ಪಾರ್ಟಿಯನ್ನು ಕರ್ನಾಟಕದಲ್ಲಿ ತಳಮಟ್ಟದಿಂದ ಕಟ್ಟಿ ಬೆಳೆಸಲು ಮಹತ್ತರ ಪಾತ್ರ ವಹಿಸಿದಂತಹ ದಿ. ಜಗನ್ನಾಥ್ ರಾವ್ ಜೋಶಿಯವರ ಹೆಸರಿನಲ್ಲಿ ಈ ಕಚೇರಿಗೆ ಹೆಸರು ಬಂದಿರುವುದು ಹಿರಿಯ ಕಾರ್ಯಕರ್ತರಿಗೆ ಗೊತ್ತಿರಬಹುದು ಆದರೆ ಹಲವು ಹೊಸ ಕಾರ್ಯಕರ್ತರಿಗೆ ಹಾಗೂ ಸಾಮಾನ್ಯ ಜನರಿಗೆ

ಗೊತ್ತಿರಲಿಕ್ಕಿಲ್ಲ. ದಿ. ಜಗನ್ನಾಥ ರಾವ್ ಜೋಶಿಯವರ ಬಗ್ಗೆ ಹಲವರಿಗೆ ಗೊತ್ತಿರಲಿಕ್ಕಿಲ್ಲ. ತಿಳಿಸಿಕೊಡುವ ಪ್ರಯತ್ನದ ಭಾಗವಾಗಿ ಹಿರಿಯ ಕಾರ್ಯಕರ್ತರಾದ ಶ್ರೀ ತಿಮ್ಮಣ್ಣ ಭಟ್ ರವರು ಬರೆದ **ಎಲ್ಲ ರಾಜಕಾರಣಿಗಳಂತಲ್ಲ ನಮ್ಮ ರಾಯರು,** ಕರ್ನಾಟಕದ ಕೇಸರಿ ಜಗನ್ನಾಥರಾವ್ ಜೋಶಿ ಎಂಬ ಪುಸ್ತಕ ಜೂನ್ 23 ರಂದು ಜಗನ್ನಾಥ ರಾವ್ ಜೋಶಿಯವರ ಜನ್ಮ ದಿನದಂದು ಬಿಜೆಪಿ ರಾಜ್ಯ ಕಚೇರಿ ಜಗನ್ನಾಥ ಭವನದಲ್ಲಿ ಬಿಡುಗಡೆಗೊಂಡಿತು. ಈ ಪುಸ್ತಕ ಬಿಡುಗಡೆ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬಿಜೆಪಿ ರಾಜ್ಯ ಉಪಾಧ್ಯಕ್ಷರಾದ ಶ್ರೀ ಎಮ್. ಶಂಕರಪ್ಪನವರು ವಹಿಸಿದ್ದರು. ವೇದಿಕೆಯಲ್ಲಿ ಮಾಜಿ ಶಾಸಕರಾದ ಶ್ರೀ ಪಿ. ರಾಜೀವ್, ವಿಧಾನ ಪರಿಷತ್ ಸದಸ್ಯರು ಹಾಗೂ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಎನ್. ರವಿಕುಮಾರ್, ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಸಿದ್ದರಾಜು, ಹಿರಿಯ ಪತ್ರಕರ್ತರಾದ ಶ್ರೀ ದು. ಗು. ಲಕ್ಷ್ಮಣ್, ಲೇಖಕರಾದ ಶ್ರೀ ರೋಹಿತ್ ಚಕ್ರತೀರ್ಥ, ಪುಸ್ತಕದ ಲೇಖಕರಾದ ಶ್ರೀ ತಿಮ್ಮಣ್ಣ ಭಟ್ ರವರು ಉಪಸ್ಥಿತರಿದ್ದರು.

ಮಾಜಿ ಶಾಸಕರಾದ ಶ್ರೀ ಪಿ. ರಾಜೀವ್‌ರವರು ಪ್ರಾಸ್ತಾವಿಕ ಭಾಷಣದಲ್ಲಿ ಭೂಮಿ ತನ್ನ ಗರ್ಭದಲ್ಲಿ ವಜ್ರವನ್ನು ಅಡಗಿಸಿಕೊಂಡಿರುವ ರೀತಿಯಲ್ಲಿ ಕಾಲ ಗರ್ಭದಲ್ಲಿ ಹಲವಾರು ವ್ಯಕ್ತಿತ್ವಗಳು ರತ್ನದ ರೂಪದಲ್ಲಿ ಹುದುಗಿ ಹೋಗಿವೆ. ಅಂತಹ ಅಪರೂಪದ ವ್ಯಕ್ತಿತ್ವ ದಿ. ಜಗನ್ನಾಥರ ಜೋಶಿಯವರದು. ಇವರ ಕುರಿತಾದ ಪುಸ್ತಕಗಳು ಬಹಳ ವಿರಳ. ಈ ಕೆಲಸವನ್ನು ಲೇಖಕರಾದ ಶ್ರೀ ತಿಮ್ಮಣ್ಣ ಭಟ್ ರವರು ಮಾಡಿದ್ದಾರೆ.

ಈ ಪುಸ್ತಕವನ್ನು ಸ್ಥೂಲವಾಗಿ ನಾವು ಮೂರು ಭಾಗಗಳಾಗಿ ನೋಡಬಹುದು. ಒಂದನೆಯದಾಗಿ ಜಗನ್ನಾಥ ರಾವ್ ಜೋಶಿಯವರ ಜೀವನ ಸಾಧನೆ. ಗದಗದ ನರಗುಂದದಲ್ಲಿ ಹುಟ್ಟಿ ಮಧ್ಯ ಪ್ರದೇಶದಲ್ಲಿ ಎರಡು ಬಾರಿ ಸಂಸದರಾಗಿ, ರಾಜ್ಯಪಾಲರ ಹುದ್ದೆಯನ್ನು ತಿರಸ್ಕರಿಸಿ ಪಕ್ಷಕ್ಕೆ ಹದವಾದ ವಾತಾವರಣವಿದೆ, ಈ ಸಂದರ್ಭದಲ್ಲಿ ನಾನು ಸಂಘಟನೆಯಲ್ಲಿ ತೊಡಗಿಸಿಕೊಳ್ಳುತ್ತೇನೆ ಎಂಬ ತೀರ್ಮಾನದವರೆಗೆ ಅವರ ಜೀವನಗಾಥೆಯನ್ನು ಇದರಲ್ಲಿ ನೋಡಬಹುದಾಗಿದೆ. ಎರಡನೇ ಭಾಗವಾಗಿ ಅಪರೂಪದ ಭಾವಚಿತ್ರಗಳನ್ನು ಈ ಪುಸ್ತಕದಲ್ಲಿ ಕಾಣಬಹುದಾಗಿದೆ. ಮೂರನೇ ಭಾಗದಲ್ಲಿ ಜಗನ್ನಾಥ ರಾವ್ ಜೋಶಿಯವರ ಬದುಕಿನ ಸ್ವಾರಸ್ಯಗಳು ಅಂತ ಹೇಳಿ ಸುಮಾರು 50 ಪ್ರಸಂಗಗಳನ್ನು ಈ ಪುಸ್ತಕದಲ್ಲಿ ಬರೆದಿದ್ದಾರೆ. ಪುಸ್ತಕವನ್ನು ಓದಲು ಪ್ರಾರಂಭ ಮಾಡಿದರೆ 78 ಪುಟಗಳನ್ನು ಮುಗಿಸುವವರೆಗೆ ನಿಮ್ಮ ಓದನ್ನ ಬಿಡಲ್ಲ ಎಂದು ತಿಳಿಸಿದರು. ದು. ಗು. ಲಕ್ಷ್ಮಣ್ ರವರು ಮಾತನಾಡಿ ಜಗನ್ನಾಥ ರಾಯರ ಬಗ್ಗೆ ಬಂದ ಎರಡನೇ ಪುಸ್ತಕ ಇದು ಎಂದು ನಾನು ಅಂದುಕೊಳ್ಳುತ್ತೇನೆ. ಜನ ಸಂಘವನ್ನು ಬಹಳ ಕಷ್ಟದ ಕಾಲದಲ್ಲಿ ಕಟ್ಟಿ ಬೆಳೆಸಿದವರು ಜಗನ್ನಾಥರಾಯರು. ಆದರೆ ಜಗನ್ನಾಥ ರಾಯರ ಮೇರು ವ್ಯಕ್ತಿತ್ವಕ್ಕೆ ಈ ಎರಡು ಪುಸ್ತಕಗಳು ಏನೂ ಸಾಲದು. ಅದ್ಭುತವಾದ ವಿಚಾರವನ್ನು ಕೊಟ್ಟಂತಹ, ಸಾವಿರಾರು ಕಾರ್ಯಕರ್ತರನ್ನು ಬೆಳೆಸಿದಂತ ಜಗನ್ನಾಥರಾಯರ ಬಗ್ಗೆ ಇಷ್ಟು ವರ್ಷದ ಒಳಗೆ ಹಲವು ಅತ್ಯುತ್ತಮವಾದ ಪುಸ್ತಕಗಳು ಬರಬೇಕಿತ್ತು. ಇಂತಹ ಒಬ್ಬ ಧೀಮಂತ ಹಿರಿಯ ರಾಜಕಾರಣಿ ಬಗ್ಗೆ ಕನ್ನಡದಲ್ಲಿ ಇನ್ನೊಂದು ಪುಸ್ತಕ ಬರುತ್ತಿರುವುದು ಬಹಳ ಸಂತೋಷದ ವಿಷಯ. ಇನ್ನಷ್ಟು ಪುಸ್ತಕಗಳು ಬರಬೇಕು ಎಂದರು. ಲೇಖಕರಾದ ತಿಮ್ಮಣ್ಣ ಭಟ್ ರವರನ್ನು ಈ ಸಂದರ್ಭದಲ್ಲಿ ಸನ್ಮಾನ ಮಾಡಲಾಯಿತು.

ಲೇಖಕರು ಈ ಸಂದರ್ಭದಲ್ಲಿ ಮಾತನಾಡಿ, ಅಪಾರ ಕೊಡುಗೆ ನೀಡಿದ ಜಗನ್ನಾಥರಾಯರ ಬಗ್ಗೆ ಈಗಿನ ಹೊಸ ಪೀಳಿಗೆಯ ಬಿಜೆಪಿ ಕಾರ್ಯಕರ್ತರಿಗೆ ಹಾಗೂ ಜನರಿಗೆ ತಿಳಿಸಬೇಕಾಗಿದೆ ಎಂದು ಹೇಳಿದರು. ಹುಬ್ಬಳ್ಳಿಯ ಒಬ್ಬ ಹುಡುಗ ಬೆಂಗಳೂರಿನ ಬಿಜೆಪಿ ರಾಜ್ಯ ಕಚೇರಿಯ ಹೆಸರು ಜಗನ್ನಾಥ ಭವನ ಎಂದಿದೆ, ಬಹುಶಃ ಪೂರಿ ಜಗನ್ನಾಥ ದೇವರ ಹೆಸರನ್ನು ಇಟ್ಟಿರಬೇಕು ಎಂದು ಹೇಳಿದಾಗ ಜಗನ್ನಾಥರಾಯರ ಬಗ್ಗೆ ಹಾಗೂ ಅವರ ಹೆಸರಿನಲ್ಲಿ ರಾಜ್ಯ ಕಚೇರಿಗೆ ಹೆಸರಿಡಲಾಗಿದೆ ಎಂಬುದನ್ನು ಅರಿಯದವರು ಇನ್ನೂ ಹಲವರಿದ್ದಾರೆ ಎನಿಸಿತು. ಜಗನ್ನಾಥ ರಾಯರನ್ನು ಪರಿಚಯಿಸಲಿಕ್ಕಾಗಿಯೇ ಈ ಪುಸ್ತಕವನ್ನು ಬರೆದೆ ಎಂದು ಹೇಳಿದರು.

ಭಾರತೀಯ ಜನತಾ ಪಕ್ಷದ ರಾಜ್ಯ ಉಪಾಧ್ಯಕ್ಷರಾದ ಶ್ರೀ ಎಂ. ಶಂಕರಪ್ಪನವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಮಾತನಾಡುತ್ತ ಜಗನ್ನಾಥರಾಯರ ಹೋರಾಟ, ತ್ಯಾಗ ಎಲ್ಲರಿಗೂ ತಿಳಿಯಬೇಕಿದೆ. ಇಂತಹ ಮೇರು ವ್ಯಕ್ತಿತ್ವದ ಧುರೀಣರ ಬಗ್ಗೆ ಬರೆದಿರುವ ಪುಸ್ತಕವನ್ನು ಬಿಡುಗಡೆ ಮಾಡುವ ಹಾಗೂ ಈ ಸಮಾರಂಭದ ಅಧ್ಯಕ್ಷತೆ ವಹಿಸಲು ಅವಕಾಶ ಸಿಕ್ಕಿರುವುದು ನನ್ನ ಸೌಭಾಗ್ಯ ಎಂದು ಹೇಳಿದರು. ಕೃತಿಯ ಪ್ರಕಾಶಕರಾದ ಅಯೋಧ್ಯಾ ಪ್ರಕಾಶನದ ಶ್ರೀ ರೋಹಿತ್ ಚಕ್ರತೀರ್ಥರವರು ಪುಸ್ತಕದ ಬಗ್ಗೆ ಪ್ರೋತ್ಸಾಹದ ಮಾತುಗಳನ್ನಾಡಿ ಶುಭ ಹಾರೈಸಿದರು. ಕುಮಾರಿ ತನ್ಮಯಿ ಅವರು ಜೋಶಿ ಅವರ ಬಗ್ಗೆ ಬರೆದ ಒಂದು ಕವನವನ್ನು ಪ್ರಸ್ತುತಪಡಿಸಿದರು. ಈ ಪುಸ್ತಕ ಒಟ್ಟು 78 ಪುಟಗಳನ್ನು ಒಳಗೊಂಡಿದೆ. ಈ ಪುಸ್ತಕವನ್ನು ಅಯೋಧ್ಯಾ ಪಬ್ಲಿಕೇಶನ್ ಹೊರತಂದಿದೆ. ಪುಸ್ತಕಕ್ಕೆ ಮುನ್ನುಡಿಯನ್ನು ರಾಷ್ಟ್ರೀಯ ಸ್ವಯಂಸೇವಕ ಸಂಘದ ಅಖಿಲ ಭಾರತೀಯ ವ್ಯವಸ್ಥಾ ಪ್ರಮುಖರಾದ ಶ್ರೀ ಮಂಗೇಶ್ ಬೆಂಡೆಯವರು ಹಾಗೂ ಹಾರೈಕೆಯ ಅಕ್ಷರವನ್ನು ಬರೆದಿರುವಂತವರು ಭಾರತೀಯ ಜನತಾ ಪಕ್ಷದ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಬಿ. ಎಲ್. ಸಂತೋಷ್ ರವರು ಬರೆದಿದ್ದಾರೆ.

ಕರ್ನಾಟಕದಲ್ಲಿ ಭಾರತೀಯ ಜನತಾ ಪಕ್ಷ ಇಂದು ಆಲದ ಮರದಂತೆ ಬೆಳೆದಿರಬಹುದು. ಆದರೆ ಪಕ್ಷ ಆ ದಿನಗಳಲ್ಲಿ ಆಳ ಹಾಗೂ ವಿಸ್ತಾರವಾಗಿ ಬೇರು ಬಿಡಲು ಅವಿರತವಾಗಿ ಶ್ರಮಿಸಿದ, ಸಂಘಟಿಸಿದ ಶ್ರೀ ಜಗನ್ನಾಥ ರಾವ್ ಜೋಶಿಯವರ ಬಗ್ಗೆ ತಿಮ್ಮಣ್ಣ ಭಟ್ರು ಅವರ ಪುಸ್ತಕ ಜಗನ್ನಾಥ ರಾವ ಜೋಶಿಯವರ ಜೀವನ, ಸಾಧನೆ ಬಗ್ಗೆ ಬೆಳಕು ಚೆಲ್ಲಿ ಸ್ಫೂರ್ತಿ ನೀಡುವುದಂತೂ ದಿಟ.




# ಕಂಡಿಶನ್ ರಹಿತವಾಗಿ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ಆಗ್ರಹಿಸಿ ಬಿಜೆಪಿ ವತಿಯಿಂದ ಪ್ರತಿಭಟನೆ


(ವರದಿ)
**ರತನ್ ರಮೇಶ್ ಪೂಜಾರಿ**
ರಾಜ್ಯ ಮಾಧ್ಯಮ ಸಮಿತಿ ಸದಸ್ಯರು, , ಬಿಜೆಪಿ ಕರ್ನಾಟಕ


ಅದು 2004. ಆಗಷ್ಟೆ ಲೋಕಸಭೆ ಚುನಾವಣೆಯ ಫಲಿತಾಂಶ ಬಂದಿತ್ತು. ಇಡೀ ಪ್ರಪಂಚವೇ ತಿರುಗಿ ನೋಡುವಂತ ಅದ್ಬುತ ಕೆಲಸಗಳನ್ನು ಮಾಡಿದ್ದ ಹಾಗೂ ಇಂಡಿಯಾ ಶೈನಿಂಗ್, ಫೀಲ್ ಗುಡ್ ಎಂಬ ಅದ್ಬುತ ಸ್ಲೋಗನ್ ಮೂಲಕ ನಿಗದಿತ ಸಮಯಕ್ಕಿಂತ ಆರು ತಿಂಗಳ ಮೊದಲೇ ಚುನಾವಣೆಗೆ ತೆರಳಿದ್ದ ಅಟಲ್ ಬಿಹಾರಿ ವಾಜಪೇಯಿ ಅವರ ನೇತೃತ್ವದ ಭಾರತೀಯ ಜನತಾ ಪಾರ್ಟಿಗೆ ಆಶ್ಚರ್ಯ ಹಾಗೂ ಆಘಾತ ಕಾದಿತ್ತು. ಅನೇಕ ಕ್ರಾಂತಿಕಾರಿ ಬದಲಾವಣೆಗಳನ್ನು ದೇಶದಲ್ಲಿ ತಂದು ಅಭಿವೃದ್ಧಿಗೆ ಹೊಸ ಭಾಷ್ಯವನ್ನು ಬರೆದಿದ್ದ ಅಟಲ್ ಬಿಹಾರಿ ವಾಜಪೇಯಿ ಅವರ ನೇತೃತ್ವದ ಸರಕಾರ ಆಶ್ಚರ್ಯವೆಂಬಂತೆ ಸೋತಿತ್ತು. ನಿರ್ಲಿಪ್ತ ಮನೋಭಾವದ ಅಟಲ್ ಬಿಹಾರಿ ವಾಜಪೇಯಿಯವರು ಕಿಟಕಿಯಿಂದ ಹೊರ ನೋಡುತ್ತಾ ತಮ್ಮ ಕಚೇರಿಯಲ್ಲಿ ನಿಂತಿದ್ದರು.

ಆಗ ಅಲ್ಲಿಗೆ ಬಂದ ಪ್ರಮೋದ್ ಮಹಾಜನ್ ಅಟಲ್ ಬಿಹಾರಿ ವಾಜಪೇಯಿಯವರಲ್ಲಿ ಯೆ ಕ್ಯಾ ಹುವಾ ಸಾಬ್ (ಇದು ಏನಾಯ್ತು ಸಾಹೇಬ್ರೆ) ಎಂದು ಕೇಳುತ್ತಾರೆ. ಆಗ ಅಟಲ್ ಬಿಹಾರಿ ವಾಜಪೇಯಿ ಅವರು ಎಂದಿನಂತೆ ತಮ್ಮ ಹಾಸ್ಯದ ಧಾಟಿಯಲ್ಲಿ ಏ ಕ್ಯಾ ಹುವಾ ಓ ಕಾಂಗ್ರೆಸ್ ಕೋ ಭಿ ಪತಾ ನಹಿ (ಇದು ಏನಾಯ್ತು ಅಂತ ಬಹುಶಃ ಕಾಂಗ್ರೆಸ್‌ನವರಿಗೂ ಗೊತ್ತಿರಲಿಕ್ಕಿಲ್ಲ) ಎಂದು ನಕ್ಕರು.

ಕರ್ನಾಟಕದಲ್ಲೂ ಗ್ಯಾರಂಟಿ ಮೇಲೆ ಗ್ಯಾರಂಟಿಗಳನ್ನು ಘೋಷಿಸುತ್ತಾ ಹೋದ ಕಾಂಗ್ರೆಸ್ ಪಕ್ಷಕ್ಕೆ ಇಷ್ಟು ದೊಡ್ಡ ಗೆಲುವಿನ ನಿರೀಕ್ಷೆ ಅವರಿಗೂ ಕೂಡ ಇದ್ದಿರಲಿಕ್ಕಿಲ್ಲ. ಇರಲಿ. ಪ್ರಜಾಪ್ರಭುತ್ವದಲ್ಲಿ ಜನರ ತೀರ್ಮಾನವೇ ಅಂತಿಮ. ಆದರೆ ಗ್ಯಾರಂಟಿಗಳನ್ನ ಚುನಾವಣೆಯ ಮೊದಲು ಘೋಷಿಸುವ ಹೊತ್ತಿನಲ್ಲಿ ಆದರೆ ಆರ್ಥಿಕತೆಯ ಬಗ್ಗೆ ಯಾವುದೇ ಲೆಕ್ಕಾಚಾರ ಹಾಕಿಕೊಂಡ ಹಾಗೆ ಕಾಣುತ್ತಿಲ್ಲ ಎಂಬುದು



ಚುನಾವಣಾ ನಂತರ ಗ್ಯಾರೆಂಟಿಗಳನ್ನು ಜಾರಿ ಮಾಡುವಲ್ಲಿ ಅವರು ಹರಸಾಹಸ ಪಡುತ್ತಿರುವುದು ಹಾಗೂ ರಾಜ್ಯದಲ್ಲಿ ಅನೇಕ ಗೊಂದಲಕ್ಕೆ ಕಾರಣವಾಗಿರುವುದರಲ್ಲಿ ಕಾಣಬಹುದು. ಭಾರತೀಯ ಜನತಾ ಪಕ್ಷ ಈ ಗ್ಯಾರಂಟಿ ಯೋಜನೆಗಳ ವಿರುದ್ಧವಾಗೇನು ಇಲ್ಲ. ಆದರೆ ಗೆದ್ದ ನಂತರ ಕಾಂಗ್ರೆಸ್ ಪಕ್ಷ ಒಂದರ ಮೇಲೆ ಒಂದು ಕಂಡಿಷನ್‌ಗಳನ್ನು ಹೇರುತ್ತಿರುವುದು, ಯೋಜನೆಯನ್ನು ಜಾರಿಗೆ ತರುವುದರಲ್ಲಿ ವಿಪರೀತ ಗೊಂದಲಗಳಿರುವುದು, ಒಬ್ಬೊಬ್ಬ ಸಚಿವರು ಒಂದೊಂದು ರೀತಿಯ ಗೊಂದಲಕಾರಿ ಹೇಳಿಕೆಯನ್ನು ಈ ಕುರಿತು ನೀಡುತ್ತಿರುವುದು, ಹಾಗೂ ಅಧಿಕಾರಕ್ಕೆ ಬಂದ 24 ಗಂಟೆಗಳಲ್ಲಿ ಎಲ್ಲಾ ಯೋಜನೆಗಳನ್ನು ಜಾರಿ ಮಾಡುತ್ತೇವೆ ಎಂದ ಕಾಂಗ್ರೆಸ್‌ನವರು ಒಂದೂವರೆ ತಿಂಗಳಾದರೂ ಬೇರೆ ಬೇರೆ ಕಾರಣ ನೀಡಿ ಕಾಲ ಹರಣ ಮಾಡುತ್ತಿರುವುದನ್ನು ವಿರೋಧಿಸಿ ಅವರು ಚುನಾವಣಾ ಪೂರ್ವ ಹೇಗೆ ವಾಗ್ದಾನ ನೀಡಿದ್ದರೋ ಹಾಗೆಯೇ ಜಾರಿಯಾಗಬೇಕೆಂದು ಭಾರತೀಯ ಜನತಾ ಪಕ್ಷದ ವತಿಯಿಂದ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಬೆಳಿಗ್ಗೆಯಿಂದ ಸಾಯಂಕಾಲದ ವರೆಗೆ ಪ್ರತಿಭಟನೆ ನಡೆಯಿತು.

ಪ್ರತಿಭಟನೆಯ ನೇತೃತ್ವವನ್ನು ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ವಹಿಸಿದ್ದರು. ವಿದ್ಯುತ್ ದರ ಹೆಚ್ಚಳವನ್ನು ಯಥಾಸ್ಥಿತಿಗೆ ತರಬೇಕು. 10 ಕೆಜಿ ಅಕ್ಕಿ ಕೊಡುವ ಭರವಸೆಯನ್ನು ಯಥಾವತ್ ಜಾರಿ ಮಾಡಬೇಕು ಎಂದು ಆಗ್ರಹಿಸಲಾಯಿತು. ಕಾಂಗ್ರೆಸ್ ಸರಕಾರದ ಸುಳ್ಳು ಭರವಸೆಗಳ ವಿರುದ್ಧ ಘೋಷಣೆ ಕೂಗಲಾಯಿತು.

ಬಿಜೆಪಿಯ ರಾಜ್ಯಾಧ್ಯಕ್ಷ ಹಾಗೂ ಸಂಸದರಾದ ಶ್ರೀ ನಳಿನ್‌ಕುಮಾರ್ ಕಟೀಲ್ ಅವರು ಮಾತನಾಡಿ ಚುನಾವಣೆ ಪೂರ್ವದಲ್ಲಿ ಮನೆಮನೆಗೆ ಸಹಿ ಹಾಕಿದ ಗ್ಯಾರಂಟಿ ಕಾರ್ಡ್ ಗಳನ್ನು ಹಂಚುವ ಮೂಲಕ ಸುಳ್ಳು ಘೋಷಣೆಗಳ ಆಧಾರದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದು ಇದೀಗ ಜನರಿಗೆ ಮೋಸ ಮಾಡುತ್ತಿದೆ. ಸರಕಾರ ಬಂದು 24 ಗಂಟೆಗಳಲ್ಲಿ ಭರವಸೆ ಅನುಷ್ಠಾನಕ್ಕೆ ತರುವುದಾಗಿ ಹೇಳಿದವರು ಇದೀಗ ಸುಮಾರು ಎರಡು ತಿಂಗಳಾದರೂ ಸಮರ್ಪಕ ಮಾರ್ಗಸೂಚಿ ನೀಡಿಲ್ಲ. ಗ್ಯಾರಂಟಿಗಳನ್ನು ಕಂಡಿಷನ್‌ಗಳೊಂದಿಗೆ ಜಾರಿ ಮಾಡುತ್ತಿದ್ದಾರೆ. 10 ಕೆಜಿ ಅಕ್ಕಿ ಎಂದವರು ಇದೀಗ 5 ಕೆಜಿಗೆ ಹಣ ನೀಡುತ್ತಿದ್ದಾರೆ. ಕೊಟ್ಟ ಮಾತಿನಂತೆ ನಡೆಯಿರಿ ಎಂದು ಆಗ್ರಹಿಸಿದರು.

ರಾಜ್ಯ ಸರಕಾರ ದ್ವೇಷದ ರಾಜಕೀಯ ಮಾಡುತ್ತಿದೆ. ಮತಾಂತರ ನಿಷೇಧ ಕಾಯ್ದೆ, ಗೋಹತ್ಯಾ ನಿಷೇಧ ರದ್ದು ಮಾಡುವುದನ್ನು ಅವರು ಖಂಡಿಸಿದರು. ಜನವಿರೋಧಿ ಸರ್ಕಾರ ಇದೆಂದು ತಿಳಿಸಿದ ಅವರು, 5 ಭಾಗ್ಯಗಳನ್ನು ಮನೆಮನೆಗೆ ತಲುಪಿಸುವವರೆಗೆ ಹೋರಾಟ ಮುಂದುವರೆಸುತ್ತೇವೆ ಎಂದು ಎಚ್ಚರಿಸಿದರು.

ಬಿಜೆಪಿ ಕೇಂದ್ರೀಯ ಸಂಸದೀಯ ಮಂಡಳಿ ಸದಸ್ಯ ಮತ್ತು ರಾಜ್ಯದ ಮಾಜಿ ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪ ಅವರು ಮಾತನಾಡಿ, ಗ್ಯಾರಂಟಿಗಳ ಮೂಲಕ ಅಧಿಕಾರಕ್ಕೆ ಬಂದು ಜನರನ್ನು ವಂಚಿಸಿದ ಸರಕಾರ ಇದು. 10 ಕೆಜಿ ಅಕ್ಕಿ, ಜೊತೆಗೆ ಕೇಂದ್ರದಿಂದ ಕೊಡುವ 5 ಕೆಜಿ ಅಕ್ಕಿ ಸೇರಿ 15 ಕೆಜಿ ಅಕ್ಕಿ ಕೊಡಲೇಬೇಕು. 200 ಯೂನಿಟ್ ವಿದ್ಯುತ್ ಉಚಿತವಾಗಿ ಕೊಡಲೇಬೇಕು. ನಿರುದ್ಯೋಗಿಗಳಿಗೆ ಷರತ್ತಿಲ್ಲದೆ ಭತ್ಯೆ ಕೊಡಿ. ಗೃಹಿಣಿಗೆ 2 ಸಾವಿರ ರೂ. ಕೊಡಿ ಎಂದು ಆಗ್ರಹಿಸಿದರು.

ಗೋಹತ್ಯೆ ನಿಷೇಧ ಕಾಯ್ದೆ ರದ್ದು ಮಾಡಿದರೆ ಅದರ ಪರಿಣಾಮ ಒಳ್ಳೆಯದಾಗುವುದಿಲ್ಲ. ಗ್ಯಾರಂಟಿ ಅನುಷ್ಠಾನ ಮಾಡಿ; ಇಲ್ಲವಾದರೆ ಅಧಿಕಾರ ಬಿಟ್ಟು ತೊಲಗಿ ಎಂದು ಎಚ್ಚರಿಕೆ ನೀಡಿದರು. ಜನವಿರೋಧಿ, ಭ್ರಷ್ಟ ಸರಕಾರದ ವಿರುದ್ಧ ನಿರಂತರ ಹೋರಾಟಕ್ಕೆ ಕಾರ್ಯಕರ್ತರು ಸಿದ್ಧರಾಗಬೇಕು ಎಂದು ಮನವಿ ಮಾಡಿದರು.

ಸುಮಾರು 5,000ಕ್ಕೂ ಹೆಚ್ಚು ಕಾರ್ಯಕರ್ತರ ಜೊತೆಗೆ ಬಿಜೆಪಿ ರಾಜ್ಯಾಧ್ಯಕ್ಷ ಹಾಗೂ ಸಂಸದರಾದ ಶ್ರೀ ನಳಿನ್‌ಕುಮಾರ್ ಕಟೀಲ್, ಬಿಜೆಪಿ ಕೇಂದ್ರೀಯ ಸಂಸದೀಯ ಮಂಡಳಿ ಸದಸ್ಯ ಮತ್ತು ರಾಜ್ಯದ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪ, ರಾಜ್ಯದ ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಶ್ರೀ ಡಿ.ವಿ. ಸದಾನಂದಗೌಡ, ಕೇಂದ್ರ ಸಚಿವ ಶ್ರೀ ಭಗವಂತ್ ಖೂಬಾ, ಮಾಜಿ ಸಭಾಪತಿ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ, ಮಾಜಿ ಸಚಿವರಾದ ಶ್ರೀ ಗೋವಿಂದ ಕಾರಜೋಳ, ಶ್ರೀ ಕೆ.ಎಸ್. ಈಶ್ವರಪ್ಪ, ಡಾ. ಅಶ್ವಥ್ ನಾರಾಯಣ್, ಶ್ರೀ ಬಿ.ಸಿ. ಪಾಟೀಲ್, ಶ್ರೀ ಮುರುಗೇಶ್ ನಿರಾಣಿ, ಶ್ರೀ ಬಿ.ಸಿ.ನಾಗೇಶ್, ಶ್ರೀ ಹಾಲಪ್ಪ ಆಚಾರ್, ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಎನ್. ರವಿಕುಮಾರ್, ಶ್ರೀ ಸಿದ್ದರಾಜು, ಸಂಸದರು, ಶಾಸಕರು, ಮಾಜಿ ಸಚಿವರು, ಮಾಜಿ ಶಾಸಕರು, ವಿಧಾನಪರಿಷತ್ ಸದಸ್ಯರು, ಮೋರ್ಚಾ ಅಧ್ಯಕ್ಷರು, ಮುಖಂಡರು, ಪಕ್ಷದ ವಿವಿಧ ಪದಾಧಿಕಾರಿಗಳು, ಭಾರತೀಯ ಜನತಾ ಪಕ್ಷದ ಹಿತೈಷಿಗಳು ಬಹಳ ಉತ್ಸಾಹದಿಂದ ಭಾಗವಹಿಸಿ ಪ್ರತಿಭಟಿಸುವುದರ ಮೂಲಕ ಈ ಪ್ರತಿಭಟನಾ ಧರಣಿ ಯಶಸ್ವಿಯಾಗಿ ಸಂಪನ್ನಗೊಂಡಿದ್ದಲ್ಲದೆ, ಕಾಂಗ್ರೆಸ್ ಸರ್ಕಾರಕ್ಕೆ ಬಿಸಿ ಮುಟ್ಟಿಸುವುದರಲ್ಲಿ ಯಶಸ್ವಿಯಾಯಿತು.

## ಡಾ. ಶ್ಯಾಮಪ್ರಸಾದ ಮುಖರ್ಜಿ ಅವರ ಪುಣ್ಯತಿಥಿಯ ನಿಮಿತ್ತ ಲೇಖನ

# ಶಿಕ್ಷಣ ತಜ್ಞ




**ಅಜಿತ್ ಶೆಟ್ಟಿ ಹೆರಂಜೆ**
ಸಹ ಸಂಚಾಲಕರು
ರಾಜ್ಯ ಪ್ರಕಾಶನ ಪ್ರಕೋಷ್ಠ


**ಶಿಕ್ಷಣ ಕ್ಷೇತ್ರದಲ್ಲಿ ಶ್ಯಾಮಪ್ರಸಾದ್ ಮುಖರ್ಜಿಯವರ ಅತ್ಯಂತ ಮಹತ್ವದ ಕೊಡುಗೆ ಅಂದರೆ, ಅವರು ಜಾರಿಗೆ ತಂದ ಪಂಚಶೀಲ ವ್ಯವಸ್ಥೆ. ಭಾರತದ ಭವಿಷ್ಯವನ್ನು ನಿರ್ಮಿಸುವ ಯುವ ವರ್ಗದ ಶಿಕ್ಷಣ ವ್ಯವಸ್ಥೆ ಸರಿಯಾದ ದಿಕ್ಕಿನಲ್ಲಿ ಸಾಗಿದಾಗ ಮಾತ್ರ, ದೇಶದ ಭವಿಷ್ಯವೂ ಸರಿಯಾದ ದಿಕ್ಕಿನಲ್ಲಿ ಸಾಗಲು ಸಾಧ್ಯ ಎನ್ನುವ ವಿಷಯವನ್ನು ಪ್ರತಿಪಾದಿಸುತ್ತಾರೆ. ವರ್ತಮಾನದ ಕೇಂದ್ರ ಸರಕಾರ ರೂಪಿಸಿರುವ ಹೊಸ ಶಿಕ್ಷಣ ನೀತಿ ಶ್ಯಾಮಪ್ರಸಾದ ಮುಖರ್ಜಿವರ ಶಿಕ್ಷಣ ನೀತಿಯಂದಲೂ ಪ್ರೇರಣೆ ಪಡೆದಿದೆ.**



**17 ಏಪ್ರಿಲ್ 1952 – 23 ಜೂನ್ 1953**

ಕಾಂಗ್ರೆಸ್‌ನ ತುಷ್ಟೀಕರಣದ ನೀತಿಗಳ ವಿರುದ್ಧ ಸೆಟೆದು ನಿಂತು, ನೆಹರೂರವರ ಆಡಳಿತದ ನೀತಿಗಳನ್ನು ವಿರೋಧಿಸಿ ಇದ್ದ ಅಧಿಕಾರವನ್ನೇ ತ್ಯಜಿಸಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಶ್ರೀ ಗುರೂಜಿಯವರೊಂದಿಗೆ ಸೇರಿ ಭಾರತೀಯ ಚಿಂತನೆಯ ಆಧಾರದ ರಾಜಕೀಯ ಸಂಘಟನೆಯ ನೇತಾರರಾಗಿ ಕಾಶ್ಮೀರದ ಉಳಿವಿಗಾಗಿ ಹೋರಾಟ ನಡೆಸಿ ಬಲಿದಾನಿಯಾದ ಶ್ರೀ ಶ್ಯಾಮ ಪ್ರಸಾದ್ ಮುಖರ್ಜಿಯವರ ಶಿಕ್ಷಣ ಕ್ಷೇತ್ರದ ಬಗೆಗಿನ ಚಿಂತನೆಗಳು ಹಾಗೂ ಅವಕಾಶ ಸಿಕ್ಕಿದಾಗ ಕೈಗೊಂಡ ಪರಿಣಾಮಕಾರಿ ಕ್ರಮಗಳು ವರ ದೂರದೃಷ್ಟಿಕೋನಕ್ಕೊಂದು ಸ್ಪಷ್ಟ ಉದಾಹರಣೆ.

ತಮ್ಮ 30 ವರ್ಷಗಳ ರಾಜಕೀಯ ಜೀವನದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಮಾಡಿದ ಅಪರಿಮಿತ ಸಾಧನೆಗಳು ಅವರ ಕೊನೆಯ ಮೂರು ವರ್ಷಗಳ ಪರಿಚಯ ಮಾತ್ರ ಇರುವುದು. ಆದರೆ ಶ್ಯಾಮಪ್ರಸಾದ ಮುಖರ್ಜಿ 1934 ರಿಂದ 1938ರ ತನಕ ಕೋಲ್ಕತ್ತಾ ವಿಶ್ವವಿದ್ಯಾನಿಲಯದ ಉಪಕುಲಪತಿಯಾಗಿ ಕೆಲಸ ಮಾಡುತ್ತಾರೆ. 1933ರಲ್ಲಿ ಉಪಕುಲಪತಿಯಾಗಿ ನೇಮಕವಾದಾಗ ಅವರ ವಯಸ್ಸು ಇನ್ನೂ 33. ಅವರು ಭಾರತದ ಇತಿಹಾಸದಲ್ಲಿ ಅತ್ಯಂತ ಕಿರಿಯ ವಯಸ್ಸಿಗೆ ವಿಶ್ವವಿದ್ಯಾನಿಲಯದ ಉಪಕುಲಪತಿ ಎಂಬವ ಹೆಗ್ಗಳಿಕೆ. ಇಂಗ್ಲೀಷಿನಲ್ಲಿ ಬಿ ಎ, ಬಂಗಾಳಿ ಭಾಷೆಯಲ್ಲಿ ಎಂ ಎ, ಕಾನೂನು ಶಿಕ್ಷಣದಲ್ಲಿ ಬ್ಯಾಚುಲರ್ ಪದವಿ ಹಾಗೂ ಇಂಗ್ಲೆಂಡ್ ಗೆ ತೆರಳಿ ಭ್ಯಾರಿಸ್ಟರ್ ಪದವಿಯನ್ನೂ ಪಡೆದಿದ್ದರು. ಇವರ ತಂದೆ ಆಶುತೋಷ್ ಮುಖರ್ಜಿ ಕೊಲ್ಕತ್ತಾ ವಿಶ್ವವಿದ್ಯಾನಿಲಯದ ಮೊದಲ ಭಾರತೀಯ ಉಪಕುಲಪತಿಗಳಾಗಿದ್ದವರು.

ಶ್ಯಾಮ ಪ್ರಸಾದ್ ಮುಖರ್ಜಿಯವರು ಕೋಲ್ಕತ್ತಾ ವಿಶ್ವವಿದ್ಯಾನಿಲಯದ ಉಪಕುಲಪತಿಗಳಾದಾಗ, ವಿಶ್ವವಿದ್ಯಾನಿಲಯಗಳ ಇತಿಹಾಸದಲ್ಲೇ ನಡೆಯದ ಹಲವು ಪ್ರಥಮಗಳಿಗೆ ಮುನ್ನುಡಿಯನ್ನು ಬರೆಯುತ್ತಾರೆ. ಬ್ರಿಟೀಷರ ಆಳ್ವಿಕೆಯಲ್ಲಿ ಭಾರತೀಯ ಮೂಲದ ಶಿಕ್ಷಣ ಪದ್ಧತಿ ನಲುಗಿ ಹೋಗಿತ್ತು. ಅದರ ಜೊತೆಗೆ ಬ್ರಿಟೀಷ್ ಸಾಮ್ರಾಜ್ಯಶಾಹಿ ವ್ಯವಸ್ಥೆ ಹುಟ್ಟು ಹಾಕಿದ ಆಧುನಿಕ ಶಿಕ್ಷಣ ವ್ಯವಸ್ಥೆ, ಸಂಪೂರ್ಣವಾಗಿ ಇಂಗ್ಲೀಷ್‌ಮಯವಾಗಿತ್ತು. ಅಲ್ಲಿ ಭಾರತೀಯ ಭಾಷೆಗಳಿಗೆ ಯಾವುದೇ ಪ್ರಾಧಾನ್ಯತೆ ಇರಲಿಲ್ಲ. ಬಂಗಾಳದಲ್ಲಿ ಬಂಗಾಳದ ಭಾಷೆಯಲ್ಲಿ ಮಕ್ಕಳಿಗೆ ಶಿಕ್ಷಣ ಪಡೆಯುವುದು ಅತ್ಯಂತ ಪ್ರಯಾಸದ ವಿಷಯವಾಗಿತ್ತು ಹಾಗಾಗಿ ತಮ್ಮ ಕಾಲದಲ್ಲಿ ಕೋಲ್ಕತ್ತಾ ವಿಶ್ವವಿದ್ಯಾನಿಲಯದಲ್ಲಿ ಮತ್ತು ಬಂಗಾಳದ ಶಿಕ್ಷಣ ವ್ಯವಸ್ಥೆಯಲ್ಲಿ ಸ್ಥಳೀಯ ಭಾಷೆಗಳಿಗೆ ಪ್ರಾತಿನಿಧ್ಯತೆ ಕೊಡಿಸಲು ಕ್ರಮ ಕೈಗೊಳ್ಳುತ್ತಾರೆ ಹಾಗು ಬಂಗಾಳಿ ಭಾಷೆಯಲ್ಲೇ ಹತ್ತನೆ ತರಗತಿಯವರೆಗೆ ಶಿಕ್ಷಣ ಪಡೆಯುವ ಅವಕಾಶವನ್ನು ಬಂಗಾಳಿ ವಿಧ್ಯಾರ್ಥಿಗಳಿಗೆ ಕಲ್ಪಿಸಿಕೊಡಲು 1935ರ ಯೂನಿವರ್ಸಿಟಿ ಕಾಯಿದೆಗೆ ಮಾನ್ಯತೆ ಕೊಡಿಸುತ್ತಾರೆ. ವಿಶ್ವವಿದ್ಯಾನಿಲಯ ಪ್ರಾರಂಭವಾದಾಗಿನಿಂದಲೂ ಇದ್ದ ಕುದುರೆ ಮತ್ತು ಇಂಗ್ಲೆಂಡಿನ ರಾಜ ಪ್ರಭುತ್ವದ ಸೂಚಕದ ಚಿಹ್ನೆಯನ್ನು ತೆಗೆದು, ಕಮಲದ ಹೂವುಗಳ ದಳ ಇರುವ ವೃತ್ತಾಕಾರದ ಚಿಹ್ನೆಯನ್ನು ಅಳವಡಿಸಿಕೊಳ್ಳಲು ಕ್ರಮಕೈಗೊಳ್ಳುತ್ತಾರೆ. ಇದು ಬ್ರಿಟೀಷರ ಕೆಂಗಣ್ಣಿಗೆ ಗುರಿಯಾಗುತ್ತದೆ. ವಿಶ್ವವಿದ್ಯಾನಿಲಯದ ಘಟಿಕೋತ್ಸವಕ್ಕೆ ಗುರುದೇವ ರವೀಂದ್ರನಾಥ ಠಾಗೋರ್‌ರವರನ್ನು ಕರೆಸಿ ವಿಶ್ವವಿದ್ಯಾನಿಲಯದ ಇತಿಹಾಸದಲ್ಲೇ ಮೊದಲಬಾರಿಗೆ ಬಂಗಾಳಿ ಭಾಷೆಯಲ್ಲಿ ಘಟಿಕೋತ್ಸವದ

ಭಾಷಣ ಮಾಡಿಸುತ್ತಾರೆ. ಇದು ಬ್ರಿಟೀಷರನ್ನು ಇನ್ನೂ ಕೆರಳಿಸುತ್ತದೆ. ರವೀಂದ್ರನಾಥ ಠಾಗೋರರನ್ನು ವಿಶ್ವವಿದ್ಯಾನಿಲಯದಲ್ಲಿ ಬಂಗಾಳಿ ಭಾಷಾ ವಿಭಾಗದಲ್ಲಿ ಪ್ರೊಫೆಸರ್ ಆಗಿ ನೇಮಿಸುತ್ತಾರೆ. ಬಂಗಾಳಿ ಭಾಷೆಯಲ್ಲಿ ಹೆಚ್ಚಿನ ಸಾಹಿತ್ಯ ಸೃಷ್ಟಿಸಲು ಪ್ರೇರಣೆ ಸಿಗಲಿ ಎನ್ನುವ ಕಾರಣಕ್ಕೆ ವಿಶ್ವವಿದ್ಯಾನಿಲಯದಿಂದಲೇ ಅನೇಕ ಬಂಗಾಳಿ ಸಾಹಿತ್ಯದ ಕೈಪಿಡಿಗಳನ್ನು ಮುದ್ರಿಸಿ ಪ್ರಕಟಿಸುತ್ತಾರೆ, 1937 ರಲ್ಲಿ ಮೊದಲ ಬಾರಿಗೆ ಬಂಗಾಳಿ ಭಾಷೆಯಲ್ಲಿ ಮಂಡಿಸಿದ ಸಂಶೋಧನಾ ಪ್ರಬಂಧ ಒಂದಕ್ಕೆ ಡಾಕ್ಟರೇಟ್ ಗೌರವ ಸಿಗುತ್ತದೆ.

ಡಾ. ಶ್ಯಾಮ ಪ್ರಸಾದ್ ಮುಖರ್ಜಿಯವರು ವಿಶ್ವವಿದ್ಯಾನಿಲಯದಲ್ಲಿ, ಆಧುನಿಕ ಮತ್ತು ಹೊಸತಲೆಮಾರಿಗೆ ಆವಶ್ಯಕವಾಗಿ ಬೇಕಾಗಿದ್ದ ವಿಷಯಗಳ ತರಗತಿಯನ್ನೂ ಪ್ರಾರಂಭಿಸುತ್ತಾರೆ. ಬಂಗಾಳಿ ಭಾಷೆಯ ಜೊತೆಗೆ ಉರ್ದು, ಹಿಂದಿ, ಅಸ್ಸಾಮಿ ಮುಂತಾದ ಸ್ಥಳೀಯ ಭಾರತೀಯ ಭಾಷೆಗಳಿಗೂ ಅವಕಾಶ ಕೊಡಿಸುತ್ತಾರೆ. ಇವರು ಅಪ್ಲೈಡ್ ಫಿಸಿಕ್ಸ್ ವಿಭಾಗವನ್ನು ಆರಂಭಿಸಿ, ಅಲ್ಲಿ ವರ್ತಮಾನದ ಮಾಹಿತಿ ತಂತ್ರಜ್ಞಾನದ ಇಂಜಿನಿಯರಿಂಗ್‌ಗೆ ಸಮನಾದ ಕಮ್ಯುನಿಕೇಶನ್ ಇಂಜಿನಿಯರಿಂಗ್ ಪ್ರಾರಂಭಿಸುತ್ತಾರೆ. 1934 ರಲ್ಲಿ ಡಿಸಿಎಸ್ ಪದವಿಯನ್ನು ಪಬ್ಲಿಕ್ ಹೆಲ್ತ್ ವಿಭಾಗದಲ್ಲಿ ಪ್ರಾರಂಭಿಸುತ್ತಾರೆ. ಸೈನ್ಯಕ್ಕೆ ಸೇರಬಯಸುವ ವಿದ್ಯಾರ್ಥಿಗಳಿಗೆ ತರಬೇತಿ ಕೊಡಿಸುವ ವ್ಯವಸ್ಥೆ ಮಾಡಿಸುತ್ತಾರೆ.

ನಂತರದ ದಿನಗಳಲ್ಲಿ ಭಾರತೀಯ ವಾಯುಪಡೆಯೊಂದಿಗೆ ಸೇರಿ 3 ತಿಂಗಳ ಇಂಟರ್ನ್‌ಶಿಪ್ ಕೋರ್ಸ್‌ಗಳನ್ನು ಪ್ರಾರಂಭಿಸುತ್ತಾರೆ. ಇವರ ಕಾರ್ಯಕಾಲದಲ್ಲಿ ಬಂಗಾಳದಲ್ಲಿ 2 ಪ್ರಮುಖ ಶಿಕ್ಷಕರ ತರಬೇತಿ ಕಾಲೇಜ್‌ಗಳು ಪ್ರಾರಂಭವಾಗುತ್ತವೆ. ಮಹಿಳೆಯದ ಶಿಕ್ಷಣಕ್ಕೆ ಒತ್ತುಕೊಡಲು, ಬಿಹಾರಿಲಾಲ್ ಮಿತ್ರರವರು ಮಹಿಳೆಯರಿಗಾಗಿ ಹೊಮ್ ಸೈನ್ಸ್ ತರಗತಿಗಳನ್ನು ಪ್ರಾರಂಭಿಸಲು ನಿಶ್ಚಯಿಸಿದಾಗ ಅವರಿಗೆ ಆ ಕಾಲದಲ್ಲೇ 6,500 ರೂಪಾಯಿಗಳ ದೇಣಿಗೆ ನೀಡುತ್ತಾರೆ. ಮುಂದೆ ಅದೇ ಸಂಸ್ಥೆ ಬೆಳೆದು ಬಿಹಾರಿಲಾಲ್ ಕಾಲೇಜ್ ಆಗುತ್ತದೆ. ಶ್ಯಾಮಪ್ರಸಾದ ಮುಖರ್ಜಿ ವಿಶ್ವವಿದ್ಯಾನಿಲಯದಲ್ಲಿ ಏಷ್ಯಾದ ಸಂಸ್ಕೃತಿಯನ್ನು ಕಲಿಕಾ ವಿಷಯವನ್ನಾಗಿಸುವ ಹೊಸ ಪ್ರಯತ್ನವೊಂದಕ್ಕೆ ಮುಂದಾಗುತ್ತಾರೆ. ಅವರು ಚೀನಾ ಮತ್ತು ಟಿಬೇಟಿನ ಭಾಷಾ ಅಧ್ಯಯನ ಕೇಂದ್ರ ಸ್ಥಾಪಿಸುತ್ತಾರೆ.

ವಿಧ್ಯಾರ್ಥಿಗಳ ಶಿಕ್ಷಣದ ಜೊತೆಗೆ, ಅವರ ಇತರ ಶಿಕ್ಷಣೇತರ ಹಿತಗಳನ್ನು ಕಾಪಾಡಲು ಅವರು ವಿಶ್ವವಿದ್ಯಾನಿಲಯದಲ್ಲಿ ಒಂದು ಸ್ಟೂಡೆಂಟ್ ವೆಲ್‌ಫೇರ್ ಅಸೋಸಿಯೇಷನ್ ಪ್ರಾರಂಭಿಸುತ್ತಾರೆ. ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಭೋಧನೇತರ ಸಿಬ್ಬಂದಿಗಳ ಒಳಿತಿಗಾಗಿ ಸುಮಾರು 30ಕ್ಕೂ ಹೆಚ್ಚು ಯೋಜನೆಗಳನ್ನು ರೂಪಿಸಿ ಅನುಷ್ಠಾನಕ್ಕೆ ತರುತ್ತಾರೆ. ವಿಶ್ವವಿದ್ಯಾನಿಲಯದ ಸಿಬ್ಬಂಧಿಗಳ ಸಂಘಟನೆಯ ಅಧ್ಯಕ್ಷರೂ ಆಗುತ್ತಾರೆ. ವಿಶ್ವವಿದ್ಯಾನಿಲಯದ ಇತಿಹಾಸದಲ್ಲೆ ಮೊದಲ ಬಾರಿಗೆ ಸಿಬ್ಬಂದಿಗಳಿಗೆ ಪ್ರಾವಿಡೆಂಟ್ ಫಂಡ್ ಕೊಡಿಸುವ ಬಗ್ಗೆ ಸಿಂಡಿಕೇಟ್ ಬಳಿ ಪ್ರಸ್ತಾಪವನ್ನು ಇಡುತ್ತಾರೆ.

ಶಿಕ್ಷಣ ಕ್ಷೇತ್ರದಲ್ಲಿ ಶ್ಯಾಮಪ್ರಸಾದ್ ಮುಖರ್ಜಿಯವರ ಅತ್ಯಂತ ಮಹತ್ವದ ಕೊಡುಗೆ ಅಂದರೆ, ಅವರು ಜಾರಿಗೆ ತಂದ ಪಂಚ ಶೀಲ ವ್ಯವಸ್ಥೆ. ಭಾರತದ ಭವಿಷ್ಯವನ್ನು ನಿರ್ಮಿಸುವ ಯುವ ವರ್ಗದ ಶಿಕ್ಷಣ ವ್ಯವಸ್ಥೆ ಸರಿಯಾದ ದಿಕ್ಕಿನಲ್ಲಿ ಸಾಗಿದಾಗ ಮಾತ್ರ, ದೇಶದ ಭವಿಷ್ಯವೂ ಸರಿಯಾದ ದಿಕ್ಕಿನಲ್ಲಿ ಸಾಗಲು ಸಾಧ್ಯ ಎನ್ನುವ ವಿಷಯವನ್ನು ಪ್ರತಿಪಾದಿಸುತ್ತಾ ಶ್ಯಾಮಪ್ರಸಾದ ಮುಖರ್ಜಿಯವರು ತನ್ನ 2ನೇ ಘಟಿಕೋತ್ಸವದ ಭಾಷಣದಲ್ಲಿ 5 ವಿಷಯಗಳ ಬಗ್ಗೆ ಪ್ರಸ್ತಾಪ ಮಾಡುತ್ತಾರೆ,

- ಯುವಕರ ಸರ್ವಾಂಗೀಣ ಅಭಿವೃದ್ದಿಗೆ ಸಹಾಯವಾಗಲು, ಶಿಕ್ಷಣ ಸಮಾಜದ ಎಲ್ಲಾವರ್ಗಗಳಲ್ಲೂ ಸಿಗಬೇಕು.
- ಸಂಸ್ಕೃತಿ ಮತ್ತು ವಿಜ್ಞಾನದ ಸರಿಯಾದ ಸಮನ್ವಯ ಶಿಕ್ಷಣ ವ್ಯವಸ್ಥೆಯೊಳಗಿರಬೇಕು.
- ದೇಶದ ಆಯಾಯ ಪ್ರದೇಶದ ಸಂಸ್ಕೃತಿಗೆ ಅನುಗುಣವಾಗಿ ಶಿಕ್ಷಕರು ಶಿಕ್ಷಣವನ್ನು ಕೊಡಬೇಕು.
- ಶಿಕ್ಷಣ ವ್ಯವಸ್ಥೆ ಸಮಾಜದೊಳಗೆ ಸ್ವಸ್ಥ, ಸುಂದರ ಮತ್ತು ಭಯ ಮುಕ್ತ ವಾತಾವರಣದ ನಿರ್ಮಾಣಕ್ಕೆ ಪೂರಕವಾಗಿರಬೇಕು.
- ಶಿಕ್ಷಣ ಹೆಚ್ಚು ಹೆಚ್ಚು ಸರಕಾರಿ ಪ್ರಾಯೋಜಕತ್ವದಲ್ಲೇ ದೊರಕಬೇಕು.

ಡಾ. ಶ್ಯಾಮಾಪ್ರಸಾದ್ ಮುಖರ್ಜಿಯರ ಈ ನೀತಿಯನ್ನು, ಮುಂದಿನ ದಿನಗಳಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ ರೂಪಿಸುವವರು ಅನುಷ್ಠಾನಗೊಳಿಸುವ ಪ್ರಯತ್ನ ಮಾಡಿದರು. ಅವರು ವಿಶ್ವವಿದ್ಯಾನಿಲಯದಲ್ಲಿ ಪ್ರಾರಂಭಿಸದ ವಿಷಯಗಳು ಮುಂದಿನ ದಿನಗಳಲ್ಲಿ ಪ್ರತ್ಯೇಕ ಶಿಕ್ಷಣ ಪ್ರಭೇದಗಳಾಗಿ ವಿಶ್ವವಿದ್ಯಾನಿಲಯಗಳಲ್ಲಿ ಭೋಧಿಸಲ್ಪಡುತ್ತದೆ. ವರ್ತಮಾನದ ಕೇಂದ್ರ ಸರಕಾರ ರೂಪಿಸಿರುವ ಹೊಸ ಶಿಕ್ಷಣ ನೀತಿಯು ಕೂಡ ಶ್ಯಾಮಪ್ರಸಾದ ಮುಖರ್ಜಿವರ ಶಿಕ್ಷಣ ನೀತಿಯಿಂದಲೂ ಪ್ರೇರಣೆ ಪಡೆದಿದೆ.

ಕೋಲ್ಕತ್ತಾ ವಿಶ್ವವಿದ್ಯಾನಿಲಯದ ಅವರ ಅನುಭವ, ಅವರು ಮುಂದೆ ದೇಶದ ಕೈಗಾರಿಕೆ ಮತ್ತು ಸರಬರಾಜು ಮಂತ್ರಿಗಳಾಗಿ ಕಾರ್ಯನಿರ್ವಹಿಸುವಾಗ ಸಹಾಯಕ್ಕೆ ಬರುತ್ತದೆ. ಅವರು ತಮ್ಮ ಕಾರ್ಯಕಾಲದಲ್ಲಿ ವಿಶ್ವವಿದ್ಯಾನಿಲಯದಲ್ಲಿ ಪ್ರಾರಂಭಿಸಿದ ಅನೇಕ ವೃತ್ತಿಪರ ಶಿಕ್ಷಣ ಮಾದರಿಯಲ್ಲಿ ಕಲಿತವರೇ ದೇಶದ ಪ್ರಖ್ಯಾತ ಉದ್ದಿಮೆಗಳಲ್ಲಿ ಉನ್ನತ ಸ್ಥಾನಗಳನ್ನು ಅಲಂಕರಿಸುತ್ತಾರೆ. ಈ ಕಾರಣಕ್ಕೆ ಅವರಿಗೆ ಕೈಗಾರಿಕೆ ಮತ್ತು ಅವುಗಳ ಸವಾಲುಗಳನ್ನು ಆಧರಿಸಿ ಉದ್ದಿಮೆ ಮತ್ತು ಕಾರ್ಮಿಕರಿಬ್ಬರ ಹಿತವನ್ನೂ ಕಾಯುವ, ಅವರ ನಡುವೆ ಸಂಭವಿಸುತ್ತಿದ್ದ ಸಂಘರ್ಷಗಳನ್ನ ತಡೆದು, ಸಮಸ್ಯೆಗಳಿಗೆ ತಾತ್ಕಾಲಿಕ ಪರಿಹಾರದ ಜೊತೆಗೆ ಅವುಗಳ ಮೂಲವನ್ನು ಅರಿತು ಪರಹಾರ ಕಂಡುಕೊಳ್ಳುವುದು ಸುಲಭವಾಯಿತು. ಕೈಗಾರಿಕೆಗಳು ದೇಶದ ಅಭಿವೃದ್ದಿಗೆ ಮತ್ತು ಕೈಗಾರಿಕೆ ಬೇಕಿರುವ ವೃತ್ತಿ ಕೌಶಲ್ಯ ಹೊಂದಿರುವ, ನುರಿತ ತರಬೇತಿ ಪಡೆದಿರುವ ಕಾರ್ಮಿಕ ವರ್ಗದ ಪೂರೈಕೆಗೆ ಅಗತ್ಯವಿರುವ ದೂರಗಾಮಿ ಯೋಜನೆಗಳನ್ನು ರೂಪಿಸುವಲ್ಲಿ ಸಹಾಯ ಮಾಡಿತು. ಶ್ಯಾಮ ಪ್ರಸಾದ್ ಮುಖರ್ಜಿಯವರು ರಾಜಕಾರಣದ ಕಾರಣಕ್ಕೆ ಈ ದೇಶಕ್ಕೆ ಎಷ್ಟು ಪ್ರಸ್ತುತವೋ, ಅವರು ಒಬ್ಬ ಶಿಕ್ಷಣ ತಜ್ಞನಾಗಿ, ಒಬ್ಬ ನುರಿತ ಆಡಳಿತಗಾರನಾಗಿ, ಒಬ್ಬ ಒಳ್ಳೆಯ ಸಮಾಜ ಚಿಂತಕನಾಗಿ, ಕೂಡ ನಮಗೆ ಇಂದಿಗೂ ಅಷ್ಟೇ ಪ್ರಸ್ತುತ.

21 ಹಿರಿಯ ಕಾರ್ಯಕರ್ತರ

# ಪರಿಚಯಮಾಲೆ

## ಸಭ್ಯತೆಯ ಸಾಕಾರಮೂರ್ತಿ

# ಡಾ. ವಿ.ಎಸ್. ಆಚಾರ್ಯ

06 ಜುಲೈ 1940 – 14 ಫೆಬ್ರವರಿ 2012



**ಡಾ. ವಿ.ಎಸ್. ಆಚಾರ್ಯ ಅವರ ಜನ್ಮದಿನದ ನಿಮಿತ್ತ ಲೇಖನ**

**ಆಚಾರ್ಯರು ಹಲವು ಪ್ರಥಮಗಳ ಗರಿಯನ್ನು ತಮ್ಮ ಮಕುಟಕ್ಕೆ ಧರಿಸಿದವರು. ಅವರು ಉಡುಪಿ ಪುರಸಭೆಯ ಅತ್ಯಂತ ಕಿರಿಯ ಅಧ್ಯಕ್ಷರಾಗಿ, ದೇಶದಲ್ಲೇ ಒಂದು ದಾಖಲೆ ಬರೆದರು. ಆಚಾರ್ಯರ ಕಾರ್ಯಕಾಲದಲ್ಲಿ ಉಡುಪಿ ಪುರಸಭೆ ಅತ್ಯುತ್ತಮ ಆಡಳಿತಕ್ಕಾಗಿ ರಾಷ್ಟ್ರಪತಿಯವರ ಪ್ರಶಸ್ತಿಗೂ ಭಾಜನವಾಗಿತ್ತು. ಮನೆಗಳಿಗೆ ಕೊಳವೆಯ ಮೂಲಕ ನೀರು ಪೂರೈಸಿದ ಪ್ರಥಮ ಪುರಸಭೆ ಉಡುಪಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಲು ಡಾ. ಆಚಾರ್ಯರ ದೂರದರ್ಶಿತ್ವವೇ ಕಾರಣ. ತಲೆಯ ಮೇಲೆ ಮಲಹೊರುವ ಅನಿಷ್ಟ ಪದ್ಧತಿಯ ರದ್ದತಿಗೆ**




**ವಿಶ್ವೇಶ್ವರ ಹೆಗಡೆ ಕಾಗೇರಿ**
ಮಾಜಿ ವಿಧಾನಸಭಾ ಸ್ಪೀಕರ್


ಪ್ರಸಕ್ತ ರಾಜಕೀಯ ಸನ್ನಿವೇಶದಲ್ಲಿ 'ಮುಗ್ಧ ರಾಜಕಾರಣಿ' ಎಂಬ ಪದ ಬಳಕೆ ವಿರೋಧಾಭಾಸ ಎನಿಸಬಹುದು. ಒಬ್ಬ ರಾಜಕಾರಣಿ ಮುಗ್ಧರಾಗಿರಲು ಸಾಧ್ಯವೇ ಇಲ್ಲ, ಮುಗ್ಧರು ರಾಜಕಾರಣಿ ಆಗಲು ಸಾಧ್ಯವಿಲ್ಲ ಎಂಬ ಭಾವನೆ ಜನರಲ್ಲಿ ಬೇರೂರಿದೆ. ಆದರೆ ಅಂತಹ ಮುಗ್ಧ ರಾಜಕಾರಣಿಗಳೇ ಇಲ್ಲವೇ, ಇರಲಿಲ್ಲವೇ ಎಂಬ ಪ್ರಶ್ನೆಯೂ ಅಷ್ಟೇ ಸಹಜ. ಅಂತಹ ಮೇರು ವ್ಯಕ್ತಿತ್ವದ ಮುಗ್ಧ ರಾಜಕಾರಣಿಗಳು ಕೆಲವೇ ವರ್ಷಗಳ ಹಿಂದೆ ನಮ್ಮೊಟ್ಟಿಗೇ ಇದ್ದರು. ಅವರು ಬೇರೆ ಯಾರೂ ಅಲ್ಲ ಡಾ. ವೇದವ್ಯಾಸ ಶ್ರೀನಿವಾಸ ಆಚಾರ್ಯ, ಅರ್ಥಾತ್ ರಾಷ್ಟ್ರೀಯ ಸ್ವಯಂಸೇವಕ ಸಂಘ(ಆರ್‌ಎಸ್‌ಎಸ್) ಮತ್ತು ಭಾರತೀಯ ಜನ ಸಂಘ ಹಾಗೂ ಭಾರತೀಯ ಜನತಾ ಪಾರ್ಟಿಯ ಮೇರು ವ್ಯಕ್ತಿಗಳಲ್ಲಿ ಒಬ್ಬರಾಗಿದ್ದ ಡಾ. ವಿ.ಎಸ್. ಆಚಾರ್ಯ.

ಆಚಾರ್ಯರು ಪವಿತ್ರ ಪುಣ್ಯಭೂಮಿ ಶ್ರೀಕೃಷ್ಣನ ಆಡುಂಬೋಲ ಉಡುಪಿಯಲ್ಲಿ ಹುಟ್ಟಿದ್ದು 1940ರ ಜುಲೈ 6ರಂದು. ಜೀವನದುದ್ದಕ್ಕೂ ಸತ್ಯ, ನಿಷ್ಠೆ, ಧರ್ಮಕ್ಕಾಗಿ ದುಡಿದ ಅವರು ಮಡಿಯುವ ತನಕ ನಿಷ್ಠೆ, ಧೈಯ, ಮುಗ್ಧತೆ, ಪಾರದರ್ಶಕತೆ ಮತ್ತು ಕರ್ತವ್ಯ ಪರತೆ ಹಾಗೂ ಪಾವಿತ್ರ್ಯತೆಯನ್ನು ಉಳಿಸಿಕೊಂಡವರು.

ಉಡುಪಿಯ ಅಷ್ಟಮಠಗಳ ಯಾವುದಾದರೂ ಒಂದು ಮಠಕ್ಕೆ ಶ್ರೀಗಳಾಗಲು ಸೂಕ್ತ ವ್ಯಕ್ತಿಯೆಂದರೆ ಡಾ. ವಿ.ಎಸ್. ಆಚಾರ್ಯ ಅವರು ಎಂದು ಅವರ ಒಡನಾಡಿಗಳು ಹೇಳುತ್ತಿದ್ದುದುಂಟು. ಅಂತಹ ಅಪೂರ್ವ ವಿದ್ವತ್ತು, ಆಚಾರ, ವಿಚಾರ ಆಚಾರ್ಯರದ್ದಾಗಿತ್ತು.

ನನ್ನ ಮತ್ತು ಡಾ. ಆಚಾರ್ಯ ಅವರ ಪರಿಚಯ ಸುದೀರ್ಘವಾಗಿತ್ತು. 1985ರಿಂದಲೂ ನಾನವರನ್ನು ಬಲ್ಲೆ. ಅವರ ಆದರ್ಶಗಳಿಗೆ ಮಾರು ಹೋದವರಲ್ಲಿ ನಾನೂ ಒಬ್ಬ. ನಾನು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನಲ್ಲಿ 1985ರಲ್ಲಿ ಪೂರ್ಣಕಾಲಿಕ ಕಾರ್ಯಕರ್ತನಾಗಿದ್ದಾಗ ಮೊದಲಿಗೆ ಈ ಮೇರು ವ್ಯಕ್ತಿತ್ವದ ಡಾ. ವಿ.ಎಸ್. ಆಚಾರ್ಯರನ್ನು ಖುದ್ದು ಭೇಟಿ ಮಾಡುವ ಅವಕಾಶ ಲಭಿಸಿತ್ತು. ಸದಾ ಹಸನ್ಮುಖೀ, ಸದಾ ಕ್ರಿಯಾಶೀಲರು ಮತ್ತು ಚೈತನ್ಯಶೀಲ ಬುದ್ಧಿಜೀವಿ, ಮಿಗಿಲಾಗಿ ಉತ್ಸಾಹದ ಚಿಲುಮೆಯಂತಿದ್ದರು ನಮ್ಮ ಆಚಾರ್ಯ.

ಮೃದುಭಾಷಿ, ಸರಳ ಜೀವಿ, ಊಹಾತೀತರಾಗಿದ್ದ ಅವರು, ವಿನಯಶೀಲತೆಗೆ ಮತ್ತೊಂದು ಹೆಸರಾಗಿದ್ದರು; ಅವರು ಎಂದೂ ಅಬ್ಬರ ಮಾಡಿದವರಲ್ಲ. ಎಲೆ ಮರೆಯ ಕಾಯಿಯಂತೆ ಜನ ಸೇವೆ ಮಾಡುತ್ತಿದ್ದವರು.

ಜನ ನಾಯಕರಾಗಿ ಅವರು ಅಕಳಂಕವೀರರಾಗಿದ್ದರು. ಯಾರೂ ಅವರ ಕಾರ್ಯವಿಧಾನದ ಬಗ್ಗೆ ಎಂದೂ ಬೊಟ್ಟು ಮಾಡಿ ತೋರಿಸಿದ್ದಿಲ್ಲ. ಅಷ್ಟು ಅಚ್ಚುಕಟ್ಟಾದ, ಪಾರದರ್ಶಕವಾದ ಕಾರ್ಯವೈಖರಿ ಅವರದು. ಡಾ. ವಿ.ಎಸ್. ಆಚಾರ್ಯರು ಮೊದಲಿಗೆ ಭಾರತೀಯ ಜನ ಸಂಘವನ್ನು, ಅನಂತರ ಬಿಜೆಪಿಯನ್ನು ರಾಜ್ಯದಲ್ಲಿ ಬಲಿಷ್ಠವಾಗಿ ಕಟ್ಟುವಲ್ಲಿ ಬಹುವಾಗಿ ಶ್ರಮಿಸಿದವರು. ತಾಯಿ ಹೃದಯದ ಆಚಾರ್ಯರು ತಮ್ಮ ವೃತ್ತಿ ಬದುಕಿನಲ್ಲೂ ವೈದ್ಯರಾಗಿ ಬಡಜನರ ಕಷ್ಟಕ್ಕೆ ಮಿಡಿಯುತ್ತಿದ್ದರು. ಸಮಾಜದ ಕೆಳ ಹಂತದ ಮತ್ತು ದುರ್ಬಲ ವರ್ಗದ ರೋಗಿಗಳ ಕಣ್ಮಣಿಯಾಗಿದ್ದರು. ಅವರೆಲ್ಲರೂ ಆಚಾರ್ಯರನ್ನು ತಮ್ಮ ಭಾಗದ ದೇವರೆಂದೇ ಕಾಣುತ್ತಿದ್ದರು.

ಆಚಾರ್ಯರು ಹಲವು ಪ್ರಥಮಗಳ ಗರಿಯನ್ನು ತಮ್ಮ ಮಕುಟಕ್ಕೆ ಧರಿಸಿದವರು. ಅವರು ಉಡುಪಿ ಪುರಸಭೆಯ ಅತ್ಯಂತ ಕಿರಿಯ ಅಧ್ಯಕ್ಷರಾಗಿ, ದೇಶದಲ್ಲೇ ಒಂದು ದಾಖಲೆಯನ್ನು ಬರೆದರು. ಆಚಾರ್ಯರ ಕಾರ್ಯಕಾಲದಲ್ಲಿ ಉಡುಪಿ ಪುರಸಭೆ ಅತ್ಯುತ್ತಮ ಆಡಳಿತಕ್ಕಾಗಿ ರಾಷ್ಟ್ರಪತಿಯವರ ಪ್ರಶಸ್ತಿಗೂ ಭಾಜನವಾಗಿತ್ತು. ಮನೆಗಳಿಗೆ ಕೊಳವೆಯ ಮೂಲಕ ನೀರು ಪೂರೈಸಿದ ಪ್ರಥಮ ಪುರಸಭೆ ಉಡುಪಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಲು ಡಾ. ಆಚಾರ್ಯರ ದೂರದರ್ಶಿತ್ವವೇ ಕಾರಣವಾಗಿತ್ತು. ತಲೆಯ ಮೇಲೆ ಮಲಹೊರುವ ಅನಿಷ್ಠ ಪದ್ಧತಿಯ ರದ್ದತಿಗೆ ಹೋರಾಡಿದ ಆಚಾರ್ಯರ ಮಾನವೀಯತೆ ಆದರ್ಶಪ್ರಾಯ.

ಡಂಕೆಲ್ ಕರಡು ಎಂದೇ ಜನಪ್ರಿಯವಾಗಿರುವ ಗ್ಯಾಟ್ (ವ್ಯಾಪಾರ ಮತ್ತು ಸುಂಕಗಳ ಮೇಲಿನ ಸಾಮಾನ್ಯ ಒಪ್ಪಂದ)ಗೆ ಸಂಬಂಧಿಸಿದಂತಹ ವಿಷಯಗಳಲ್ಲಿ ಕಾರ್ಮಿಕರಿಗೆ ತರಬೇತಿಯನ್ನು ನೀಡಲು ನಗರಾಭಿವೃದ್ಧಿ ವ್ಯವಹಾರಗಳು ಮತ್ತು ಆರ್ಥಿಕ ವಿಷಯಗಳಲ್ಲಿ ತಜ್ಞರಾಗಿದ್ದ ಡಾ. ಆಚಾರ್ಯರನ್ನು ಬಿಜೆಪಿಯಿಂದ ಆಯ್ಕೆ ಮಾಡಲಾಗಿತ್ತು. ಜನ ಸೇವೆಯಿಂದಲೇ ಜನರಿಗೆ ಹತ್ತಿರವಾಗಿದ್ದವರು ಡಾ. ಆಚಾರ್ಯರು, 1983ರಲ್ಲಿ ತಮ್ಮ ತವರೂರಾದ ಉಡುಪಿಯಿಂದಲೇ ಮೊದಲ ಬಾರಿಗೆ ವಿಧಾನಸಭಾ ಚುನಾವಣೆಯಲ್ಲಿ ಜಯಸಾಧಿಸಿ ವಿಧಾನಸಭೆ ಪ್ರವೇಶಿಸಿದರು. ಸಾರ್ವಜನಿಕ ಪ್ರಾಮುಖ್ಯತೆಯ ವಿಷಯಗಳ ಕುರಿತು ವಿಧಾನಸಭೆಯಲ್ಲಿ ಅವರು ಮಾಡುತ್ತಿದ್ದಂತಹ ಭಾಷಣಗಳು ಅವರ ಅಪಾರ ಅನುಭವ ಮತ್ತು ಸಾರ್ವಜನಿಕ ಜೀವನದಲ್ಲಿ ಅವರಿಗಿದ್ದ ಆಳವಾದ ಜ್ಞಾನವನ್ನು ಪ್ರತಿಬಿಂಬಿಸುತ್ತವೆ.

ಡಾ. ಆಚಾರ್ಯ ಅವರು ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾಗಿಯೂ ಕಾರ್ಯ ನಿರ್ವಹಿಸಿದ್ದರು. ಸಮಸ್ಯೆಗಳ ಆಳವಾದ ಅಧ್ಯಯನದಿಂದ ಅವರು ಪ್ರತಿಪಾದಿಸುತ್ತಿದ್ದ 'ಬೌದ್ಧಿಕವಾಗಿ ಉತ್ತೇಜಿಸುವ' ಭಾಷಣಗಳ ಮೂಲಕ ಅವರು ಚಿಂತಕರ ಚಾವಡಿಯ ಚರ್ಚೆಯನ್ನು ಶ್ರೀಮಂತಗೊಳಿಸುತ್ತಿದ್ದರು.

2008ರ ವಿಧಾನಸಭಾ ಚುನಾವಣೆಯಲ್ಲಿ ಶ್ರೀ ಬಿ.ಎಸ್. ಯಡಿಯೂರಪ್ಪ ಅವರ ನೇತೃತ್ವದಲ್ಲಿ ಬಿಜೆಪಿ ಮೊದಲ ಬಾರಿಗೆ ಸ್ವತಂತ್ರವಾಗಿ ಕರ್ನಾಟಕದಲ್ಲಿ ಅಧಿಕಾರಕ್ಕೆ ಬಂದಾಗ ಡಾ. ವಿ.ಎಸ್. ಆಚಾರ್ಯ ಅವರು ಮಹತ್ತರವಾದ ಗೃಹ ಖಾತೆಯ ಜವಾಬ್ದಾರಿ ಪಡೆದರು. 'ಸಂಪೂರ್ಣ ವೃತ್ತಿಪರತೆ'ಯಲ್ಲಿ ನಂಬಿಕೆ ಇಟ್ಟಿದ್ದ ಡಾ. ಆಚಾರ್ಯ, ಗೃಹ ಇಲಾಖೆಯ ದೈನಂದಿನ ಕಾರ್ಯಚಟುವಟಿಕೆಯಲ್ಲಿ ಎಂದಿಗೂ ಹಸ್ತಕ್ಷೇಪ ಮಾಡುತ್ತಿರಲಿಲ್ಲ. ಅವರು ಸ್ವಯಂ ಅಧ್ಯಯನಿಗಳಾಗಿದ್ದ ಕಾರಣ ಯಾವುದೇ ಅಧಿಕಾರಿಯ ಮೇಲೆ ಅವಲಂಬಿತರೂ ಆಗಿರಲಿಲ್ಲ.

ಡಾ. ವಿ.ಎಸ್. ಆಚಾರ್ಯ ಅವರಿಗೆ ಸದಾ ಬೆಂಬಲವಾಗಿ ನಿಂತಿದ್ದ ಅವರ ಪತ್ನಿ ಶ್ರೀಮತಿ ಶಾಂತಾ ಆಚಾರ್ಯ ಅವರೂ ಸಹ ಹಲವು ಸಾಮಾಜಿಕ ಸಾಂಸ್ಕೃತಿಕ ಆಧ್ಯಾತ್ಮಿಕ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಅವರು ಹಲವು ಶಿಕ್ಷಣ ಸಂಸ್ಥೆಗಳಿಗೆ ಗೌರವ ಮಾರ್ಗದರ್ಶಿಯಾಗಿದ್ದಾರೆ. ಅವರು ಉಚಿತ ಸಾಂಸ್ಕೃತಿಕ ಆಧ್ಯಾತ್ಮಿಕ ಚಿಂತನಾ ತರಗತಿಗಳನ್ನೂ ನಡೆಸುತ್ತಾರೆ, ಅಲ್ಲಿ ನೈತಿಕ ಮತ್ತು ನೈತಿಕ ಮೌಲ್ಯಗಳನ್ನು ಚಿಕ್ಕ ಮಕ್ಕಳಿಗೆ ಕಲಿಸಲಾಗುತ್ತಿದೆ. ಆ ಮೂಲಕ ಭಾರತೀಯ ಸಂಸ್ಕೃತಿ ಪರಂಪರೆಯನ್ನು ಮುಂದಿನ ಪೀಳಿಗೆಗೂ ತಿಳಿಯಪಡಿಸಲಾಗುತ್ತಿದೆ. ಆಚಾರ್ಯ ಅವರ ಮಕ್ಕಳು ರಾಜಕೀಯದಿಂದ ದೂರವೇ ಉಳಿದು, ತಮ್ಮ ವೃತ್ತಿಯಲ್ಲಿ ನಿರತರಾಗಿದ್ದಾರೆ. ಇದು ಆಚಾರ್ಯರ ಸ್ವಾರ್ಥ ರಹಿತ ಬದುಕಿಗೆ ಹಿಡಿದ ಕನ್ನಡಿಯಾಗಿದೆ.

ನಾನೂ ಕೂಡ ಅವರು ಸಚಿವರಾಗಿದ್ದ ಸಂದರ್ಭದಲ್ಲಿ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವನಾಗಿ ಸಂಪುಟದಲ್ಲಿ ಅವರೊಟ್ಟಿಗೆ ಕಾರ್ಯ ನಿರ್ವಹಿಸಿದ್ದು ನನ್ನ ಸೌಭಾಗ್ಯವೆಂದೇ ಪರಿಭಾವಿಸುತ್ತೇನೆ. ನನಗೆ ಅವರು ಹಲವು ಸಂದರ್ಭಗಳಲ್ಲಿ ಮಾರ್ಗದರ್ಶನ ಮಾಡಿದ್ದಾರೆ. ತಮ್ಮ ವಿವೇಚನಾಯುಕ್ತ ನೇರ, ನಿಷ್ಠುರ ಸಲಹೆ ನೀಡಲು ಎಂದೂ ಹಿಂಜರಿಯುತ್ತಿರಲಿಲ್ಲ. ಸಂಪುಟದಲ್ಲಿ ಅವರು ಹಿರಿಯ ಸಹೋದರ ಅಥವಾ ಕುಟುಂಬದ ಹಿರಿಯ ಸದಸ್ಯರಂತೆ ಇದ್ದರು. ಅವರ ಸೌಹಾರ್ದಯುತ ಸ್ವಭಾವದಿಂದ ಅವರು ಸಂಪುಟದ ಪ್ರತಿಯೊಬ್ಬ ಸದಸ್ಯರ ಪ್ರೀತಿ, ವಾತ್ಸಲ್ಯ ಮತ್ತು ಮೆಚ್ಚುಗೆಗೆ ಪಾತ್ರರಾಗಿದ್ದರು.

ಇಂದು ಡಾ. ವೇದವ್ಯಾಸ ಶ್ರೀನಿವಾಸ ಆಚಾರ್ಯರು ನಮ್ಮೊಂದಿಗಿಲ್ಲ. ಆದರೆ ಅವರ ಕಾರ್ಯ, ಕೊಡುಗೆ ಸದಾ ಸ್ಮರಣೆಯಲ್ಲಿರುತ್ತದೆ. ಅವರ ಬದುಕೇ ಒಂದು ಆದರ್ಶ. ಅನುಕರಣೀಯ.

# ‘ಮಾಸದ ಮಾಧುರ್ಯ’ 75ನೇ ಕಾರ್ಯಕ್ರಮದಲ್ಲಿ ‘ಶ್ರದ್ಧಾ’ ನಾಟಕ





ಮಾಸದ ಮಾಧುರ್ಯ'' ಜಗನ್ನಾಥ ಬಳಗದ ವತಿಯಿಂದ ಮೂಡಿಬರುತ್ತಿರುವ ಉತ್ತಮ ಕಾರ್ಯಕ್ರಮವಾಗಿದ್ದು, ಪ್ರತಿ ಕಲಾ ಪ್ರಕಾರವೂ ಪ್ರೇಕ್ಷಕರನ್ನು ಆಕರ್ಷಿಸುತ್ತಾ ಬಂದಿದೆ.

ದಿ. 02.07.2023ರಂದು ''ಜಗನ್ನಾಥ ಬಳಗ'' ಆಯೋಜಿಸಿದ ''ಶ್ರದ್ಧಾ'' ಎಂಬ ನಾಟಕ ಅತ್ಯಂತ ಯಶಸ್ವಿಯಾಗಿ ಆಗಮಿಸಿದ ಪ್ರತಿಯೊಬ್ಬ ಕಲಾಭಿಮಾನಿಯಿಂದ ಪ್ರಶಂಸೆಗೆ ಪಾತ್ರವಾಗಿತ್ತು. ಬೆಂಗಳೂರಿನ ಶ್ರೀ ಕೆ.ವಿ. ಸುಬ್ಬಣ್ಣ ಅಪ್ತರಂಗಮಂದಿರದ ಕಲಾವಿದರು ಪ್ರಸ್ತುತ ಪಡಿಸಿದ ''ಶ್ರದ್ಧಾ'' ನಾಟಕ ರಚನೆ ಮಾಡಿದವರು ಶ್ರೀ ಶ್ರೀನಿವಾಸ ವೈದ್ಯ, ರಂಗ ರೂಪಕ್ಕೆ ತಂದು ನಿರ್ದೇಶನ ಮಾಡಿವರು ಶ್ರೀ ಬಿ.ಆರ್. ಗೋಪಿನಾಥ್. ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯ ನಂತರದ ದಿನಗಳಲ್ಲಿ ಅವಿಭಕ್ತ ಕುಟುಂಬದಲ್ಲಿಯ ತಂದೆ ಮಕ್ಕಳ ಸಂಬಂಧ ಹೇಗೆ ಇರುತ್ತಿತ್ತು, ತಂದೆ- ತಾಯಿ ಮಕ್ಕಳನ್ನು ಹೇಗೆ ಕಟ್ಟುನಿಟ್ಟಾಗಿ ಬೆಳೆಸುತ್ತಿದ್ದರು, ಸಂಸ್ಕೃತಿ, ಸಂಸ್ಕಾರ ಮಕ್ಕಳಿಗೆ ಜೀವನದ ಕಷ್ಟ ಕಾರ್ಪಣ್ಯದ ಅರಿವು, ಶ್ರಮ ಹಾಗೂ ಸಮಯದ ಬೆಲೆ, ಶಿಕ್ಷಣ, ಹೊರಗೆ ಕಾಠಿಣ್ಯ, ಮನದೊಳಗೆ ಕರುಣೆ, ಪ್ರೀತಿ, ವಾತ್ಸಲ್ಯ ಇಷ್ಟೆಲ್ಲಾ ಸಂದೇಶವನ್ನು ಕೇವಲ 45 ನಿಮಿಷದಲ್ಲಿ ಪ್ರಸ್ತುತಪಡಿಸಿದರ ಕಲಾನೈಪುಣ್ಯತೆ ಪ್ರತಿ ನಿಮಿಷವನ್ನು ಮಂತ್ರಮುಗ್ಧಗೊಂಡ ಪ್ರೇಕ್ಷಕರ ಭಾವನೆಗಳು ನಾಟಕ ಮುಗಿದು ಒಂದು ಘಂಟೆಯವರೆಗೂ ಕಲಾವಿದರನ್ನು ನಾಟಕದ ವಸ್ತುವನ್ನು ಹೊಗಳಲಿಕ್ಕೆ ಮೀಸಲಿಟ್ಟಂತೆ ಇತ್ತು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಬೆಂಗಳೂರು ಉತ್ತರ ಜಿಲ್ಲಾಧ್ಯಕ್ಷರಾದ ಶ್ರೀ ಬಿ. ನಾರಾಯಣ ಅವರು ಕಾರ್ಯಕ್ರಮದ ಆರಂಭದಿಂದ ಕೊನೆಯ ವರೆಗೂ ಕುಳಿತು ನಾಟಕದ ಪ್ರತಿಯೊಂದು ಸನ್ನಿವೇಶವನ್ನು ಕಲಾವಿದರ ನಟನೆಯನ್ನು ಪ್ರಶಂಸಿಸಿದರು. ಈ ನಾಟಕವನ್ನು ನಾನು ನಡೆಸುತ್ತಿರುವ ಶಿಕ್ಷಣ ಸಂಸ್ಥೆಯಲ್ಲಿ ಆಯೋಜಿಸುತ್ತೇನೆ ಎಂದು ಹೇಳಿದರು.

''ಮಾಸದ ಮಾಧುರ್ಯ'' ಕಾರ್ಯಕ್ರಮ ನವೆಂಬರ್ 2014ರಂದು ಆರಂಭವಾಯಿತು. ಕರೋನಾ ಅವಧಿಯನ್ನು ಹೊರತುಪಡಿಸಿ ನಿರಂತರ ಪ್ರತಿ ತಿಂಗಳ ಮೊದಲ ಭಾನುವಾರ ಈ ಕಾರ್ಯಕ್ರಮ ಜರುಗಿದೆ. ಮೊದಲ ಕಾರ್ಯಕ್ರಮದಲ್ಲಿ ದಿ. ಮಾಸ್ಟರ್ ಹಿರಣ್ಣಯ್ಯನವರು ಇದ್ದು ''ಒಂದು ರಾಜಕೀಯ ಕಾರ್ಯಾಲಯದಲ್ಲಿ ಇಂಥಹ ಪ್ರಯತ್ನ ರಾಜಕೀಯ ಪೂರ್ತಿಯಾಗಿ ಕೆಟ್ಟಿಲ್ಲ ಎನ್ನುವುದಕ್ಕೆ ಸಾಕ್ಷಿ'' ಎಂದು ಹೇಳಿದರು. ರಾಜಕೀಯದ ವೇದಿಕೆಯನ್ನು ಪ್ರತಿ ತಿಂಗಳ ಮೊದಲ ಭಾನುವಾರ ರಂಗ ವೇದಿಕೆಯನ್ನಾಗಿ ಮಾಡಿದ್ದು ''ಜಗನ್ನಾಥ ಭವನ''ದ ಸುತ್ತ ಮುತ್ತಲ ಜನರು, ಇಂದಿಗೂ ತಮ್ಮ ಕಲಾಪ್ರೀತಿಯನ್ನು ತೋರಿಸುತ್ತಿರುವುದು ಆಯೋಜಕರಿಗೆ ಹೆಮ್ಮೆಯಾಗಿದೆ. ಈ ವೇದಿಕೆಯ ಮೇಲೆ ಪಂ. ವೆಂಕಟೇಶ ಹವಾಲ್ದಾರ್, ಅಪ್ಪಗೆರೆ ತಿಮ್ಮರಾಜು ರಂಥ ನಾಡಿನ ಪ್ರಸಿದ್ಧ ಕಲಾವಿದರು ತಮ್ಮ ಕಲಾಪ್ರದರ್ಶನ ಮಾಡಿದ್ದಾರೆ. ಗಂಡು ಮೆಟ್ಟಿನ ಕಲೆಯಾದ ಯಕ್ಷಗಾನ, ತೆಂಕು ಹಾಗೂ ಬಡಗು, ಭರತನಾಟ್ಯ, ಕೂಚುಪುಡಿ, ತಾಳ ಮದ್ದಳೆ, ಹರಿಕಥೆ, ಕವಿಗೋಷ್ಠಿ, ಕಾವ್ಯವಾಚನ, ನಾಟಕ, ಮಹಿಳಾ ತಂಡದಿಂದ ಯಕ್ಷಗಾನ, ಅಪರೂಪದ ಶಿಳ್ಳೆಯ ಮೂಲಕ ಕರ್ನಾಟಕ ಸಂಗೀತ ಪ್ರದರ್ಶನ ಹೀಗೆ ಹತ್ತಾರು ಕಲಾ ಪ್ರಕಾರದ ಕಲಾವಿದರು ಕಲಾಪ್ರತಿಭೆಯನ್ನು ಪ್ರಸ್ತುತಪಡಿಸಿದ್ದಾರೆ.

75ನೇ ಕಾರ್ಯಕ್ರಮ ''ಶ್ರದ್ಧಾ'' ನಾಟಕ ನಿಜವಾಗಿಯೂ ಪ್ರತಿಯೊಬ್ಬ ಪ್ರೇಕ್ಷಕರಿಂದ ಅಭಿನಂದನೆಗೆ ಸ್ವೀಕಾರವಾಗಿದ್ದು ನಮ್ಮ ಶ್ರಮಕ್ಕೆ ಸಿಕ್ಕ ಅಭಿನಂದನಾ ಪತ್ರವೂ ಆಯಿತು. ರಾಜ್ಯ ಕಾರ್ಯಾಲಯ ಕಾರ್ಯದರ್ಶಿ ಶ್ರೀ ಲೋಕೇಶ್ ಅಂಬೆಕಲ್ಲು, ಜಗನ್ನಾಥ ಬಳಗದ ಸಂಚಾಲಕರಾದ ಶ್ರೀ ದತ್ತಗುರು ಹೆಗಡೆ, ಸಂಸ್ಕಾರ ಭಾರತೀಯ ಸಂಘಟನಾ ಕಾರ್ಯದರ್ಶಿಗಳಾದ ಶ್ರೀ ರಾಮಚಂದ್ರ ರವರು ಉಪಸ್ಥಿತರಿದ್ದರು.

**ಚರ್ಚೆಗೊಂದು ಸಾಲು...**

**ಸಮಾಜದ ಸಾಮರಸ್ಯ ಕೆಡುವುದಕ್ಕೆ ಸರ್ಕಾರ ಯೋಜನೆಗಳು ಕಾರಣವಾಗಬಹದು...**

# ಮನ್ ಕಿ ಬಾತ್

102

## ಭಾರತ ಪ್ರಜಾಪ್ರಭುತ್ವದ ತಾಯಿ



ದೇಶದ ಇತಿಹಾಸದಲ್ಲಿ ತುರ್ತು ಪರಿಸ್ಥಿತಿಯನ್ನು ಹೇರಲಾಗಿದ್ದ ಅವಧಿ ಕರಾಳ ದಿನಗಳಾಗಿವೆ. ಆ ಸಮಯದಲ್ಲಿ ಪ್ರಜಾಪ್ರಭುತ್ವ ಬೆಂಬಲಿಸಿದವರಿಗೆ ಚಿತ್ರಹಿಂಸೆಯನ್ನು ನೀಡಲಾಯಿತು. ಭಾರತೀಯರ ಮೇಲೆ ತುರ್ತು ಪರಿಸ್ಥಿತಿ ಹೇರಿದ್ದ ಜೂನ್ 25ನೇ ತಾರೀಖನ್ನು ಎಂದಿಗೂ ಮರೆಯಲಾಗದು ಎಂದು ಪ್ರಧಾನಿ ಶ್ರೀ ನರೇಂದ್ರ ಮೋದಿ ಹೇಳಿದರು.

102ನೇ 'ಮನ್ ಕಿ ಬಾತ್' ಉದ್ದೇಶಿಸಿ ಮಾತನಾಡಿದ ಪ್ರಧಾನಿ ಶ್ರೀ ನರೇಂದ್ರ ಮೋದಿ, ಭಾರತ ಪ್ರಜಾಪ್ರಭುತ್ವದ ತಾಯಿಯಾಗಿದ್ದು, ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಎತ್ತಿಹಿಡಿಯುತ್ತದೆ. ತುರ್ತು ಪರಿಸ್ಥಿತಿ ಹೇರಿದ್ದ ಜೂನ್ 25ನ್ನು ಎಂದಿಗೂ ಮರೆಯಲು ಸಾಧ್ಯವಿಲ್ಲ. ಇದು ಭಾರತದ ಇತಿಹಾಸದಲ್ಲಿ ಕರಾಳ ದಿನಗಳಾಗಿವೆ. ಪ್ರಜಾಪ್ರಭುತ್ವದ ಬೆಂಬಲಿಗರನ್ನು ಹಿಂಸಿಸಲಾಯಿತು, ಅಂದಿನ ಪರಿಸ್ಥಿತಿಯನ್ನು ನೆನಪಿಸಿಕೊಂಡರೆ, ಇಂದಿಗೂ ಮೈ ನಡುಗುತ್ತದೆ ಎಂದು ಹೇಳಿದರು.

ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭದಲ್ಲಿರುವ ನಾವು ಇಂತಹ ಘಟನೆಗಳ ಬಗ್ಗೆ ಗಮನಹರಿಸಬೇಕು. ಯುವ ಪೀಳಿಗೆಗೆ ಈ ಘಟನೆಗಳು ಪ್ರಜಾಪ್ರಭುತ್ವದ ಮಹತ್ವ ತಿಳಿಸುತ್ತವೆ ಎಂದು ಹೇಳಿದರು.

## ನಿರ್ವಹಣೆಗೆ ಮೆಚ್ಚುಗೆ



ನೈಸರ್ಗಿಕ ವಿಕೋಪಗಳನ್ನು ಎದುರಿಸಲು ಭಾರತದ ಹೆಚ್ಚುತ್ತಿರುವ ಸಾಮರ್ಥ್ಯವನ್ನು ಶ್ಲಾಘಿಸಿದ ಪ್ರಧಾನಿ ಶ್ರೀ ಮೋದಿ, ಬಿಹರ್‌ಜಾಯ್ ಚಂಡಮಾರುತದಿಂದ ಉಂಟಾದ ತೊಂದರೆಯಿಂದ ಗುಜರಾತ್, ರಾಜಸ್ಥಾನ ಜನ ಶೀಘ್ರವಾಗಿ ಚೇತರಿಸಿಕೊಳ್ಳುತ್ತಾರೆ ಎಂಬ ವಿಶ್ವಾಸವಿದೆ. ಕಳೆದ ಕೆಲವು ವರ್ಷಗಳಲ್ಲಿ ಭಾರತದ ನಿಷತ್ತು ನಿರ್ವಹಣಾ ಸಾಮರ್ಥ್ಯ ಹೆಚ್ಚಿದೆ ಎಂದು ತಿಳಿಸಿದರು.

## ನ್ಯೂಯಾರ್ಕ್‌ನಲ್ಲಿ ಯೋಗ ದಿನಾಚರಣೆ

Yoga for Harmony & Peace

ಜೂನ್ 20ರಿಂದ ಪ್ರಧಾನಿ ಶ್ರೀ ಮೋದಿ ಅಮೆರಿಕ ಪ್ರವಾಸ ಕೈಗೊಳ್ಳಲಿದ್ದು, ಈ ವೇಳೆ ನ್ಯೂಯಾರ್ಕ್‌ನಲ್ಲಿರುವ ವಿಶ್ವಸಂಸ್ಥೆಯ ಪ್ರಧಾನ ಕಚೇರಿಯಲ್ಲಿ ನಡೆಯುವ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಈ ಕಾರ್ಯಕ್ರಮದಲ್ಲಿ 150ಕ್ಕೂ ಹೆಚ್ಚು ದೇಶಗಳು ಭಾಗಿಯಾಗುವ ಸಾಧ್ಯತೆ ಇದೆ. ಈ ಬಗ್ಗೆ ಮಾತನಾಡಿರುವ ಪ್ರಧಾನಿ ಮೋದಿ, ಪ್ರತಿಯೊಬ್ಬರೂ ಜೀವನದಲ್ಲಿ ಯೋಗವನ್ನು ಅಳವಡಿಸಿಕೊಳ್ಳಬೇಕು. ಯೋಗ ದಿನವನ್ನು ಎಲ್ಲರೂ ಆಚರಣೆ ಮಾಡುವಂತೆ ಮನವಿ ಮಾಡಿದರು.

# ಜಿಲ್ಲಾ ಮಟ್ಟದ ಕಾರ್ಯಕರ್ತರ ಸಭೆ





ಚಿಕ್ಕಬಳ್ಳಾಪುರ




ದಕ್ಷಿಣ ಕನ್ನಡ



ರಾಮನಗರ



ಶಿವಮೊಗ್ಗ

*ಕಾಲೇ ವರ್ಷಂತು ಪರ್ಜನ್ಯಃ*



# ಪ್ರಜಾಪ್ರಭುತ್ವದಿಂದ - ಲೋಕ ಕಲ್ಯಾಣ, ಸರ್ವಾಧಿಕಾರ - ಲೋಕ ಕಂಟಕ

ಪ್ರಜಾಪ್ರಭುತ್ವ ಒಂದು ಸಂಸ್ಕೃತಿ, ಸಭ್ಯತೆ, ಪ್ರವೃತ್ತಿ, ಪ್ರಕೃತಿ. ಇದು ನಿರಂತರವಾಗಿ ಉಳಿಯಲು, ಬೆಳೆಯಲು ಜಾಗೃತಿ ಸದಾಕಾಲ ಇರಬೇಕು. ಸರ್ವಾಧಿಕಾರಿ ಮನೋಭಾವ ಒಂದೇ ದಿನ ಅಥವಾ ಹಲವಾರು ದಿನಗಳಲ್ಲಿ ಬೆಳೆಯುವಂತಹದ್ದಲ್ಲ. ಸೈನ್ಯದ ಆಡಳಿತದ ಸರ್ವಾಧಿಕಾರಕ್ಕೂ, ಪ್ರಜಾಪ್ರಭುತ್ವದಲ್ಲಿ ''ಸರ್ವಾಧಿಕಾರ'' ಜಾರಿಗೆ ಬರುವುದಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಕ್ಷಿಪ್ರ ಸೈನಿಕಾಚರಣೆಯಿಂದ ಸರ್ವಾಧಿಕಾರಿ ಉದಯವಾಗುತ್ತಾನೆ. ಅಷ್ಟೇ ಬೇಗ ಅಸ್ತಂಗತನಾಗಲೂಬಹುದು. ಕಾರಣ ಸೈನ್ಯ, ಸದಾಕಾಲ ಮೇಲಿನಿಂದ ಬರುವ ಆದೇಶ ಪಾಲನೆಗೆ ಸೈನಿಕ ಬದ್ಧನಾಗಿರುತ್ತಾನೆ. ಆತನ ಮಾನಸಿಕತೆಯಲ್ಲಿ ಪರ್ಯಾಯಕ್ಕೆ ಅವಕಾಶವಿಲ್ಲ.

ಪ್ರಜಾಪ್ರಭುತ್ವದಲ್ಲಿ ಸಾಮೂಹಿಕ ಚರ್ಚೆಯ ನಂತರ ತೀರ್ಮಾನ, ನಂತರ ಕಾರ್ಯಪ್ರವೃತ್ತಿ. ಇದು ಸಹಜ ಕ್ರಿಯೆ. ಸರ್ವಾಧಿಕಾರಿ ಮಾನಸಿಕತೆಯಲ್ಲಿ ಸ್ವಯಂ ತೀರ್ಮಾನ, ನಂತರ ಕಾರ್ಯಪ್ರವೃತಿ, ನಂತರ ಚರ್ಚೆ, ಸಮಾಲೋಚನೆ. ಇದು ಅಲ್ಲಿ ಸಹಜ. ಹಾಗಾಗಿ ಸರ್ವಾಧಿಕಾರಿ ಪ್ರವೃತ್ತಿ ಉದಯವಾಗುವುದು ಪ್ರಜಾಪ್ರಭುತ್ವ ದುರ್ಬಲವಾದಾಗ. ಪ್ರಜೆಗಳಲ್ಲಿ, ಜನರಲ್ಲಿ ಮತದಾರರಲ್ಲಿ ಜಾಗೃತಿ ಕ್ಷೀಣಿಸಿದಾಗ. ಸರ್ವಾಧಿಕಾರದ ಬೀಜ ಪ್ರಜಾಪ್ರಭುತ್ವದ ಪತನದಲ್ಲಿ ಇದೆ. ಸರ್ವಾಧಿಕಾರ ಬೆಳೆದು ಹೆಮ್ಮರವಾಗಿ ತನ್ನ ಬಾಹುಗಳನ್ನು ಚಾಚಿ, ತನ್ನ ಕಾಲಡಿಯಲ್ಲಿ ಪ್ರಜಾಪ್ರಭುತ್ವ ಹೊಸಕಿ ಹಾಕಲು ಕಾರಣ ''ಪ್ರಜಾಪ್ರಭುತ್ವದ'' ಪೋಷಕರಲ್ಲಿ ಬರುವ ದುರ್ಬಲತೆ, ವಿಕೃತಿಗಳೇ. ತಾನು ಸಂಪಾದಿಸಿರುವ ಜ್ಞಾನ, ಶಕ್ತಿ ಎಲ್ಲವೂ ತನಗಾಗಿ ಮಾತ್ರ ಅಲ್ಲ ಎಂದು ಭಾವಿಸಿ, ಅದು ಸಮಾಜಕ್ಕಾಗಿ ಎಂದು ಭಾವಿಸಿದರೆ ಲೋಕ ಕಲ್ಯಾಣವಾಗುತ್ತದೆ. ಇಲ್ಲದಿದ್ದಲ್ಲಿ ಲೋಕ ಕಂಟಕವಾಗುತ್ತದೆ.

''ವಿದ್ಯಾ ವಿವಾದಾಯ, ಧನಂ ರುದಾಯ, ಶಕ್ತಿ ಪರೇಷಾಂ ಪರಿಪೀಡನಾಯ ಖಲಸ್ಯ ಸಾಧೋ ವಿಪರೀತ ಮೇತದ್, ಜ್ಞಾನಾಯ, ದಾನಾಯ ಚ ರಕ್ಷಣಾಯ''

ವಿದ್ಯೆಯನ್ನು, ಜ್ಞಾನವನ್ನು ವಿವಾದಕ್ಕೆ ಬಳಸುವುದು, ಸಂಪನ್ಮೂಲವನ್ನು ಪ್ರತಿಷ್ಠೆಗೆ, ಅಹಂಕಾರಕ್ಕೆ ಭಾವಿಸುವುದು ಮತ್ತು ಪರರ ಪೀಡನೆ ಮಾಡಲು ಶಕ್ತಿಯ ಉಪಯೋಗ ಇದು ದುಷ್ಟ ಸ್ವಭಾವದ ''ಸರ್ವಾಧಿಕಾರಿಗಳ ನೀತಿ-ರೀತಿ''. ಇದಕ್ಕೆ ವಿರುದ್ಧವಾಗಿ ವಿದ್ಯೆ, ಜ್ಞಾನವನ್ನು ಪ್ರಪಂಚ ತಿಳಿಯಲು, ಸಂಪನ್ಮೂಲವನ್ನು ಬಡತನ, ದುರ್ಬಲರ ಏಳಿಗೆಗಾಗಿ ಉಪಯೋಗಿಸುವುದು ಹಾಗೂ ಶಕ್ತಿಯನ್ನು ದೇಶ, ಧರ್ಮ, ಸಮಾಜ ರಕ್ಷಣೆಗೆ ಉಪಯೋಗಿಸುವುದು ''ಪ್ರಜಾಪ್ರಭುತ್ವದ ಸಂಸ್ಕೃತಿ, ಪ್ರವೃತ್ತಿ, ನೀತಿ-ರೀತಿ''. ಅನಾದಿ ಕಾಲದಿಂದ ಇಂದಿನವರೆಗೆ ಸಾವಿರಾರು ಉದಾಹರಣೆಗಳನ್ನು ನಮ್ಮ ಸಮಾಜ ಕಂಡಿದೆ.

ಸರ್ವಾಧಿಕಾರಿಗಳು ವಿಜೃಂಭಿಸುತ್ತಿದ್ದಾರೆ, ಆದರೆ ಉಳಿದಿಲ್ಲ. ತಾತ್ಕಾಲಿಕವಾಗಿ ಮೆರೆದಿದ್ದಾರೆ. ಜನರನ್ನು ತುಳಿದು ನೋವು ನೀಡಿದ್ದಾರೆ. ಆದರೆ ಯಾವ ಸರ್ವಾಧಿಕಾರಿಯನ್ನೂ ಜನ ಒಪ್ಪಿಲ್ಲ, ತಿರಸ್ಕರಿಸಿದ್ದಾರೆ, ಕಿತ್ತು ಒಗೆದಿದ್ದಾರೆ. ಮರೆತಿಲ್ಲ ಅಷ್ಟೇ.

ಕುರುಕ್ಷೇತ್ರ ಯುದ್ಧ ಸಂಭವಿಸಿತು, ಸಾವು ನೋವುಗಳಾದವು, ರಾಜ ಮಹಾರಾಜರ ಹತ್ಯೆ ಆಯಿತು. ಸರ್ವಾಧಿಕಾರಿ ದುರ್ಯೋಧನನ ಹಠದ ಕಾರಣದಿಂದ ಇದೆಲ್ಲ ಸಂಭವಿಸಿತು. ಪ್ರಜಾಪ್ರಭುತ್ವದ ಮೌಲ್ಯಗಳ ರಕ್ಷಣೆಗಾಗಿ ಕಟಿಬದ್ಧ ಸಮಾಜ ನಿರ್ಮಾಣವಾಗುವ ತನಕ ಪದೇ ಪದೇ ಇದು ಸಂಭವಿಸಿದೆ. ಎಲ್ಲರಿಗೂ ಸಮಾನ ಅಧಿಕಾರ ಎಂದು ಹೇಳುತ್ತಲೇ ಸರ್ವಾಧಿಕಾರ ಉದಯವಾಗಿದೆ. ಚರ್ಚೆ, ಸರಿಯಾದ ವಾದ-ವಿವಾದ, ಅಭಿಪ್ರಾಯ ಭೇದಗಳ ಮೂಲಕ ''ಸಂಘಟನೆಗಳಲ್ಲಿ ಪ್ರಜಾಪ್ರಭುತ್ವ'' ಇರುವ ತನಕ ದೇಶದ ಪ್ರಜಾಪ್ರಭುತ್ವ ಉಳಿಯುತ್ತೆ. ಒಮ್ಮೆ ಸಂಘಟನೆ, ಪಕ್ಷಗಳಲ್ಲಿ ''ಆಂತರಿಕ ಪ್ರಜಾಪ್ರಭುತ್ವ ಕ್ಷೀಣವಾಯಿತೆಂದರೆ'' ಸರ್ವಾಧಿಕಾರ ಉದಯವಾಗುತ್ತೆ. ವಾದೇ ವಾದೇ ಜಾಯತೇ ತತ್ವ ಭೋಧಾ: ಆಗುವಲ್ಲಿ ವಾದ - ವಿವಾದವಾಗುತ್ತೆ, ಶಕ್ತಿ - ಪರಪೀಡನೆ ಆಗುತ್ತೆ, ಹಣ, ಸಂಪನ್ಮೂಲ-ದುರ್ವ್ಯಯವಾಗುತ್ತೆ - ಹಾಗಾಗಿ ಜಾಗೃತಿ, ಜಾಗೃತಿ, ಜಾಗೃತಿ... ಇದೇ ಇಂದಿನ ಧರ್ಮ.

ದಿವಸ್ಪತಿ

**KAMALA PATHA** Monthly in Kannada
Date of Publication : 8th of Every Month
Price : ₹ 10/- Pages : 44

**RNI No.:KARKAN/2023/84034 REGISTERED NEWSPAPER UNDER No. KKRNA/BGE/1173/2023-25**
**LICENCED TO POST WITHOUT PAYMENT - LICENCE No. PMG BG/WPP-408/2023-2025**
**OFFICE OF POSTING : BENGALURU PSO - 560 025 DATE OF POSTING : 10th / 15th / 20th OF EVERY MONTH**

**KAMALA PATHA** – Printed and Published by **H.S. GOPINATH** on behalf of **SAMAGRA VIKASA TRUST**, Printed at **RASHTROTTHANA MUDRANALAYA,** No. 8 & 8/1, Satya Pramoda Teertha, Building, 3rd Main, 9th Cross, Chamrajpet, BENGALURU – 560 018. Published At # 7/6, 4TH Cross, CC Road, Sarvagna Nagar, Cox Town, BENGALURU – 560 005. Editor: **B. V. PRAKASH (Bidare Prakash)**